# ದಲಿತ ಯುವತಿಯರ ಶಿಕ್ಷಣ, ವೃತ್ತಿ ಮತ್ತು ಮದುವೆ ವಿಚಾರಗಳ ಅನುಸಂಧಾನಗಳು

ವರದಿ

October 2021

# KANAJA

*Youth Research Cell*

*This research was made possible through a grant by*

AMERICAN JEWISH WORLD SERVICE

# ಕೃತಜ್ಞತೆಗಳು


## ಸಂಶೋಧನ ತಂಡ

ರಾಮಕ್ಕ ಆರ್

ಮಂಜುಳ ತೆಲಗಡೆ

ವಿಜಯಶಾಂತಿ ಮೂರ್ತಿ

ಡಾ.ಮಂಜುಳ ಉಲ್ಲಾಳ್

## ಮಾರ್ಗದರ್ಶನ

ಡಾ.ನಿತ್ಯಾ ವಾಸುದೇವನ್

ಅನಿತಾ ರತ್ನಂ

## ಬರವಣಿಗೆ

ರಾಮಕ್ಕ ಆರ್

ವಿಜಯಶಾಂತಿ

ಮಂಜುಳ ತೆಲಗಡೆ

ಶ್ರದ್ಧಾ ಎನ್‌ವಿ ಶರ್ಮ

ಡಾ.ಶಾಲಿನಿ.ಆರ್

## ಸಂಪಾದನೆ ಮತ್ತು ಅಂತಿಮ ವರದಿ ಸಿದ್ಧಪಡಿಸುವಿಕೆ

ಡಾ.ಶಾಲಿನಿ.ಆರ್, ರಾಮಕ್ಕ ಆರ್, ಶ್ರದ್ಧಾ ಎನ್‌ವಿ ಶರ್ಮ

## ಅನುವಾದ

ಡಾ. ಮಮತಾ ಕೆ.ಎನ್

## ಸಹಾಯ

ಡಾ.ಸವಿತಾ ಸುರೇಶ್ ಬಾಬು

## ಪರಿವಿಡಿ


ಅಧ್ಯಾಯ 1 .......... 6

ಪೀಠಿಕೆ: .......... 6

ಅಧ್ಯಯನಕ್ಕೆ ಪ್ರೇರಕಾಂಶಗಳು ಮತ್ತು ಅಗತ್ಯತೆ: .......... 8

ಅಧ್ಯಯನದ ಮಹತ್ವ: .......... 9

ಸಮಾಲೋಚನೆಯ ಪರಿಕಲ್ಪನೆ .......... 9

ಸಂಶೋಧನಾ ಪ್ರಶ್ನೆಗಳು .......... 10

ಅಧ್ಯಯನದ ಪ್ರಮುಖ ಉದ್ದೇಶಗಳು .......... 11

ಅಧ್ಯಯನದ ವಿಧಾನ .......... 11

ಸಂಶೋಧನಾ ಪ್ರದೇಶಗಳ ಮಹತ್ವ .......... 11

ಅಧ್ಯಾಯ 2 .......... 12

ಸಾಹಿತ್ಯ ಪರಾಮರ್ಶೆ .......... 12

ಅಧ್ಯಯನದ ವಿಷಯದ ಬಗ್ಗೆ ನಡೆದಿರುವ ಚರ್ಚೆಗಳು .......... 12

ಮಹಿಳಾ ಸಬಲೀಕರಣ .......... 14

ಆರ್ಥಿಕವಾಗಿ–ಸಾಮಾಜಿಕವಾಗಿ ಮಹಿಳಾ ಸ್ಥಾನ–ಮಾನ .......... 15

ದಲಿತ ಮಹಿಳೆಯರ ಸುತ್ತಾ .......... 17

ಕೆಲಸದ ಸ್ಥಳಗಳಲ್ಲಿ ದಲಿತ ಮಹಿಳೆ .......... 18

ಅಧ್ಯಾಯ 3 .......... 20

ಅಧ್ಯಯನದ ವಿಶ್ಲೇಷಣೆ ಮತ್ತು ವಿವರಣೆ .......... 20

ಶಿಕ್ಷಣದ ಅನುಸಂಧಾನಗಳು: ಕನಸುಗಳು, ಆಯ್ಕೆಗಳು ಮತ್ತು ಅವಕಾಶಗಳು .......... 20

ಕನಸುಗಳ ಮಿತಿ .......... 20

ದೇವದಾಸಿ ವ್ಯವಸ್ಥೆ ಮತ್ತು ಕೈತಪ್ಪಿಹೋಗುವ ಶಿಕ್ಷಣದ ಕಲ್ಪನೆಗಳು .......... 23

ಶಿಕ್ಷಣ ಮತ್ತು ವೃತ್ತಿ ಮಾರ್ಗದರ್ಶನದ ಕೊರತೆ .......... 24

ಉನ್ನತ ಶಿಕ್ಷಣಕ್ಕೆ ಪ್ರವೇಶ .......... 26

ಶೈಕ್ಷಕಣಿಕ ಸ್ಥಳಗಳಲ್ಲಿ ಜಾತಿ, ಲಿಂಗರಾಜಕಾರಣ .......... 27

ಶಾಲಾ ಕಾಲೇಜುಗಳಲ್ಲಿ ಶಿಕ್ಷಕರ/ಸ್ನೇಹಿತರ ಮನೋ ಪ್ರವೃತ್ತಿ .......... 31

ಕೃತಜ್ಞತೆಯ ಮನೋಭಾವ .......... 32

ಉನ್ನತ ಶಿಕ್ಷಣದಿಂದ ಹೊರಗುಳಿಯುವಿಕೆ ........ 32

ಶಿಕ್ಷಣದ ಅನುಸಂಧಾನಗಳು ........ 33

**ವೃತ್ತಿಯ ಆಯ್ಕೆ, ಅವಕಾಶ ಮತ್ತು ಅನುಸಂಧಾನಗಳು ........ 35**

ಶಿಕ್ಷಣದಿಂದ ವೃತ್ತಿ ವರೆಗಿನ ಹಾದಿ: ಅನಿಶ್ಚಿತತೆ ಮತ್ತು ರಾಜಿಗಳು ........ 35

ಕೆಲಸದ ಸ್ಥಳಗಳಲ್ಲಿ ತಾರತಮ್ಯ ........ 36

ವೃತ್ತಿಯಲ್ಲಿ ನಿರಂತರ ಜಾತಿ ಪಕ್ಷಪಾತ ........ 39

ವೃತ್ತಿಯ ಅನುಸಂಧಾನಗಳು ........ 39

**ಮದುವೆಯ ಕನಸುಗಳು, ವಾಸ್ತವಗಳು ಮತ್ತು ಸಂಧಾನ ........ 40**

ಸಂಗಾತಿಯ ಆಯ್ಕೆ ........ 41

ಕುಟುಂಬದ ಬಗ್ಗೆ ಕೃತಜ್ಞತೆ: ಶಿಕ್ಷಣದಿಂದ ಮದುವೆಯತ್ತ ಪ್ರಯಾಣ ........ 41

ದೇವದಾಸಿ ವ್ಯವಸ್ಥೆ ಮತ್ತು ವಿವಾಹದ ಕಲ್ಪನೆ ........ 43

ವಿವಾಹದ ಸಂದರ್ಭದಲ್ಲಿ ಲಿಂಗಾಧಾರಿತ ತಾರತಮ್ಯದ ಅನುಭವ ........ 44

ವಿರೋಧಾಭಾಸಗಳು ಮತ್ತು ವೈವಿಧ್ಯ ಧ್ವನಿಗಳು ........ 46

ಅಂತರ್ಜಾತಿ ವಿವಾಹ: ಆತಂಕಗಳು ಮತ್ತು ಪ್ರಶ್ನೆಗಳು ........ 46

ಮದುವೆಗೆ ಮುನ್ನ ಮತ್ತು ಮದುವೆಯೊಳಗಿನ ರಾಜಿಗಳು ........ 48

ಅಧೀನತೆ: ತಂದೆಯಿಂದ ಗಂಡನಿಗೆ ನಿಯಂತ್ರಣದ ಬದಲಾವಣೆ ........ 49

**ಅಧ್ಯಾಯ 4 ........ 50**

**ಉಪಸಂಹಾರ ........ 50**

**ಅಧ್ಯಯನದ ಕೆಲವು ಶಿಫಾರಸುಗಳು ........ 51**

**ಗ್ರಂಥಋಣ ........ 53**

# ಅಧ್ಯಾಯ 1

**ಪೀಠಿಕೆ:**

"ನಾನು ನಮ್ಮೂರಿನಿಂದ ನಮ್ಮ ಶಾಲೆಯವರೆಗೂ ನಮ್ಮೂರಿನ ಹುಡುಗಿಯರ ಶೂಗಳನ್ನು ತಲೆಯ ಮೇಲೆ ಹೊತ್ತು ನಡೆಯಬೇಕಿತ್ತು" ಎಂದು ಶೈಕ್ಷಣಿಕ ಪಯಣವನ್ನು ಮೆಲುಕು ಹಾಕುತ್ತಾ ಪ್ರತಿಸ್ಪಂದಕಿಯೊಬ್ಬರು ತಮ್ಮ ಅನುಭವವನ್ನು ಹಂಚಿಕೊಂಡಿದ್ದಾರೆ. ಈ ಮಾತು ಅವರ ಶಾಲಾದಿನಗಳಲ್ಲಿನ ಸಂಘರ್ಷಗಳನ್ನು ಎತ್ತಿತೋರಿಸುತ್ತದೆ. ದಲಿತ ಹೆಣ್ಣುಮಕ್ಕಳು ಶೈಕ್ಷಣಿಕವಾಗಿ ಹೆಚ್ಚು ಮುನ್ನಲೆಗೆ ಬಂದಿದ್ದಾರೆಂದು ಸಂತೋಷಿಸುವ ಇಂದಿನ ದಿನಗಳಲ್ಲಿಯೂ ಶಿಕ್ಷಣಪಡೆಯಲು ನಡೆಸುತ್ತಿರುವ ದೈನಂದಿನ ಹೋರಾಟಗಳು ಮತ್ತು ಪ್ರತಿನಿತ್ಯದ ಚಾಲೆಂಜ್‌ಗಳನ್ನು ಈ ಮಾತು ವಿವರಿಸುತ್ತದೆ. ಐತಿಹಾಸಿಕವಾಗಿಯೂ ಮಹಿಳೆ ಶಿಕ್ಷಣ ಪಡೆಯುವುದು ಅಷ್ಟುಸುಲಭದ ಮಾತಾಗಿರಲಿಲ್ಲ. ಅದರಲ್ಲು ದಲಿತ ಮಹಿಳೆಯರಿಗೆ ಇತರರಿಗಿಂತ ಹೆಚ್ಚಿನ ಸವಾಲುಗಳಿದ್ದವು. ಈ ಸವಾಲುಗಳು ಇಂದು ಕಡಿಮೆಯಾಗುವೆ ಎಂದೇನಿಲ್ಲ. ಅವುಗಳ ಸ್ವರೂಪ, ಆಕಾರ ಬದಲಾಗಿವೆಯಷ್ಟೆ. ಹಾಗಾಗಿ ಇದನ್ನು ಮತ್ತಷ್ಟು ವಿಸ್ತರಿಸಿ ನೋಡುವ ಪ್ರಯತ್ನವನ್ನು ಈ ಅಧ್ಯಯನದಲ್ಲಿ ಮಾಡಲಾಗಿದೆ.

ಭಾರತದಂತಹ ಸಾಮಾಜಿಕ ಅಸಮಾನತೆಯಿರುವ ದೇಶದಲ್ಲಿ ಜಾತಿ, ವರ್ಗ ಮತ್ತು ಲಿಂಗ ಮುಂತಾದವುಗಳ ತಾರತಮ್ಯ ಬೆಂಬಿಡದ ಬೇತಾಳವಾಗಿವೆ. ಸಾಮಾಜಿಕವಾಗಿ, ಶೈಕ್ಷಣಿವಾಗಿ, ಆರ್ಥಿಕವಾಗಿ ಹಿಂದುಳಿದಿರುವ ತಳ ಸಮುದಾಯಗಳು ತಾರತಮ್ಯ ಮತ್ತು ಅವಮಾನಗಳಿಗೆಗೊಳಗಾಗಿದ್ದಾರೆ ಹಾಗು ಅನುಭವಿಸಿದ್ದಾರೆ. ಅವರಿಗೆ ಘನತೆ ಮತ್ತು ಆತ್ಮಾಭಿಮಾನದ ಬದುಕು ಪ್ರಶ್ನೆಯಾಗಿದೆ. ಜಾತಿ ಮತ್ತು ಲಿಂಗದ ಕಾರಣಕ್ಕೆ ಹಲವು ಆಯಾಮಗಳಿಂದಲೂ ತುಳಿತಕ್ಕೊಳ್ಳಪಡುತ್ತಿರುವ ದಲಿತ ಯುವತಿಯರ ಸ್ಥಿತಿ–ಗತಿಯನ್ನು ಅವರ ಕನಸು, ಸಂಧಾನಗಳು, ಆಯ್ಕೆಗಳನ್ನು ಮತ್ತು ಸಮಾಕಾಲೀನ ಸವಾಲುಗಳನ್ನು ಮುಖಾಮುಖಿಗೊಳಿಸುವ ಪ್ರಯತ್ನವೂ ಮಾಡಲಾಗಿದೆ.

ಶಿಕ್ಷಣ ಪಡೆಯಲು ಬಂಡಾಯವೆದ್ದ, ಮದುವೆಗಾಗಿ ಶಿಕ್ಷಣವನ್ನು ಮತ್ತು ತಮ್ಮ ಕನಸ್ಸುಗಳನ್ನು ಮುಡುಪಿಟ್ಟ, ಕುಟುಂಬದ ಗೌರವಕ್ಕಾಗಿ ತಮ್ಮ ಆಸೆಗಳನ್ನೇ ಮರೆತ, ಸಾಮಾಜಿಕ ತಾರತಮ್ಯದಿಂದ ಅವಮಾನಗಳ ಸರಮಾಲೆಯ ಮೂಟೆ ಹೊತ್ತು ಸಾಗುತ್ತಿರುವ ದಲಿತ ಯುವತಿಯ ಅನುಭವ ಕಥನಗಳಿವೆ. ಕರ್ನಾಟಕದ ದಲಿತ ಯುವತಿಯರು ಇಷ್ಟು ದಿನಗಳ ಕಾಲ ತಮ್ಮಿಂದ ಕಿತ್ತುಕೊಳ್ಳಲಾದ ಅವಕಾಶಗಳನ್ನು ಪಡೆಯುವ ನಿಟ್ಟಿನಲ್ಲಿ ಜಾತಿ, ಪುರುಷಪ್ರಧಾನ ವ್ಯವಸ್ಥೆ ಮತ್ತು ವರ್ಗಗಳ ರಚನಾತ್ಮಕ ನಿರ್ಬಂಧಗಳನ್ನು ಎದುರಿಸುವ ವಿವಿಧ ರೀತಿಗಳನ್ನು ಈ ಅಧ್ಯಯನ ಗುರುತಿಸಿದೆ.

"ಮನೆ ಮತ್ತು ನಮ್ಮ ಸಮುದಾಯದಿಂದ ಹೊರಗಡೆ ಬಂದ ತಕ್ಷಣ ಅದು ಬೇರೆಯದೇ ಲೋಕ, ನಿತ್ಯ ಸಂಘರ್ಷ. ನಮ್ಮ ಬಣ್ಣ, ಭಾಷೆ, ಜಾತಿ ಮತ್ತು ಬಡತನಗಳ ಬಗೆಗೆ ನಮ್ಮೊಳಗೆ ಒಂದು ಕೀಳರಿಮೆ ಬೆಳೆದು ಅದು ಸದಾ ಸಾರ್ವಜನಿಕ ಸ್ಥಳಗಳಲ್ಲಿ ನಮ್ಮನ್ನು ಕುಬ್ಜಗೊಳಿಸಿತ್ತು. ನಾವು ನಮ್ಮದೇ ಜಾತಿಯ ಹುಡುಗಿಯರ ತಂಡದಲ್ಲಿ ಮಾತ್ರ ಮಾತನಾಡಿಕೊಳ್ಳುತ್ತಿದ್ದೆವು. ನಾವಿರಬೇಕಾದದ್ದೆ ಹೀಗೆನೋ ಎಂಬ ಕಲ್ಪನೆ ಬದುಕಿನ ಭಾಗವೆ ಆಗಿ ಹೋಗಿತ್ತು. ಯಾಕೆಂದ್ರೆ ಊರಲ್ಲಿ ಅಪ್ಪ ಅಮ್ಮ ನಮ್ಮ ಜನಗಳೆಲ್ಲಾ ಹಾಗೆ ಇರುತ್ತಿದ್ದರು. ಶಾಲೆ ಕಾಲೇಜಿನಲ್ಲಿ ಜಾತಿಯ ಕಾರಣಕ್ಕೆ, ಅದರಲ್ಲೂ ಹುಡುಗಿಯಾಗಿರುವ ಕಾರಣಕ್ಕೆ ಹಾಗೂ ಬಡತನ, ಭಾಷೆ ಮತ್ತು ಗ್ರಾಮೀಣ ಹಿನ್ನಲೆ ಇರುವ ಕಾರಣಕ್ಕೆ ಪ್ರತಿನಿತ್ಯ ಅವಮಾನಗಳು ಕಟ್ಟಿಟ್ಟ ಬುತ್ತಿ" ಎಂದು ಪ್ರತಿಸ್ಪಂದಕಿಯೊಬ್ಬರು ಹೇಳಿದ್ದಾರೆ.

ಅಸ್ಮಿತೆಗಾಗಿ ಪ್ರತಿನಿತ್ಯ ಹೋರಾಟಮಾಡುತ್ತಿರುವ ದಲಿತ ಯುವತಿಯರ ಸಂಘರ್ಷಗಳನ್ನು ಬೇರೆ ನೆಲೆಯಲ್ಲಿ ನೋಡುವ ಪ್ರಯತ್ನಮಾಡಲಾಗಿದೆ. ಅವರ ಧ್ವನಿಗಳು ಮತ್ತು ಅನುಭವಗಳ ಮೂಲಕ ಶಿಕ್ಷಣ, ಉದ್ಯೋಗ, ಮದುವೆ ಮತ್ತು ಸಾಮಾಜಿಕ ಸ್ಥಾನಮಾನಗಳನ್ನು ತಿಳಿಯುವ ಪ್ರಯತ್ನಮಾಡಲಾಗಿದೆ. ಅದರಂತೆ ಸಂವಾದಿಯೊಬ್ಬರು ಹೇಳುವಂತೆ "ನನ್ನನ್ನು ಕೆಲಸಕ್ಕೆ ಸೇರಿದ ದಿನದಿಂದಲೇ ಕಳ್ಳಿಯ ಹಾಗೆ ನೋಡುತ್ತಿದ್ದರು. ನಮ್ಮ ಆಫೀಸಿನಲ್ಲಿ ಏನೇ ಕಳ್ಳತನವಾದರೂ ನನ್ನನ್ನೆ ಮೊದಲು ಕೇಳುತಿದ್ರು. ಎಲ್ಲೋ ಸಿಕ್ಕಿದ ಮೇಲೆ ಸರಿಯಾಗಿ ಮಾತಾನಾಡಿಸುತ್ತಿದ್ದರು. ಇನ್ನೂ ನಾವು ಅವರಿಗಿಂತ ಒಳ್ಳೆಯ ಬಟ್ಟೆಗಳನ್ನೊ ಅಥವಾ ಒಡವೆಗಳನ್ನೊ ಧರಿಸಿದ್ರೆ, ಕಾಲ ಕೆಟ್ಟೋಯ್ತು, ಹೇಗಿದ್ದವರು, ಹೇಗಾದ್ರು ಅಂತಿದ್ರು. ನೀವು ಕಾರಲ್ಲಿ ಬಂದ್ರಾ ಅನ್ನೋದ್ರಿಂದ ಹಿಡಿದು ನಮ್ಮೆಲ್ಲಾ ಚಲನವಲನಗಳು ಅವರಿಗೆ ಮಾನಸಿಕ ಗುಲಾಮಗಿರಿಯಲ್ಲಿದ್ದರೆ ಮಾತ್ರ ಖುಷಿಕೊಡುತ್ತಿತ್ತು. ಇಲ್ಲವಾದಲ್ಲಿ ಮಾನಸಿಕವಾಗಿ ಕಿರಿಕಿರಿ ಮಾಡುತ್ತಾರೆ. ಒಂದು ಸುಮ್ಮನಾಗಿ ಬಿಡುವುದು ಅಥವಾ ನಮ್ಮ ಸ್ವಾಭಿಮಾನಕ್ಕಾಗಿ ಜಗಳವಾಡ್ತಾ ಇರೋದು. ಮಾನಸಿಕ ಸಂಘರ್ಷ, ಸ್ಟ್ರೆಸ್ ಬಹಳ ಇದೆ. ಕೆಲಸ ಅಥವಾ ವೃತ್ತಿ ಎಂದು ಬಂದಾಗ ಅವುಗಳ ಕನಸು ತುಂಬಾ ಮಿತಿಯಲ್ಲಿವೆ".

ಹೀಗೆ ತಮ್ಮ ಅನುಭವಗಳನ್ನು ಹಂಚಿಕೊಂಡಿರುವ ಸುಮಾರು ದಲಿತ ಯುವತಿಯರ ಬದಕಿನ ದಿನಿತ್ಯದ ಸಂಘರ್ಷಗಳನ್ನು ಪ್ರಸ್ತುತ ಅಧ್ಯಯನದಲ್ಲಿ ತರಲಾಗಿದೆ. ಕೋಲಾರ, ಬೆಂಗಳೂರು, ವಿಜಯಪುರ, ದಕ್ಷಿಣ ಕನ್ನಡದ 80 ದಲಿತ ಯುವತಿಯರ ಶಿಕ್ಷಣ, ವೃತ್ತಿ ಮತ್ತು ಅವರ ಮದುವೆಗೆ ಸಂಬಂಧಿಸಿದ ಸಮಗ್ರ ವಿಚಾರವನ್ನು ಸಮಕಾಲೀನ ಸಂದರ್ಭದ ಹಿನ್ನಲೆಯಲ್ಲಿ ಅರ್ಥ ಮಾಡಿಕೊಳ್ಳುವುದು, ವಿಶ್ಲೇಷಿಸುವುದು ಮತ್ತು ವಿಮರ್ಶಿಸುವ ಪ್ರಯತ್ನ ಮಾಡಲಾಗಿದೆ. ಇದರಿಂದ ಯುವ ದಲಿತ ಮಹಿಳೆಯರ ಆಸೆಗಳು, ಆತಂಕಗಳು, ಭಯ, ಅನುಮಾನಗಳು ಮತ್ತು ಮದುವೆಯ ಬಗ್ಗೆ ಭರವಸೆಗಳನ್ನು ಸೂಕ್ಷ್ಮವಾಗಿ ಗಮನಿಸಲಾಗಿದೆ.

## ಅಧ್ಯಯನಕ್ಕೆ ಪ್ರೇರಕಾಂಶಗಳು ಮತ್ತು ಅಗತ್ಯತೆ:

ಪ್ರಸ್ತುತದ ಅಧ್ಯಯನಕ್ಕೆ ಮುಖ್ಯವಾದ ಪ್ರೇರಕಾಂಶಗಳೆಂದರೆ ದಲಿತ ಮತ್ತು ದಲಿತ ಮಹಿಳೆಯರ ವಿಚಾರಗಳನ್ನು ಹಲವಾರು ಸಂಶೋಧಕರು ಅಧ್ಯಯನ ಮಾಡಿದ್ದಾರೆ. ಅವರೆಲ್ಲರೂ ಸಹ ಆಯಕಾಲಘಟ್ಟದ ಪರಿಸ್ಥಿತಿಯನ್ನು ತಮ್ಮ ಅಧ್ಯಯನಗಳಲ್ಲಿ ಉಲ್ಲೇಖಿಸಿದ್ದಾರೆ. ಈ ದಲಿತ ಹೆಣ್ಣು ಸಮಾಜ ಎರಡನೆ ದರ್ಜೆಯ ಸಾಮಾಜಿಕ ಗುಂಪು ಎಂಬುದು ನಮ್ಮೆಲ್ಲರ ಅನುಮಾನಿತ ಸತ್ಯ ಮತ್ತು ಸಾರ್ವತ್ರಿಕವಾದಂತಹ ವಿಚಾರ. ಪ್ರಸ್ತುತದಲ್ಲಿ ಸಮಾಜೋ–ಸಾಂಸ್ಥಿಕ ಮತ್ತು ಆರ್ಥಿಕ ವಿಚಾರಗಳಾದ ಶಿಕ್ಷಣ, ವೃತ್ತಿ ಮತ್ತು ಮದುವೆಯಂತಹ ವಿಷಯಗಳು ಮತ್ತು ದಲಿತ ಯುವತಿಯರ ಅನುಭವ, ದೃಷ್ಟಿಕೋನ ಮತ್ತು ಭವಿಷ್ಯತ್‌ನಲ್ಲಿ ನೋಡುವ ಬದಲಾವಣೆಗಳ ಸಮಗ್ರ ಚಿತ್ರಣವನ್ನು ಅಧ್ಯಯನ ಮಾಡುವ ಉದ್ದೇಶದಿಂದ ಈ ಅಧ್ಯಯನವನ್ನು ಬಹುಶಿಸ್ತಿನ ನೆಲೆಯಲ್ಲಿ ಅರ್ಥಮಾಡಿಕೊಳ್ಳುವುದಾಗಿದೆ.

ಪ್ರಸ್ತುತದ ಕಾಲಘಟ್ಟದಲ್ಲಿ ದಲಿತ ಯುವತಿಯವರು ಯಾವ ರೀತಿ ತಮ್ಮ ಜೀವನವನ್ನು ಕಟ್ಟಿಕೊಂಡಿದ್ದಾರೆ ಎಂಬುದನ್ನು ವಿಶ್ಲೇಷಣಾತ್ಮಕವಾಗಿ ನೋಡುವ ಅಗತ್ಯವಿರುವುದರಿಂದ ಈ ಅಧ್ಯಯನದ ವಿಷಯದ ಆಯ್ಕೆಗೆ ಪ್ರೇರಣೆಯಾಗಿದೆ. ಸಂಶೋಧಕಿಯರು ಸಾಮಾಜಿಕ ಅಭಿವೃದ್ಧಿ ವಲಯದ ಸಂಸ್ಥೆಯ ಕ್ಷೇತ್ರಕಾರ್ಯದಲ್ಲಿ ತೊಡಗಿಕೊಂಡಿದ್ದಾಗ ದಲಿತ ಯುವತಿಯರ ಕುರಿತು ದೀರ್ಘ ಚರ್ಚೆಗಳನ್ನು ಮಾಡುವುದು ಹಾಗೂ ತಮ್ಮ ತಮ್ಮ ಅನುಭವಗಳನ್ನು ಪರಸ್ಪರ ಹಂಚಿಕೊಂಡು ಚರ್ಚಿಸುವ ಮೂಲಕ ಅಧ್ಯಯನವನ್ನು ಕೈಗೊಳ್ಳಲು ಪ್ರೇರಣೆಯನ್ನು ಪಡೆದುಕೊಳ್ಳಲಾಗಿದೆ.

ಸಂಸ್ಥೆಯ ಬೆಂಬಲ ಮತ್ತು ಪ್ರೋತ್ಸಾಹದ ಜೊತೆಗೆ ಕೆಲವು ದಲಿತ ನಾಯಕಿ/ನಾಯಕರ, ಲೇಖಕಿಯರ ಗುಂಪು ಮತ್ತು ಹಲವು ಸಂಘಟನೆಗಳ ಒಡನಾಟದ ಜೊತೆ ಚರ್ಚೆ ಮತ್ತು ದಲಿತ ಯುವತಿಯರ ಭೇಟಿ ಮತ್ತು ಆ ವಿಚಾರದ ಬಗ್ಗೆ ತಿಳಿಯುವ ಹಂಬಲ ಹೆಚ್ಚಾಯಿತು. ಒಟ್ಟಾರೆ ದಲಿತ ಯುವತಿಯರ ವಿಚಾರದಲ್ಲಿ ಅವರ ಶಿಕ್ಷಣ, ವೃತ್ತಿ ಮತ್ತು ಮದುವೆಗಳ ಮಹತ್ವದ ಹಂತಗಳ ಹಿನ್ನಲೆಯೇನು? ಸಮುದಾಯದ ಪ್ರತಿಕ್ರಿಯೆ ಮತ್ತು ಬೆಂಬಲ, ಕುಟುಂಬದ ಸಹಕಾರ ಮತ್ತು ತನ್ನೊಳಗಿರುವ ಕನಸಿನ ಶಿಕ್ಷಣ, ವೃತ್ತಿ ಮತ್ತು ತಾನೇ ಆಯ್ಕೆ ಮಾಡಿಕೊಳ್ಳುವ ಸ್ವಾತಂತ್ರ್ಯದ ಮದುವೆ ಮುಂತಾದ ವಿಷಯಗಳನ್ನು ತಿಳಿದುಕೊಳ್ಳುವ ಹಂಬಲದೊಂದಿಗೆ ಈ ಅಧ್ಯಯನವನ್ನು ಕೈಗೊಳ್ಳಲಾಗಿದೆ.

ಇದರೊಂದಿಗೆ ಈ ಅಧ್ಯಯನವು ಹೇಗೆ ಇತರೆ ಅಧ್ಯಯನಗಳಿಗಿಂತ ಭಿನ್ನವೆಂದರೆ ವೃತ್ತಿನಿರತ ಸಂಶೋಧಕರು ಈ ತರದ ಅಧ್ಯಯನಗಳನ್ನು ಶೈಕ್ಷಣಿಕ ಚೌಕಟ್ಟಿನೊಳಗೆ ಮತ್ತು ನೀತಿ ನಿರೂಪಣೆ ಮಾಡುವಂತಹ

ಸಾಂಸ್ಥಿಕ ವ್ಯಾಪ್ತಿಯಲ್ಲಿ ಕೈಗೊಳ್ಳುತ್ತಾರೆ. ಇಲ್ಲಿ ಅಧ್ಯಯನಕಾರರು ತಮ್ಮ ವಯಕ್ತಿಕ ಅನುಭವ ಮತ್ತು ಆ ಸಮುದಾಯದೊಟ್ಟಿಗೆ ನಿರಂತರ ಒಡನಾಟದ ಜೊತೆಗೆ ಅವರೊಟ್ಟಿಗೆ ಕೆಲಸ ಮಾಡಿದ ಅನುಭವಗಳು ಭಿನ್ನವಾಗಿ ಸತ್ಯವನ್ನು ಪ್ರತಿಪಾದಿಸುವ ಕೆಲಸ ಇದಾಗಿದೆ. ಈ ಅಧ್ಯಯನದಲ್ಲಿ ಖಂಡಿತ ಕೆಲವು ತಾಂತ್ರಿಕ ದೃಷ್ಟಿಕೋನದ ಮಿತಿಗಳಿದ್ದರೂ ದಲಿತ ಯುವತಿಯರ ಮತ್ತು ಯುವ ದೇವದಾಸಿಯರ ಜ್ವಲಂತ ಸಮಸ್ಯೆ ಮತ್ತು ಸವಾಲುಗಳ ಅನುಭವಗಳನ್ನು ಬೆಳಕಿಗೆ ತರಲು ಸಹಕಾರಿಯಾಗಿದೆ.

## ಅಧ್ಯಯನದ ಮಹತ್ವ:

ಪ್ರಸ್ತುತದ ಅಧ್ಯಯನವು ದಲಿತ ಯುವತಿಯರ ಸಮಗ್ರ ಸ್ಥಿತಿಯನ್ನು ಮತ್ತು ಪ್ರಚಲಿತದಲ್ಲಿರುವ ಸಮಸ್ಯೆಗಳೇನು, ಅವರ ಬದುಕು, ಅವರ ಮಕ್ಕಳ ಭವಿಷ್ಯ, ಸಾಮಾಜಿಕ ಸ್ಥಾನಮಾನವೇನು ಎಂಬುದನ್ನು ತಿಳಿಯುವಲ್ಲಿ ತುಂಬಾ ಸಹಕಾರಿಯಾಗುತ್ತದೆ. ದಲಿತ ಸಮುದಾಯದ ಬಹುಸಂಖ್ಯೆಯಲ್ಲಿರುವ ಯುವತಿಯರ ಅಭಿವೃದ್ಧಿಗೆ ಅವರ ವಯಕ್ತಿಕ ಹಿತಾಸಕ್ತಿಯನ್ನು ಒಳಗೊಳ್ಳುವಂತಹ ಕಾರ್ಯಕ್ರಮಗಳನ್ನು ಅರಿಯುವುದು ಹಾಗೂ ಶಿಕ್ಷಣ, ವೃತ್ತಿ ಮತ್ತು ಮದುವೆಗೆ ಸಂಬಂಧಿಸಿದ ಪ್ರತಿನಿತ್ಯದ ಸಂಘರ್ಷಗಳು ಹಾಗೂ ಅನುಸಂಧಾನಗಳನ್ನು ಅರಿಯುವುದು ಈ ಅಧ್ಯಯನದ ಮಹತ್ವದ ಅಂಶವಾಗಿದೆ. ದಲಿತ ಮಹಿಳೆಯರ ಪರವಿರುವ ಸರ್ಕಾರದ ಕಾಯ್ದೆ ಮತ್ತು ದೋರಣೆಗಳೇನು? ಸರ್ಕಾರದ ಪಾತ್ರ ಏನಿದೆ ಮತ್ತು ಎಷ್ಟಿದೆ? ಎಂಬುದನ್ನು ಸಹ ತಿಳಿಯುವಲ್ಲಿ ತುಂಬಾ ಸಹಕಾರಿಯಾಗುತ್ತದೆ.

ಸರ್ಕಾರ ಮತ್ತು ಸಂಘ–ಸಂಸ್ಥೆಗಳು ರಾಜ್ಯವ್ಯಾಪ್ತಿಯಲ್ಲಿ ದಲಿತ ಮಹಿಳೆಯರ ಕುರಿತ ಸಮಗ್ರ ಅಧ್ಯಯನಕ್ಕೆ ಮತ್ತು ಕಾರ್ಯಕ್ರಮ ರೂಪಿಸುವಲ್ಲಿ ಅನುಕೂಲವಾಗುತ್ತದೆ. ಇದರ ಮುಂದುವರಿಕೆಯ ಚರ್ಚೆ, ಅಧ್ಯಯನ ಮತ್ತು ಸಮಸ್ಯೆಯನ್ನು ಅರಿತು ಬಗೆಹರಿಸುವ ಕ್ರಮವನ್ನು ಸಹ ಮುಂದೆ ಮಾಡಬೇಕಾದರೆ ಅಧ್ಯಯನವು ಆಕರ ಸೂಚಿಯಾಗಬಹುದು.

## ಸಮಾಲೋಚನೆಯ ಪರಿಕಲ್ಪನೆ

ಪೈಕ್ (2018) ಸ್ತ್ರೀವಾದಿ ಬೌದ್ಧಿಕತೆಯು ವಸ್ತುನಿಷ್ಠವಾಗಿ ದಲಿತ ಮಹಿಳೆಯರ ಸಂಕೀರ್ಣತೆಗಳನ್ನು ಗುರುತಿಸುವ ಮಹತ್ವವನ್ನು ಸೂಚಿಸುತ್ತದೆ. ದೇಶದ ವಿವಿಧ ಭಾಗಗಳಲ್ಲಿ ವಿವಿಧ ದಲಿತ ಮಹಿಳೆಯರ ಸಾಧನೆ ಯಾವುದು ಎಂಬುದನ್ನು ವಿವರಿಸುವಲ್ಲಿ, ಮಹಿಳೆಯರು "ವಿರೋಧಿಸುವ, ಒಗ್ಗಟ್ಟನ್ನು ನಿರ್ಮಿಸುವ, ಪಿತೃಪ್ರಭುತ್ವದ ಜೊತೆ ಮಾತುಕತೆಗಳಲ್ಲಿ ತೊಡಗಿಸಿಕೊಳ್ಳುವ ಮತ್ತು ಪರ್ಯಾಯ ರಾಜಕಾರಣವನ್ನು

ಉಂಟುಮಾಡುವ ಮಾರ್ಗಗಳನ್ನು ಅವರು ಎತ್ತಿ ತೋರಿಸುತ್ತಾರೆ". ಇದು ದಲಿತ ಮಹಿಳೆಯರ ಬಲಿಪಶುತನದ ಚಿತ್ರಣಕ್ಕೆ ಪರ್ಯಾಯವಾದ ಬೌದ್ಧಿಕತೆಯ ಸಾಧ್ಯತೆಯನ್ನು ತೋರಿಸಿದೆ. ಇದಲ್ಲದೆ, ದಲಿತ್ ವುಮೆನ್ ಆಸ್ ದ ವ್ಯಾನ್ಗಾರ್ಡ್ ಆಫ್ ಪಾಲಿಟಿಕ್ಸ್, (ಕಪಾಡಿಯ 2017) ಪುಸ್ತಕದಲ್ಲಿ ತೊಡಗಿಸಿಕೊಂಡಿದ್ದಾರೆ ಎಂದು ತೋರಿಸಲಾದ ಮಾತುಕತೆಯ ವಿಧಾನಗಳ ಸಮಗ್ರ ವಿವರಣೆಯನ್ನು ನೀಡುತ್ತದೆ. ಮಹಿಳೆಯರು ನವ ಪಿತೃಪ್ರಭುತ್ವಕ್ಕೆ ಹೇಗೆ ಸವಾಲೊಡ್ಡಿದ್ದಾರೆ ಮತ್ತು ಜಾತಿ ಭಿನ್ನತೆಗಳ ಸ್ವಾಭಾವೀಕರಣ, ಭಾವನಾತ್ಮಕ ಬೆಂಬಲವನ್ನು ಕಂಡುಕೊಳ್ಳುವುದು ಮತ್ತು ವಿಶಾಲವಾದ ನೆಟ್‌ವರ್ಕ್‌ಗಳಲ್ಲಿ ಸಜ್ಜುಗೊಳಿಸುವುದು ಹೇಗೆ ಎಂದು ಅವರು ಪಟ್ಟಿಮಾಡಿದ್ದಾರೆ.

ಯುವ ದಲಿತ ಮಹಿಳೆಯರ ಮೇಲೆ ಶಿಕ್ಷಣ, ಮದುವೆ ಮತ್ತು ಅವರ ವೃತ್ತಿಜೀವನದ ಅಂತರ್ ಸಂಬಂಧಗಳನ್ನು ಬಿಚ್ಚಿಡಲು ನಾವು ಪ್ರಯತ್ನಿಸಿದ್ದೇವೆ, ಜೊತೆಗೆ ಅನುಸಂಧಾನಗಳ ಮೂಲಕ ಅವರು ಅವರ ಕನಸುಗಳನ್ನು, ವ್ಯಕ್ತಿಗಳನ್ನು, ಸಂಸ್ಥೆಗಳನ್ನು ಮತ್ತು ನಿರೀಕ್ಷೆಗಳನ್ನು ಹೇಗೆ ನಿರ್ವಹಿಸುತ್ತಾರೆ ಎಂಬುದನ್ನು ಬಿಚ್ಚಿಡಲು ಪ್ರಯತ್ನಿಸಲಾಗಿದೆ.

## ಸಂಶೋಧನಾ ಪ್ರಶ್ನೆಗಳು

ಪ್ರಸ್ತುತ ಅಧ್ಯಯನದಲ್ಲಿ ವ್ಯವಸ್ಥೆಯ ಕಟ್ಟಕಡೆಯ ಸಮುದಾಯವಾದ ದಲಿತ ಮತ್ತು ದಲಿತ ಮಹಿಳೆಯರ ಸಮಾಜೋ–ಆರ್ಥಿಕ ಸಮಗ್ರ ಸ್ಥಿತಿಗತಿಗಳನ್ನು ಅಧ್ಯಯನ ಮಾಡುವ ಉದ್ದೇಶದಿಂದ ಕೆಲವು ವಾಸ್ತವಿಕ ಪ್ರಶ್ನೆಗಳನ್ನು ಎತ್ತಲಾಗಿದೆ. ಅವುಗಳಲ್ಲಿ ಪ್ರಮುಖವಾದವು:

- ದಲಿತ ಯುವತಿಯರಲ್ಲಿ ಶಿಕ್ಷಣ, ವೃತ್ತಿ ಮತ್ತು ಮದುವೆ ಕುರಿತ ವಿಚಾರಗಳಲ್ಲಿ ಅವರ ಸಮಗ್ರ ಅನುಭವಗಳೇನು? ಮತ್ತು ಅವುಗಳಿಗೆ ನಡೆದಿರುವ ಸಂಧಾನ ಪ್ರಕ್ರಿಯೆಗಳೇನು?
- ಅವರ ಸಾಮಾಜಿಕ ಅಂಶಗಳಾದ ಜಾತಿ ಮತ್ತು ಉಪಜಾತಿಯಲ್ಲಿನ ಸ್ಥಾನಮಾನ, ಆರೋಗ್ಯ, ಸಾಮಾಜಿಕ ಗೌರವ ಮತ್ತು ಅಂತಸ್ತು ಮುಂತಾದ ವಿಷಯಗಳ ಸ್ಥಿತಿಗತಿಗಳೇನು?
- ಇವರ ಪ್ರಸ್ತುತ ಕೆಲಸ ಮತ್ತು ವರಮಾನ, ಆಸ್ತಿ ಮತ್ತು ಆರ್ಥಿಕ ಹಿನ್ನಲೆಯಿಂದ ಇವರ ಸಾಮಾಜಿಕ ಜೀವನದ ಮೇಲಿನ ಪ್ರಭಾವ ಮತ್ತು ಇಂದು ಅವರು ಯಾವ ಸ್ಥಿತಿಯಲ್ಲಿದ್ದಾರೆ?

ಈ ಮೇಲೆ ಚರ್ಚಿಸಿರುವ ಪ್ರಶ್ನೆಗಳಿಗೆ ಪೂರಕವಾಗಿ ಇಲ್ಲಿ ಉದ್ದೇಶಗಳನ್ನು ಈ ಕೆಳಗಿನಂತೆ ನೋಡಬಹುದು.

## ಅಧ್ಯಯನದ ಪ್ರಮುಖ ಉದ್ದೇಶಗಳು

1. ದಲಿತ ಯುವತಿಯರ ಮನೋ–ಸಾಮಾಜಿಕ, ಆರ್ಥಿಕ ಮತ್ತು ಸಾಂಸ್ಕೃತಿಕ ಅನುಭವಗಳನ್ನು ಗುರುತಿಸುವುದು.
2. ಶಿಕ್ಷಣ, ವೃತ್ತಿ ಮತ್ತು ಮದುವೆಗಳಿಗೆ ಸಂಬಂಧಿಸಿದಂತೆ ದಲಿತ ಯುವತಿಯರು ಎದುರಿಸಿದ ಸವಾಲುಗಳನ್ನು ಮತ್ತು ಅನುಸಂಧಾನಗಳನ್ನು ತಿಳಿಯುವುದು.
3. ದಲಿತ ಯುವತಿಯರ ವಯಸ್ಸು, ಜಾತಿ, ವರ್ಗ ಮತ್ತು ಸಾಮಾಜಿಕ ಲಿಂಗ(ಜೆಂಡರ್)ದ ಬಹುಶಿಸ್ತೀಯ ಆಯಾಮಗಳನ್ನು ವಿಮರ್ಶಾತ್ಮಕವಾಗಿ ವಿಶ್ಲೇಷಣೆ ಮಾಡುವುದು.

## ಅಧ್ಯಯನದ ವಿಧಾನ

ಈ ಅಧ್ಯಯನದ ಉದ್ದೇಶಕ್ಕಾಗಿ ಕರ್ನಾಟಕ ರಾಜ್ಯದ ಕೋಲಾರ, ಬೆಂಗಳೂರು, ದಕ್ಷಿಣಕನ್ನಡ, ವಿಜಯಪುರ ಜಿಲ್ಲೆಗಳ ವಿವಿಧ ಊರುಗಳಿಂದ 25 ರಿಂದ 35 ವಯಸ್ಸಿನ 80 ದಲಿತ ಯುವತಿಯರನ್ನು ಪ್ರಶ್ನಾವಳಿ ಮೂಲಕ ಸಂದರ್ಶನಗಳನ್ನು ಮಾಡಿ ಮಾಹಿತಿ ಕಲೆಯಾಕಲಾಗಿದೆ. ಕೆಲವು ಪರಿಮಾಣಾತ್ಮಕ ಮತ್ತು ಗುಣಾತ್ಮಕ ವಿಧಾನಗಳಲ್ಲಿ ಮತ್ತು ವಿವರಣಾತ್ಮಕವಾಗಿಯೂ ಹಾಗೂ ಅಧ್ಯಯನದ ತಾತ್ವಿಕ ಅಥವಾ ಸೈದ್ಧಾಂತಿಕ ಚೌಕಟ್ಟನ್ನು ಹಾಕುವುದರ ಮೂಲಕ ಅಧ್ಯಯನವನ್ನು ಮಂಡಿಸಲಾಗಿದೆ. ವ್ಯವಸ್ಥೆಯಲ್ಲಿನ ರಚನಾತ್ಮಕ ನಿರ್ಬಂಧಗಳನ್ನು ಪತ್ತೆ ಮಾಡುತ್ತಲೇ ಈ ಅಧ್ಯಯನವು, ಮಹಿಳೆಯರು ಹೇಗೆ ತಮ್ಮ ಹಕ್ಕುಗಳನ್ನು ಪ್ರತಿಪಾದಿಸುತ್ತಾರೆ ಎನ್ನುವುದರ ಬಗ್ಗೆಯೂ ಗಮನ ನೀಡಿದೆ.

ವಿಷಯಕ್ಕೆ ಸಂಬಂಧಿಸಿದಂತೆ ನೇರವಾಗಿ ಪ್ರಾಥಮಿಕ ಮೂಲದಿಂದ ದಲಿತ ಯುವತಿಯರನ್ನು ಸಂದರ್ಶನ, ಅವಲೋಕನ, ಪ್ರಶ್ನಾವಳಿ, ಗುಂಪು ಚರ್ಚೆ ಆಧಾರದ ಮೂಲಕ ಈಗಾಗಲೇ ನಡೆದಿರುವ ಸಂಶೋಧನ ಪ್ರಬಂಧಗಳು, ಲೇಖನಗಳು, ಕ್ರಿಯಾ ಸಂಶೊಧನಾ ವರದಿಗಳ ಮಾಹಿತಿಯನ್ನು ಅಧ್ಯಯನ ಮಾಡಲಾಗಿದೆ. ಅಧ್ಯಯನಕ್ಕೆ ಸಂಬಂಧಿಸಿದಂತೆ ಪ್ರತ್ಯಕ್ಷ ಇಲ್ಲವೆ ಪರೋಕ್ಷವಾಗಿ ಸಂಬಂಧವಿರುವ ವಿಚಾರಗಳನ್ನು ತಜ್ಞರೊಡನೆ ಚರ್ಚಿಸಲಾಗಿದೆ. ಪ್ರಸ್ತುತದ ಅಧ್ಯಯನದ ವಿಶ್ಲೇಷಣೆಯನ್ನು ಸರಳ ಅಂಕಿ ಅಂಶಗಳ ಸಹಾಯದಿಂದ ಶೇಕಡವಾರು, ಕೋಷ್ಟಕಗಳಂತಹ ವಿಧಾನಗಳನ್ನು ಬಳಸಿ ವೈಜ್ಞಾನಿಕವಾಗಿ ಅಧ್ಯಯನವನ್ನು ಕೈಗೊಳ್ಳಲಾಗಿದೆ.

## ಸಂಶೋಧನಾ ಪ್ರದೇಶಗಳ ಮಹತ್ವ

ಕೋಲಾರ, ವಿಜಯಪುರ, ಬೆಂಗಳೂರು, ದಕ್ಷಿಣಕನ್ನಡ ಜಿಲ್ಲೆಗಳಲ್ಲಿ ಅಧ್ಯಯನ ಮಾಡಲಾಗಿದೆ. ಹಲವಾರು ಕಾರಣಗಳಿಗಾಗಿ ನಮ್ಮ ಸಂಶೋಧನಾ ಉದ್ದೇಶಗಳ ಅಡಿಯಲ್ಲಿ ಅಧ್ಯಯನ ಮಾಡಲು ಕೋಲಾರ ಒಂದು ಪ್ರಮುಖ ಪ್ರದೇಶವಾಗಿದೆ. ಇದು ಕರ್ನಾಟಕದಲ್ಲಿ ಅತಿ ಹೆಚ್ಚು ದಲಿತ ಜನಸಂಖ್ಯೆಯನ್ನು ಹೊಂದಿರುವ ಜಿಲ್ಲೆಯಾಗಿದ್ದು, ರಾಜ್ಯದ ಹಿಂದುಳಿದ ಜಿಲ್ಲೆಗಳಲ್ಲಿ ಒಂದಾಗಿದೆ. ನಿರ್ದಿಷ್ಟ ಸಾಮಾಜಿಕ–ಆರ್ಥಿಕ ಸಾಂಸ್ಕೃತಿಕ ಹಿನ್ನೆಲೆ ಹೊಂದಿರುವ ಬಿಜಾಪುರ, ದಬ್ಬಾಳಿಕೆಯ ದೇವದಾಸಿ ವ್ಯವಸ್ಥೆಯ ಇತಿಹಾಸ, ಶತಮಾನಗಳಿಂದ ಮತ್ತು ಇತ್ತೀಚಿನ ದಶಕಗಳಲ್ಲಿ ಈ ಪ್ರದೇಶದಲ್ಲಿ ಹೆಚ್ಚಿನ ವಲಸೆಯ ನಿದರ್ಶನಗಳಿವೆ. ಈ ಕಾರಣಕ್ಕೆ ಇದು ನಮ್ಮ ಅಧ್ಯಯನದಲ್ಲಿ ಮಹತ್ವ ಪಡೆದಿದೆ. ಬೆಂಗಳೂರು, ರಾಜ್ಯದ ರಾಜಧಾನಿ, ತ್ವರಿತವಾಗಿ ವಿಸ್ತರಿಸುತ್ತಿರುವ ಮಹಾನಗರವು ಜಾತಿ ಸಮಸ್ಯೆಗಳಂತಾ ಸಂಶೋಧನೆಗೆ ಒಂದು ಕುತೂಹಲಕಾರಿ ಸ್ಥಳವಾಗಿದೆ. ವಿಶೇಷವಾಗಿ ದಲಿತ ಮಹಿಳೆಯರ ಸಮಸ್ಯೆಗಳು ಅಸಂಖ್ಯಾತ ನಗರ ಸಮಸ್ಯೆಗಳ ಮಧ್ಯೆ ನಿರಂತರವಾಗಿ ಅಸ್ಥಿರಗೊಳ್ಳುತ್ತಿರುತ್ತವೆ. ಸಂಶೋಧನೆಯ ನಾಲ್ಕನೇ ಪ್ರದೇಶವಾದ ಮಂಗಳೂರು ನಗರ, ಸುತ್ತಮುತ್ತಲಿನ ಅರೆ ನಗರ ಮತ್ತು ಗ್ರಾಮೀಣ ಪ್ರದೇಶಗಳಲ್ಲಿ ಸಾಮಾಜಿಕ ಹಾಗು ಸಾಂಸ್ಕೃತಿಕವಾಗಿ ತೀವ್ರಗತಿಯ ಬದಲಾವಣೆಗಳಾಗುತ್ತಿದ್ದು ಇವುಗಳನ್ನು ದಾಖಲಿಸಬೇಕಾದ ತುರ್ತು ಎದುರಾಗಿದೆ. ಜಾಗತೀಕರಣದ ಕಾರಣ ತೀವ್ರ ಸಾಂಸ್ಕೃತಿಕ ಪರಿಣಾಮಗಳಿಗೆ ಇದು ಒಳಗಾಗುತ್ತಿರುವುದರಿಂದ, ಯುವಜನರ ಅನುಭವವನ್ನು ಗುರುತಿಸುವುದು, ವಿಶೇಷವಾಗಿ ದಲಿತ ಮಹಿಳೆಯರ ಅನುಭವಗಳನ್ನು ದಾಖಲಿಸುವುದು ಅತ್ಯಂತ ಮಹತ್ವದ್ದಾಗಿದೆ.

# ಅಧ್ಯಾಯ 2

# ಸಾಹಿತ್ಯ ಪರಾಮರ್ಶೆ

## ಅಧ್ಯಯನದ ವಿಷಯದ ಬಗ್ಗೆ ನಡೆದಿರುವ ಚರ್ಚೆಗಳು

ಲಿಂಗ ಮತ್ತು ಜಾತಿ ಸಂಬಂಧಿತ ಸಂಶೋಧನೆಗಳನ್ನು ಅಧ್ಯಯನಮಾಡಲಾಗಿದೆ. ಐತಿಹಾಸಿಕವಾಗಿ, ಮಹಿಳೆಯರ ಜೀವನವನ್ನು ಕೇಂದ್ರೀಕರಿಸಿರುವ ಅಧ್ಯಯನಗಳು ಮತ್ತು ಪಿತೃಪ್ರಧಾನ ರಚನೆಗಳಿಂದ ಅವು ಹೇಗೆ ಪ್ರಭಾವಿತವಾಗಿವೆ ಎಂಬುದರ ಮೂಲಕ ಲಿಂಗ ಅಸಮಾನತೆಯನ್ನು ಅರ್ಥಮಾಡಿಕೊಳ್ಳಲು ಪ್ರಯತ್ನಿಸಲಾಗಿದೆ.

ಮಹಿಳೆಯರ ಮೇಲೆ ನಡೆಯುವ ವಿವಿಧ ದೌರ್ಜನ್ಯಗಳನ್ನು ಪರಿಶೋಧಿಸಲಾಗಿದೆ. ಅದರಲ್ಲೂ ಭಾರತೀಯ ಸಮಾಜದಲ್ಲಿರುವ ಸಾಮಾಜಿಕ ಪಿಡುಗುಗಳಾದ ಬಾಲ್ಯವಿವಾಹ, ಸತಿಸಹಗಮನ, ದೇವದಾಸಿ

ಪದ್ಧತಿ, ವರದಕ್ಷಿಣೆ, ಅತ್ಯಾಚಾರ ಮತ್ತು ಎಲ್ಲಾ ರಂಗದಲ್ಲೂ ಇರುವ ಲಿಂಗಬೇಧದಂತಹ ಹತ್ತು ಹಲವು ಸಮಸ್ಯೆಗಳೊಟ್ಟಿಗೆ ಮಹಿಳೆ ಇಂದು ಬದುಕುಳಿಯುತ್ತಿದ್ದಾಳೆ. "ಮಹಿಳೆಯರ ಮೇಲಿನ ದೌರ್ಜನ್ಯವು ಭೌತಿಕವಾದುದು ಮಾತ್ರವಲ್ಲ, ಮಹಿಳೆಯರ ಲೈಂಗಿಕ ವಸ್ತುನಿಷ್ಠೀಕರಣವನ್ನು ಪುರುಷ ಸಂತೋಷದ ವಸ್ತುಗಳು ಎಂದು ಮಾತ್ರ ನೋಡುವ ರೀತಿಯಲ್ಲಿ" ಎಂದು ಲೇಖಕಕರಾದ (ಡೋಮಿನಿಕ್ 2008–ಲೇಖನ–ಭಿನ್ನತೆಯ ಜಾಡು ಹಿಡಿದು) ಗಮನಿಸಿದ್ದಾರೆ.

ಭಾರತದಂತಹ ಶ್ರೇಣಿಕೃತ ಮತ್ತು ಸನಾತನ ವ್ಯವಸ್ಥೆಯಲ್ಲಿ ಮಹಿಳೆ ಮತ್ತು ಪುರುಷನ ನಡುವೆ ಇರುವ ಎಲ್ಲಾ ತರಹದ ಜೈವಿಕ ವೈಶಿಷ್ಟಗಳ ಮೇಲೆಯೂ ಪ್ರಹಾರ ಮಾಡಿ ಭೇದ ಹುಟ್ಟಿಸಲಾಗಿದೆ. ಮಹಿಳೆಗೆ ಇರುವ ಗರ್ಭ, ತಿಂಗಳ ಋತುಚಕ್ರ, ಶಾರೀರಿಕ ಸಂರಚನೆ, ಭಿನ್ನವೆನಿಸುವ ಧ್ವನಿ ಹೀಗೆ ಎಲ್ಲಾ ಬಗೆಯ ನೈಸರ್ಗಿಕ ವೈಶಿಷ್ಟಗಳು ಅವಳನ್ನು ಮೂಲೆಗುಂಪಾಗಿಸುವ ಅಸ್ತ್ರಗಳಾದವು. ಈ ಎಲ್ಲವುಗಳನ್ನು ಅವಳ ವಿರುದ್ಧವೇ ಬಳಸಲಾಗಿದೆ.

ಮೀನಾಕ್ಷಿ ಬಾಳಿ (2010) ಅವರು "ಮಹಿಳಾ ಭಾಗವಿಸುವಿಕೆ ಮತ್ತು ರಾಜಕೀಯ ಭಾಗವಹಿಸುವಿಕೆ ಪರಿಕಲ್ಪನೆಗಳ ಬಗ್ಗೆ ಮತ್ತು ಮಹಿಳೆ ತಾನು ಸಾಮಾಜಿಕವಾಗಿ ಮತ್ತು ರಾಜಕೀಯವಾಗಿ ತನ್ನನ್ನು ಸಂಪೂರ್ಣವಾಗಿ ತೊಡಗಿಸಿಕೊಳ್ಳುವ ಪ್ರಕ್ರಿಯೆ. ಉದಾ: ಯಾವುದೇ ರಾಜಕೀಯ ಪಕ್ಷಗಳ ಸದಸ್ಯತ್ವ, ಪಕ್ಷ ಕಟ್ಟುವುದು, ಚುನಾವಣೆಯಲ್ಲಿ ಸ್ಪರ್ಧಿಸುವುದು ಇತ್ಯಾದಿ. ಶಾಸನ ಸಭೆಯಲ್ಲಿ ಶೇ 33.33 ಇರಬೇಕೆಂದು ತಮ್ಮ ನಿಲುವುಗಳನ್ನು ಮಹಿಳಾ ಮೀಸಲಾತಿ ಮಸೂದೆ ಜಾರಿ ಕುರಿತ ಚರ್ಚೆಗಳು ಇದಕ್ಕೆ ಸಾಕ್ಷಿ. ಇಲ್ಲಿ ರಾಜಕೀಯ ಭಾಗವಹಿಸುವಿಕೆಯನ್ನು ಮೂರು ಗುಂಪುಗಳಲ್ಲಿ ಗುರುತಿಸಿದ್ದಾರೆ. ಅವುಗಳು– ಅತಿಯಾದ ಕ್ರಿಯಾಶೀಲತೆ, ಪ್ರಾಸಂಗಿಕ ಕ್ರಿಯಾಶೀಲತೆ ಮತ್ತು ಕ್ರಿಯಾಶೂನ್ಯ ಮಟ್ಟದ್ದಾಗಿದೆ" ಎಂದು ಅಭಿಪ್ರಾಯಪಟ್ಟಿದ್ದಾರೆ. ಇಲ್ಲಿ ರಾಜಕೀಯ ಸಾಮಾಜೀಕರಣ ಪರಿಕಲ್ಪನೆಯನ್ನು ತಿಳಿಸಿದ್ದಾರೆ.

ಗಂಡು–ಹೆಣ್ಣುಗಳಲ್ಲಿ ಅವರದ್ದೆ ಆದ ನಿರ್ದಿಷ್ಟ ಪಾತ್ರ ಮತ್ತು ಜವಾಬ್ದಾರಿಗಳಿರುತ್ತವೆ. ಈ ಭಿನ್ನತೆಯನ್ನು ನಮ್ಮ ಸಮಾಜದಲ್ಲಿ ಸಾಮಾಜಿಕವಾಗಿ–ಸಾಂಸ್ಕೃತಿಕವಾಗಿ ಹಿಗ್ಗಿಸಿವೆ. ಶ್ರೇಷ್ಠತೆ ಮತ್ತು ಕನಿಷ್ಟತೆ ಎಂಬ ಶ್ರೇಣೀಕರಣವನ್ನು ಮಾಡಿದೆ. ಸಾಮಾಜಿಕ ಸ್ಥಾನ ಎಂಬುದು ವ್ಯಕ್ತಿಯ ಸಾಮಾಜಿಕ, ಆರ್ಥಿಕ ಮತ್ತು ರಾಜಕೀಯ ಅಂಶಗಳಿಂದ ಗುರುತಿಸಬಹುದು, ಮಹಿಳೆಯ ಸ್ಥಾನವು ಕೇವಲ ಸಾಮಾಜಿಕ ಮತ್ತು ಸಾಂಸ್ಕೃತಿಕ ಪದ್ಧತಿಯಿಂದ ಮಾತ್ರ ರೂಪಿತವಾಗಿದೆ ಎಂದು ಸಂಗೀತ ಗಾಂವಕರ (2009) ಅಭಿಪ್ರಾಯಪಟ್ಟಿದ್ದಾರೆ.

## ಮಹಿಳಾ ಸಬಲೀಕರಣ

ಮಾನವ ಜನಾಂಗದ ಸೃಷ್ಟಿ ಹಾಗೂ ಅದರ ಸುಸ್ಥಿರಗತಿ ಪ್ರಕ್ರಿಯೆಯಲ್ಲಿ ಕೇಂದ್ರ ಧಾತು ಮಹಿಳೆ. ಆದರೆ ಸಾಮಾಜಿಕ, ಆರ್ಥಿಕ, ರಾಜಕೀಯ ಮತ್ತು ಸಾಂಸ್ಕೃತಿಕ ಕಾರಣಗಳಿಂದಾಗಿ ಸಾಮಾಜಿಕ ಜೀವನದ ಪ್ರಧಾನ ಧಾರೆಯಲ್ಲಿ ಆಕೆ ಅಂಚಿಗೆ ನೂಕಲ್ಪಟ್ಟಿದ್ದಾಳೆ. ಅಭಿವೃದ್ಧಿಯ ಫಲಗಳು, ಸಂಪನ್ಮೂಲಗಳು ಹಾಗೂ ದುಡಿಮೆಗೆ ಸಂಬಂಧಿಸಿದಂತೆ ಮಹಿಳೆಯರು ತೀವ್ರ ಸ್ವರೂಪದ ಅಸಮಾನತೆಯನ್ನು ಅನುಭವಿಸುತ್ತಿದ್ದಾರೆ. ಅಸಮಾನತೆ, ಶ್ರೇಣೀಕರಣ ಹಾಗೂ ಪುರುಷಶಾಹಿ ಸಮಾಜಗಳಲ್ಲಿ ಇಂತಹ ಲಿಂಗ ಸಂಬಂಧಿ ಅಸಮಾನತೆಗಳು ಹೆಚ್ಚು ಸ್ಪಷ್ಟ ರೂಪದಲ್ಲಿ ಗೋಚರಿಸುತ್ತವೆ. ಅಸಮಾನತೆಯ ದುಸ್ಥಿತಿಯ ಪರಿಣಾಮವಾಗಿ ಮುಕ್ತಗೊಳಿಸುವ ಸಲುವಾಗಿ ಉದ್ದೇಶಪೂರ್ವಕವಾಗಿ ರೂಪಿಸಿರುವ ಕಾರ್ಯತಂತ್ರ ಮಹಿಳಾ ಸಬಲೀಕರಣ. ಜಾಗತಿಕವಾಗಿ 1990ರ ದಶಕದಲ್ಲಿ ಎಲ್ಲರ ಗಮನ ಸೆಳೆದ ಸದರಿ ಪರಿಕಲ್ಪನೆಯು ಅಭಿವೃದ್ಧಿಯಲ್ಲಿ ಮಹಿಳೆ ಎಂಬ ಕಾರ್ಯತಂತ್ರದ ಉತ್ಪನ್ನವಾಗಿ ಮೂಡಿಬಂದಿದೆ. ಮಹಿಳೆಯರ ಸಬಲೀಕರಣವೆಂಬುದು ಅತ್ಯಂತ ಸಂಕೀರ್ಣವಾದ ಪರಿಭಾವನೆ. ಅದೊಂದು ಬಹುಮುಖಿ, ಬಹುಹಂತದ ಹಾಗೂ ಬಹುಶಿಸ್ತೀಯವಾದ ಪರಿಭಾವನೆಯಾಗಿದೆ.

ಸುನೀತಾ ಕಿಶೋರ್ ಪ್ರಕಾರ ಸಬಲೀಕರಣವೆಂದರೆ "ಅಧಿಕಾರವನ್ನು ಪಡೆದುಕೊಳ್ಳುವುದು ನಿಜವಾದರೂ ಮಹಿಳೆಯರ ಸಬಲೀಕರಣದ ಸಂದರ್ಭದಲ್ಲಿ ತಮ್ಮ ಸ್ವಂತ ಬದುಕಿನ ಮೇಲೆ, ದೇಹದ ಮೇಲೆ ಹಾಗೂ ಪರಿಸರದ ಮೇಲೆ ಮಹಿಳೆಯರ ಅಧಿಕಾರದಲ್ಲಿ ಉಂಟಾಗುವ ವರ್ಧನೆಯೇ ಮಹಿಳೆಯರ ಸಬಲೀಕರಣ" ಎಂದಿದ್ದಾರೆ.  ಸಂಬಂಧಿಸಿದಂತೆ ನಿರ್ವಚಿಸಲು ಪ್ರಯತ್ನಿಸಿದ್ದಾರೆ. ನಿಜವಾದ ಸಬಲೀಕರಣವು ಎಲ್ಲಾ ತರದ ಸಂಪನ್ಮೂಲಗಳ ಮೇಲಿನ ಹಿಡಿತ ಹಾಗೂ ವಿಚಾರಗಳ ಮೇಲಿನ ನಿಯಂತ್ರಣಗಳನ್ನು ಒಳಗೊಂಡಿರಬೇಕು. ವಿಶ್ವಸಂಸ್ಥೆಯು "ತಮ್ಮ ಇಚ್ಛೆಗೆ ಅನುಸಾರವಾಗಿ ಬದುಕುವ ಬದುಕಿನ ಆಯ್ಕೆಯ ಅವಕಾಶಕ್ಕೆ ಒತ್ತು ನೀಡಲಾಗಿದೆ".

ಲಿಂಗ ಸಂಬಂಧಿ ಸಬಲೀಕರಣ ದೃಷ್ಟಿಕೋನದಲ್ಲಿ ಸರ್ಕಾರ ಪ್ರಾಯೋಜಿತ ಕ್ರಮಗಳಿಗೆ ಸಾಪೇಕ್ಷವಾಗಿ ಯಾವ ಸ್ಥಾನ ನೀಡಬೇಕು ಎಂಬುದರ ಬಗ್ಗೆ ಖಚಿತ ನಿಲುವು ತಳೆಯುವುದು ಅಗತ್ಯ. ಮಹಿಳೆಯರ ಅಭಿವೃದ್ಧಿ ಮತ್ತು ಸಬಲೀಕರಣದ ದೃಷ್ಟಿಕೋನವು ಮೂಲಭೂತವಾಗಿ ಸರ್ಕಾರ ಪ್ರಾಯೋಜಿತವಾದುದಾಗಿದೆ. ಮಹಿಳೆಯರ ಸಬಲೀಕರಣ ಪ್ರಕ್ರಿಯೆಯನ್ನು ತೀವ್ರಗೊಳಿಸುವ ದೃಷ್ಟಿಯಿಂದ ಜಾಗೃತಿಯನ್ನು ಧಾರಣೆ ಮಾಡಿಕೊಂಡ ಹಾಗೂ ಲಿಂಗ ಸಮಾನತೆಗೆ ಬದ್ಧರಾದ ಮತ್ತು ಅರ್ಹರಾದ ಮಹಿಳೆಯರು ಸ್ವಯಂ ಕೈಗೊಳ್ಳುವ ಚಳವಳಿ ಪಾತ್ರ ತುಂಬಾ ಮುಖ್ಯ. ಇವುಗಳಿಗೆ ಅನುಗುಣವಾಗಿ ಅನೇಕ ಕಾರ್ಯಕ್ರಮಗಳನ್ನು ಜಾರಿಗೆ ತಂದರೂ ಮಹಿಳೆಯರು ಪ್ರಧಾನವಾಗಿ ಸಾಮಾಜಿಕ ವಾಹಿನಿಯಲ್ಲಿ ಅವರು ಮೂಲೆಗುಂಪಾಗಿ ಬಿಟ್ಟಿದ್ದಾರೆ. ಇಷ್ಟೆಲ್ಲಾ ಪ್ರಯತ್ನಗಳು

ನಡೆದರೂ ಪುರುಷ ಪಡೆದುಕೊಂಡಿರುವ ಸ್ಥಾನಮಾನಕ್ಕೆ ಸಮಾನವಾದ ಸ್ಥಾನಮಾನ ಪಡೆಯುವ ಸಾಮರ್ಥ್ಯವನ್ನು ಗಳಿಸಿಕೊಳ್ಳಲು ಮಹಿಳೆಯರು ಸಾಗಬೇಕಾದ ದಾರಿ ಇನ್ನು ಮುಂದಿದೆ. ಹೀಗೆ ತಮ್ಮ ವಿಚಾರವನ್ನು ಸೂಕ್ಷ್ಮವಾಗಿ ವಿಮರ್ಶಿಸುತ್ತಾ ತಮ್ಮವಾದವನ್ನು ಮಂಡಿಸಿದ್ದಾರೆ.

### ಆರ್ಥಿಕವಾಗಿ–ಸಾಮಾಜಿಕವಾಗಿ ಮಹಿಳಾ ಸ್ಥಾನ–ಮಾನ

ಪಿತೃಪ್ರಭುತ್ವ ಮತ್ತು ಪಿತೃಪ್ರಭುತ್ವದ ಮೌಲ್ಯಗಳಿಂದ ವ್ಯಾಖ್ಯಾನಿಸಲ್ಪಟ್ಟ ಆರ್ಥಿಕ–ಸಾಮಾಜಿಕ ವ್ಯವಸ್ಥೆಯು ಸಮಾಜದಲ್ಲಿನ ಇತರ ಮಹಿಳೆಯರಿಗೆ ಗಮನಾರ್ಹವಾಗಿದೆ. ಅವರನ್ನು ಎರಡನೇ ದರ್ಜೆಯ ನಾಗರಿಕರನ್ನಾಗಿ ಮಾಡುತ್ತದೆ.

ಕೆ. ನೀಲಾ(2001) ರವರ "ಮಹಿಳೆ–ಶೋಷಣೆಯ ನೆಲೆಗಳು" ಎಂಬ ಅಧ್ಯಯನದಲ್ಲಿ "ಮಹಿಳೆ–ಪುರುಷನ ನಡುವೆ ತಾರತಮ್ಯ ಹುಟ್ಟುಹಾಕಿದಂದಿನಿಂದ ಇಲ್ಲಿಯವರೆಗೂ ಉತ್ಪಾದನಾ ಸಂಬಂಧ ಮತ್ತು ಉತ್ಪಾದನೆಯ ಮೇಲಿನ ಹಿಡಿತದ ಹಿನ್ನಲೆಯಲ್ಲಿ ಸೃಷ್ಟಿಸಲ್ಪಟ್ಟ ಈ ಭೇದದ ನೀತಿಯ ಬೇರು ಖಾಸಗಿ ಆಸ್ತಿಯ ಉಗಮದೊಂದಿಗೆ ತಳುಕುಹಾಕಿಕೊಂಡಿದೆ. ಮನುಷ್ಯ ಒಂದಡೆ ನೆಲೆಗೊಂಡು ಆಸ್ತಿಯ ಮೇಲಿನ ಒಡೆತನ ಹೊಂದಿ ಮಹಿಳೆಯನ್ನು ಸಾಮಾಜಿಕ, ಆರ್ಥಿಕ ಸಂಬಂಧದಿಂದ ವಿಮುಖಗೊಳಿಸಿ ಅವಳನ್ನು ಕೇವಲ ಮನೆಯ ಕೆಲಸಕ್ಕೆ ಸೀಮಿತಗೊಳಿಸಿದನು. ಸಂಪತ್ತಿನಂತೆ ಮಹಿಳೆಯನ್ನು ಖಾಸಗಿ ಆಸ್ತಿಯಾಗಿಸಲಾಯಿತು. ಅಬಲೆಯನ್ನಾಗಿಸಿತು. ಧಾರ್ಮಿಕ ವಲಯದಲ್ಲಿ ಮಾಯೆ ಎಂದರು ಸಾಮಾಜಿಕ ಸಂದರ್ಭದಲ್ಲಿ ಮಕ್ಕಳು ಹೆರುವ ಯಂತ್ರವಾದಳು. ಆರ್ಥಿಕವಾಗಿ ಪರಾಧೀನೆಯಾದಳು. ಸಮಾಜವು ಜಾತಿ, ವರ್ಗ ವರ್ಣ ಮತದ ಆಧಾರದಿಂದ ಹೇಗೆ ವರ್ಗಿಕರಿಸಲ್ಪಟ್ಟಿದೆಯೋ ಹಾಗೇ ಲಿಂಗ ತಾರತಮ್ಯದಿಂದಲೂ ಒಡೆಯಲ್ಪಟ್ಟಿದೆ".

ಎಲ್ಲಾ ಮಹಿಳೆಯರು ಒಂದೇ ಆಗಿಲ್ಲ ಎನ್ನುವಂತಹ ಕೆ ನೀಲಾ ಅವರ ವಾದಗಳು ಮಹಿಳೆಯರ ಕೆಲಸದ ಬಗ್ಗೆ ಒಂದು ಪ್ರಮುಖ ಅಂಶವನ್ನು ಮುನ್ನೆಲೆಗೆ ತರುತ್ತವೆ. ಆದರೆ ಎಲ್ಲಾ ಮಹಿಳೆಯರು ಒಂದೇ ಅಲ್ಲ ಎಂಬುದನ್ನು ಅರ್ಥಮಾಡಿಕೊಳ್ಳಲು ಸಹ ನಮಗೆ ಸಹಾಯ ಮಾಡುತ್ತದೆ. ಪ್ರದೇಶ, ಧರ್ಮ, ಕೆಲಸದ ಸ್ವರೂಪ, ಜಾತಿ ಮತ್ತು ಸಮುದಾಯ ಎಲ್ಲವೂ ಮಹಿಳೆಯರಿಗೆ ಇರುವ ಅನುಭವ, ಅವಕಾಶಗಳು ಮತ್ತು ಸಾಧ್ಯತೆಗಳ ಮೇಲೆ ಪ್ರಭಾವ ಬೀರುತ್ತದೆ.

ಛಾಯಾ ದೇಗಾಂವಕರ್ (2012) ರವರ "ಸಂಘಟಿತ ಮತ್ತು ಅಸಂಘಟಿತ ಕ್ಷೇತ್ರಗಳಲ್ಲಿ ಮಹಿಳೆ" ಎಂಬ ಲೇಖನದಲ್ಲಿ ಇವರು ಅಮರ್ತ್ಯಸೇನರ ಬಾರ್ಗೇನಿಂಗ್ ಮಾಡೆಲ್ ಆಫ್ ಹೌಸ್‌ಹೋಲ್ಡ್‌ಗೆ ಕುರಿತಂತೆ ತಮ್ಮ ಲೇಖನದಲ್ಲಿ ಚರ್ಚಿಸಿದ್ದಾರೆ. ಸಂಘಟಿತ ಕ್ಷೇತ್ರದಲ್ಲಿ ಹೆಚ್ಚು ಮಹಿಳೆಯರು ಕಂಡುಬರುತ್ತಾರೆ. ಅದರ ಹಿನ್ನಲೆಯನ್ನು

ನೋಡಿದಾಗ ಮಹಿಳೆಯರಿಗೆ ಶಿಕ್ಷಣ, ಜ್ಞಾನ, ಕೌಶಲ್ಯ ಮುಂತಾದವುಗಳಿಂದ ವಂಚಿತರಾಗಿದ್ದರಿಂದ ಇವರ ಸಂಖ್ಯೆ ಕಡಿಮೆ. ಅದ್ದರಿಂದ ಇದನ್ನು ಮಹಿಳೆಯರಿಗೆ ಮಾನವ ಬಂಡವಾಳ ಕಡಿಮೆಯಿದೆ ಎಂದಿದ್ದಾರೆ. ಅಸಂಘಟಿತ ಕ್ಷೇತ್ರದಲ್ಲಿ ಸ್ತ್ರೀ–ಪುರುಷರು ಹೆಚ್ಚು ಕಡಿಮೆ ಸಮಾನವಾಗಿರುತ್ತಾರೆ. ಆದರೆ ಕೂಲಿಯ ಮತ್ತು ಸ್ಥಾನ ಮಾನದ ವ್ಯತ್ಯಾಸಗಳು ಕಂಡುಬರುತ್ತವೆ ಅದ್ದರಿಂದ ಇದನ್ನು ಬೇಕರ್ ಥಿಯರಿಂದ ಗುರುತಿಸಿದ್ದಾರೆ. ಸಂಘಟಿತ ಕ್ಷೇತ್ರದಲ್ಲಿ ಮಹಿಳೆಯರು ತಾರತಮ್ಯ ಅನುಭವಿಸುತ್ತಾರೆ. ಏಕೆಂದರೆ ಮಹಿಳೆಯರಿಗಿರುವ ಸ್ವಾಭಾವಿಕ ಪ್ರಕ್ರಿಯೆಗಳು ಅವರ ಉನ್ನತ ಅಭಿವೃದ್ಧಿಗೆ ಅಡ್ಡಬರುತ್ತವೆ. ಅವುಗಳಲ್ಲಿ ಸಂತಾನೊತ್ಪತ್ತಿ ಮತ್ತು ಮನೆವಾರ್ತೆ ಹಾಗೂ ಇತರೆ. ಆದ್ದರಿಂದ ಯಾವ ಕ್ಷೇತ್ರದಲ್ಲಿಯೂ ಸಹ ಅಭಿವೃದ್ಧಿ ಹೊಂದುವಲ್ಲಿ ಅವಳ ದೈಹಿಕ ಮತ್ತು ಸಾಮಾಜಿಕ ಕಟ್ಟುಪಾಡುಗಳು ಅಡ್ಡಬರುತ್ತವೆ.

ಶಾಂತಾ ಭಂಗಾರಿಯವರ (2007) "ಸ್ಟೇಟಸ್ ಅಫ್ ವಿಡ್ರೊ ಇನ್ ರೂರಲ್ ಇಂಡಿಯಾ" ಒಂದು ಸಮಾಜಶಾಸ್ತ್ರೀಯ ಅಧ್ಯಯನದಲ್ಲಿ ವಿಧವೆಯರು ಸಾಮಾನ್ಯ ಮಹಿಳೆಯರಿಗಿಂತ ದುರ್ಬಲರಾಗಿದ್ದಾರೆ. ಅವರಲ್ಲಿ ತಕ್ಷಣದ ಬದಲಾವಣೆಯಿಂದ ಸಾಮಾಜಿಕ ಮತ್ತು ಆರ್ಥಿಕ ಸ್ಥಿಗತಿಗಳು ಹೇಳಿಕೊಳ್ಳುವಂತಹ ಸ್ಥಿತಿಯಿರುವುದಿಲ್ಲ. ವಿಧವಾವ್ಯವಸ್ಥೆಯು ತುಂಬಾ ಒತ್ತಡದಾಯಕವಾಗಿರುತ್ತದೆ. ಇಂತಹ ಸ್ಥಿತಿಯು ಹಲವು ರೀತಿಯ ಕಳಂಕಗಳು ಸಹ ಬಂಧಿಸಿಕೊಂಡಿರುತ್ತವೆ. ಇದಲ್ಲದೆ ಪುರುಷ ಪ್ರಧಾನವಾದ ಹಿಂದು ಸಮಾಜವು ವಿಧವೆಯನ್ನು ಸ್ವತಂತ್ರವಾಗಿ ಬದುಕಲು ಬಿಡುವುದಿಲ್ಲ. ಇವರ ಸಾಂಸ್ಕೃತಿಕ ಸ್ಥಿತಿಗತಿಯು ವಿಧವೆಯರನ್ನು ಹೆಚ್ಚಾಗಿ ಜಾತಿ ಮತ್ತು ಧಾರ್ಮಿಕತೆಯ ಕೆಲವು ಕಟ್ಟುನಿಟ್ಟಿನ ನಿಬಂಧನೆ ಮತ್ತು ನಿಯಂತ್ರಣಗಳಿಂದ ಕಟ್ಟಿಯಾಕಿರುತ್ತದೆ. ಭಾವನೆಯ ಹಂತವು ಕಡಿಮೆ ಪ್ರಮಾಣದಲ್ಲಿರುತ್ತದೆ. ಗ್ರಹಿಕೆಯು ತಾವು ತಮ್ಮ ಮನೆ ಮತ್ತು ಮಕ್ಕಳನ್ನು ನೋಡಿಕೊಳ್ಳುವ ಹಾಗೆ ನಿಗದಿಯಾಗಿರುತ್ತದೆ. ಯಾವಾಗಲೂ ತೇಜೋವಧೆಯಿಂದ ಮತ್ತು ಆರ್ಥಿಕ ಅಭದ್ರತೆಯಿಂದ, ಸಾಮಾಜಿಕವಾಗಿ ಕೆಳಹಂತದಲ್ಲಿ ಮತ್ತು ಭಾವನಾತ್ಮಕವಾಗಿ ಬೆಂಬಲವಿಲ್ಲದ ವಯಕ್ತಿಕವಾಗಿ ಒಬ್ಬಂಟಿತನದಿಂದ ಜೀವಿಸಬೇಕಾಗುತ್ತದೆ ಎಂದು ಅಭಿಪ್ರಾಯಟ್ಟಿದ್ದಾರೆ.

ನಸೀಮ್ ಭಾನು ಎ ಖಲಾಸಿಯವರ (2008) "ಮುಸ್ಲಿಂ ವುಮೆನ್ ಇನ್ ಸ್ಲಂ" ಒಂದು ಸಮಾಜಶಾಸ್ತ್ರೀಯ ಅಧ್ಯಯನದಲ್ಲಿ ಮುಸ್ಲಿಂ ಮಹಿಳೆಯರ ಸ್ಥಿತಿಗತಿಯನ್ನು ಅರ್ಥಮಾಡಿಕೊಳ್ಳುವಲ್ಲಿ ಪ್ರಯತ್ನಿಸಿದ್ದಾರೆ. ಫಲಿತಾಂಶದಲ್ಲಿ ಮುಸ್ಲಿಂ ಮಹಿಳೆಯರು ಆರೋಗ್ಯ, ಶಿಕ್ಷಣ ಮತ್ತು ಆರ್ಥಿಕವಾಗಿ ತುಂಬಾ ಹಿಂದುಳಿದಿದ್ದಾರೆ ಎಂದು ತಮ್ಮ ಅಧ್ಯಯನದಲ್ಲಿ ಕಂಡುಕೊಂಡಿದ್ದಾರೆ.

ಅರವಿಂದ ಚೊಕ್ಕಾಡಿ (2009) "ಮಹಿಳಾ ಸಬಲೀಕರಣದ ನೆಲೆಗಳು" ಭಾರತೀಯ ಜಾತಿಪದ್ಧತಿಯು ಸಾಮಾಜಿಕ ಹೊರತಳ್ಳುವಿಕೆಗೆ ಮುಖ್ಯ ಕಾರಣವಾಗಿದೆ. ಇದು ಒಂದೇ ತರವಾಗಿರದೆ ಹಲವಾರು ಸಾಂಸ್ಕೃತಿಕ ವೈವಿಧ್ಯತೆಗಳನ್ನು ಹೊಂದಿದೆ. ಇಂತಹ ಜಾತಿಯ ಸಾಂಸ್ಕೃತಿಕ ವೈರುಧ್ಯಗಳನ್ನು ಪ್ರಪಂಚದ ಯಾವುದೇ ಭಾಗದಲ್ಲೂ ನೋಡಲು ಸಾಧ್ಯವಿಲ್ಲ. ಭಾರತೀಯ ಸಮಾಜದಲ್ಲಿ ದಲಿತ ಮತ್ತು ಹಿಂದುಳಿದ ಸಮುದಾಯಗಳು ಸಾಮಾಜಿಕವಾಗಿ ಹೊರತಳ್ಳಲ್ಪಟ್ಟ ಅಂಚೀಕೃತ ಸಮುದಾಯಗಳಾಗಿವೆ. ಸಾಮಾಜಿಕವಾಗಿ, ಆರ್ಥಿಕ ಮತ್ತು ರಾಜಕೀಯ ಹೊರತಳ್ಳುವಿಕೆಯ ಜೊತೆಗೆ ಶೈಕ್ಷಣಿಕವಾಗಿ ಅಂಚೀಕೃತ ಸಮುದಾಯವಾಗಿವೆ ಎಂದು ಅಭಿಪ್ರಾಯಪಟ್ಟಿದ್ದಾರೆ.

### ದಲಿತ ಮಹಿಳೆಯರ ಸುತ್ತಾ

ಅನುಸೂಯ ಕಾಂಬಳೆ (2012) ರವರ "ದಲಿತ ಮಹಿಳೆ ಸಮಸ್ಯೆಗಳು ಸವಾಲುಗಳು" ಎಂಬ ಲೇಖನದಲ್ಲಿ ದಲಿತಾ ಮಹಿಳಾ ಸಮಸ್ಯೆಗಳು ಇತರ ಮಹಿಳಾ ಸಮಸ್ಯೆಗಳಿಗಿಂತ ತೀರ ಭಿನ್ನವಾಗಿದ್ದು, ಅವಳು ನಿತ್ಯ ಅತ್ಯಾಚಾರ–ದೌರ್ಜನ್ಯಕ್ಕೆ ಒಳಗಾಗುತ್ತಿರುವುದರಿಂದ ಅವಳಿಗೆ ರಕ್ಷಣಾತ್ಮಕ ಸ್ವಾತಂತ್ರ್ಯದ ಅವಶ್ಯಕತೆ ಇದೆ. ಸದ್ಯದ ಸಂದರ್ಭದಲ್ಲಿ ಅವಳಿಗೆ ವಿವಾಹ ವ್ಯವಸ್ಥೆಯೇ ಸೂಕ್ತವಾದುದು. ಹಾಗೂ ಅವಳು ಹೋರಾಡಬೇಕಿರುವುದು ಸಾಮಾಜಿಕ, ಆರ್ಥಿಕ ಹಾಗೂ ರಾಜಕೀಯ ಸ್ವಾತಂತ್ರ್ಯಕ್ಕಾಗಿ. ಆದ್ದರಿಂದ ಸದ್ಯದ ಸಂದರ್ಭದಲ್ಲಿ ಅವಳ ಅದ್ಯತೆ ಲೈಂಗಿಕ ಸ್ವಾತಂತ್ರ್ಯವಲ್ಲ, ಸಾಮಾಜಿಕ ಸಮಾನತೆ ಎಂದು ಅಭಿಪ್ರಾಯಪಟ್ಟಿದ್ದಾರೆ.

ನೇತ್ರಾವತಿ ಕೆ.ವಿ (2010) ರವರ "ದಲಿತ ಮಹಿಳಾ ಸಂಕಥನ" ಎಂಬ ಸಂಶೋಧನಾ ಗ್ರಂಥದಲ್ಲಿ ದಲಿತ ಮಹಿಳೆಯರ ಬಗ್ಗೆ ಕೆಲವು ತಾತ್ವಿಕ ಚರ್ಚೆಗಳನ್ನು ಮಾಡಿದ್ದಾರೆ. ಏಷ್ಯಾದಲ್ಲಿ ಅಸ್ಮಿತೆ ಅಥವಾ ಐಡೆಂಟಿಟಿ ಚರ್ಚೆ 70ರ ದಶಕದಲ್ಲಿ ಶುರುವಾಯಿತು. ಈ ಸಂದರ್ಭದಲ್ಲಿ ಹಲವಾರು ಐಡೆಂಟಿಟಿಗಳ ಬಗ್ಗೆ ಚರ್ಚಿಸಲಾಯಿತು. ಭಾಷೆ, ಜನಾಂಗ, ಜಾತಿ, ಎಥ್ನಿಕ್, ಲಿಂಗ, ಧರ್ಮ, ವರ್ಗ, ಸಂಸ್ಕೃತಿ, ವೃತ್ತಿ ಆಚರಣೆ, ಆಹಾರ ಪದ್ಧತಿ, ಕಲೆ ಮತ್ತು ಸಾಹಿತ್ಯ ಮುಂತಾದವುಗಳ ಐಡೆಂಟಿಟಿಯ ಉದ್ದೇಶ ಸಮಾಜೋ–ಸಾಂಸ್ಕೃತಿಕ ಸ್ಥಿತಿಗತಿಯನ್ನು ಅರ್ಥಮಾಡಿಕೊಳ್ಳುವುದು. ದಲಿತ ಸ್ತ್ರೀವಾದ ಎನ್ನುವುದು ತಮ್ಮನ್ನು ತಾವು ಅರಿಯಲು ಬೇರೆಯವರನ್ನು ಅರಿತುಕೊಳ್ಳಲು ಹಾಗೂ ತಮ್ಮನ್ನು ತಾವು ರಕ್ಷಿಸಿಕೊಳ್ಳುವುದರ ಜೊತೆಗೆ ಬಂಧನದಿಂದ ಬಿಡುಗಡೆಗೊಳಿಸುವಲ್ಲಿ ಸಹಕರಿಸುತ್ತಾ ತಾನು ಬೆಳೆಯುವುದು ಮತ್ತು ಇತರರನ್ನು ಬೆಳೆಸುವಂತದ್ದಾಗಿದೆ ಎಂದು ಚರ್ಚಿಸಿದ್ದಾರೆ.

## ಕೆಲಸದ ಸ್ಥಳಗಳಲ್ಲಿ ದಲಿತ ಮಹಿಳೆ

ಬಿ ಜಿ.ಕಲಾವತಿ (2010) ರವರ “ಮಾಧ್ಯಮ ಮತ್ತು ಮಹಿಳೆ” ಮೇಲಿನ ಲೇಖನದಲ್ಲಿ ಮಹಿಳೆ ಮತ್ತು ಮಾಧ್ಯಮ ಕುರಿತಂತೆ ಕೆಲವು ಸೂಕ್ಷ್ಮ ವಿಚಾರಗಳನ್ನು ಎತ್ತಿದ್ದಾರೆ. ಮಾಧ್ಯಮಗಳು ಮಹಿಳೆಯರನ್ನು ಹೇಗೆ ಪ್ರತಿನಿಧೀಕರಣಗೊಳಿಸುತ್ತವೆ ಎಂಬುದನ್ನು ಇಲ್ಲಿ ಅರ್ಥ ಮಾಡಿಕೊಳ್ಳಬಹುದು. ಸಮಾಜದಲ್ಲಿ ಜನಪ್ರಿಯ ಸಂಸ್ಕೃತಿಯ ಭಾಗವಾದ ಮಾಧ್ಯಮ ಬಹುಬೇಗ ಸಮಾಜದ ಮೇಲೆ ಪರಿಣಾಮ ಬೀರುತ್ತದೆ. ಇವು ಒಂದು ರೀತಿಯ ಕನ್ನಡಿಗಳಾಗಿಯೂ ಕೆಲಸ ಮಾಡುತ್ತವೆ. ಇಲ್ಲಿ ಮಹಿಳೆಯು ಮಾಧ್ಯಮವನ್ನು ಹೇಗೆ ಸ್ವೀಕರಿಸುತ್ತಾರೆ ಮತ್ತು ಮಾಧ್ಯಮ ಮಹಿಳೆಯರನ್ನು ಹೇಗೆ ಸ್ವೀಕರಿಸಿದೆ ಎನ್ನುವುದನ್ನು ಪ್ರಾಯೋಗಿಕವಾಗಿ ಜೀವಂತ ಸಾಕ್ಷಿಗಳನ್ನು ಮುಂದಿಟ್ಟು ಚರ್ಚಿಸಿದ್ದಾರೆ.

ಹೆಣ್ಣನ್ನು ಕುಟುಂಬ ನೆಲೆಯಲ್ಲಿ ಆಸ್ತಿಯ ಭಾಗವಾಗಿಯೇ ನೋಡುವ ಒತ್ತಡಗಳನ್ನು ಮೀರುವ ಸಾಧ್ಯತೆಗಳೇಕೆ ಚರಿತ್ರೆಯಲ್ಲಿ ಕಾಣದೇ ಹೋದವು ಎಂಬುದರ ಬಗ್ಗೆ ಸೂಕ್ಷ್ಮವಾಗಿ ಅವಲೋಕಿಸಬೇಕಾಗಿದೆ. ಬುದ್ಧ, ಬಸವ ನಂತರ ಬಂದ ಶಂಕರಾಚಾರ್ಯರು ಹೆಣ್ಣನ್ನು ನರಕಕ್ಕೆ ದಾರಿ ಎಂದೇ ಕರೆದಿರುವುದರ ಹಿಂದೆ ಕೆಲಸ ಮಾಡಿದ ಮನಸ್ಸಿನ ಸೈದ್ಧಾಂತಿಕ ನೆಲೆಯನ್ನು ಕಂಡುಹಿಡಿಯಬೇಕಾಗಿದೆ. ಗಾಂಧೀಜಿಯಲ್ಲಿ ಸನಾತನ ಸಂಸ್ಕೃತಿಯ ಚೌಕಟ್ಟಿನೊಳಗಿರುವ ಹೆಣ್ಣಿನ ಬಗ್ಗೆ ಗೌರವಾಧಾರಗಳಿದ್ದವೇ ಹೊರತು ಚೌಕಟ್ಟಿನಾಚೆಗೆ ಬದುಕಲು ಇಚ್ಛಿಸುವ ಮಹಿಳೆಯರ ಕುರಿತ ಹಾಗೆ ಸದಭಿಪ್ರಾಯವಿರಲಿಲ್ಲ. ಹಾಗೆ ನೋಡಿದರೆ ಜ್ಯೋತಿ ಬಾಪುಲೆ ಮತ್ತು ಪೆರಿಯಾರ್ ರವರುಗಳ ದಿಟ್ಟ ನಿಲುವು ಮತ್ತು ಸ್ಪಷ್ಟವಾದ ವಿಚಾರಗಳು ಮಹಿಳೆಯ ಬದುಕಿನ ಬದಲಾವಣೆಯ ದಿಕ್ಕು ದೆಸೆಗಳನ್ನು ವೈಚಾರಿಕವಾಗಿಯೇ ಗುರುತಿಸಿವೆ. ನಂತರದಲ್ಲಿ ಬಂದ ಮಾನವತಾವಾದಿ ಅಂಬೇಡ್ಕರ್ ಮಹಿಳೆಯರ ಬಗ್ಗೆ ಕಾನೂನು ಸಮ್ಮತಗೊಳಿಸುವಲ್ಲಿ ಅವರ ದಿಟ್ಟ ನಿಲುವಿಗೆ ಅನುಗುಣವಾದ ಫಲ ಸಿಗಲಿಲ್ಲ ಇದಕ್ಕೆ ಕಾರಣ ಹುಡುಕುತ್ತಾ ಹೋದರೆ ಮನು ಮೂಲವೇ ಕೈಗೆ ಸಿಗುತ್ತದೆ.

ನಾವು ಭಾವಿಸಿದಂತೆ ಭಾರತೀಯ ಸಮಾಜ, ಬದುಕು, ಜನರನ್ನು ಮುನ್ನಡೆಸುವ ಶಕ್ತಿ ಬರೆಯಲ್ಪಟ್ಟ ಸಂವಿಧಾನಕ್ಕೆ ಸಾಧ್ಯವಾಗದೆ ಹೋಯಿತು. ಆದರೆ ಸಾಮಾಜಿಕ ಮನ್ನಣೆಯನ್ನು ಪಡೆದುಕೊಳ್ಳುತ್ತಲೇ ಧಾರ್ಮಿಕ ಒತ್ತಾಸೆಯ ನೆಲೆಯಲ್ಲಿರುವ ಮನು ವಿಚಾರಧಾರೆಯೆ ನಮ್ಮನ್ನು ವಾಸ್ತವವಾಗಿ ಆಳುತ್ತಿದೆ. ಮಹಿಳೆಯರಿಗೆ ಸ್ವಾತಂತ್ರ್ಯ ಮತ್ತು ಸಮಾನವಾದ ಅಧಿಕಾರ ಅವಕಾಶಗಳೆಲ್ಲ ಸಂವಿಧಾನತ್ಮಕವಾಗಿ ಕೊಡಮಾಡಲ್ಪಟ್ಟಿವೆ ಎಂಬುದನ್ನೇ ನಾವು ಜಗತ್ತಿಗೆ ಸಾರುತ್ತಾ ಬಂದಿದ್ದೇವೆ. ವಾಸ್ತವವಾಗಿ ಹೆಣ್ಣನ್ನು ಮನು ನಿರ್ದೇಶಿತ ಸ್ಥಾನದಲ್ಲಿಟ್ಟು ಸುತ್ತಲೂ ಬೇಲಿ ಹಾಕಿ ಒಳಗಡೆ ವರ್ಗಹಿತಾಸಕ್ತಿ, ಸರಕು ಸಂಸ್ಕೃತಿಯ ಹಿತಾಸಕ್ತಿ, ಸನಾತನ ಮೌಲ್ಯಗಳ ಕರೆಂಟು ಹರಿಯ ಬಿಟ್ಟಿದ್ದೇವೆ. ಕಾಗದದ ಮೇಲೆ ಕಾನೂನುಗಳಿದ್ದರೂ ಸಮಾಜದಲ್ಲಿ ಮನುಧೋರಣೆ ಜೀವಂತವಾಗಿದೆ.

ಸಾಮಾಜಿಕವಾಗಿ, ಸಾಂಸ್ಕೃತಿಕವಾಗಿ ಲಿಂಗನೆಲೆಯ ಬರ್ಬರತೆಯನ್ನು ಕಾಪಾಡಿಕೊಂಡು ಹೋಗುವ ಸಾಮಾಜಿಕ ರೂಢಿನಿಯಮಗಳನ್ನು ಯಾವ ಕಾನೂನಿನಿಂದಲೂ ಮುರಿಯಲು ಸಾಧ್ಯವಿಲ್ಲ.

ಬಾಬಾಸಾಹೇಬರು ಭಾರತೀಯ ಮಹಿಳಾ ಸಮುದಾಯಕ್ಕೆ ಹಲವಾರು ಕಾಯ್ದೆ–ಕಾನೂನುಗಳನ್ನು ತಂದರು ಆದರೆ ಈ ಪ್ರಯೋಜನಗಳೆಲ್ಲವೂ ಸಹ ಮೇಲ್ಜಾತಿ ಮತ್ತು ಮೇಲ್ವರ್ಗದ ಮಹಿಳೆಯರಿಗೆ ಅನುಕೂಲವಾದರೂ ಸಹ ಇಡೀ ಮಹಿಳಾ ಲೋಕವೇ ಅಂಬೇಡ್ಕರವನ್ನು ಜೀವಮಾನದುದ್ದಕ್ಕು ಸ್ಮರಿಸಬೇಕು. ಅಂದಿನ ಕಾಲದ ವಿಷಮ ಪರಿಸ್ಥಿತಿಯಲ್ಲಿ ಒಬ್ಬ ಕೆಳವರ್ಗದ ಮಹಾನ್ ವ್ಯಕ್ತಿ ಮಹಿಳೆಯರಿಗೆ ಸಾಮಾಜಿಕ ಮತ್ತು ಆರ್ಥಿಕ ಕಾನೂನುಗಳನ್ನು ಮಾಡಿದ್ದು ಪ್ರಶ್ನಾತೀತವಾದುದಾಗಿದೆ.

ಮಹಿಳೆ ಪುರುಷನ ನಡುವೆ ತಾರತಮ್ಯ ಹುಟ್ಟು ಹಾಕಿದಂದಿನಿಂದ ಇಲ್ಲಿಯವರೆಗೂ ಉತ್ಪಾದನಾ ಸಂಬಂಧ ಮತ್ತು ಉತ್ಪಾದನೆಯ ಮೇಲಿನ ಹಿಡಿತದ ಹಿನ್ನಲೆಯಲ್ಲಿ ಸೃಷ್ಟಿಸಲ್ಪಟ್ಟ ಈ ಭೇದದ ನೀತಿಯ ಬೇರು ಖಾಸಗಿ ಆಸ್ತಿಯ ಉಗಮದೊಂದಿಗೆ ತಳುಕುಹಾಕಿಕೊಂಡಿದೆ. ಮನುಷ್ಯ ಒಂದಡೆ ನೆಲೆಗೊಂಡು ಆಸ್ತಿಯ ಮೇಲಿನ ಒಡೆತನ ಹೊಂದಿ ಮಹಿಳೆಯನ್ನು ಸಾಮಾಜಿಕ, ಆರ್ಥಿಕ ಸಂಬಂಧದಿಂದ ವಿಮುಖಗೊಳಿಸಿ ಅವಳನ್ನು ಕೇವಲ ಮನೆಯ ಕೆಲಸಕ್ಕೆ ಸೀಮಿತಗೊಳಿಸಿದನು.

ಪ್ರಸ್ತುತದಲ್ಲಿ ಕರ್ನಾಟಕದ ಈ ಅಧ್ಯಯನವು ಸಹ ಅಗತ್ಯವಿರುವುದರಿಂದ ಅಧ್ಯಯನಕ್ಕೆ ಬೇಕಾದಂತಹ ಸಂಶೋಧನಾ ಪ್ರಬಂಧಗಳು, ಲೇಖನಗಳು, ವರದಿಗಳು, ಅಂಕಿಸಂಖ್ಯೆಗಳ ವಿಮರ್ಶೆ, ಸರ್ಕಾರಿ ಮಾಹಿತಿ, ಇತ್ಯಾದಿ ಸಿದ್ಧವಿರುವ ಹಾಗೂ ಆನುಷಂಗಿಕ ಆಧಾರದಲ್ಲಿ ದೊರೆತ ಮಾಹಿತಿಯನ್ನು ಕಲೆಹಾಕಿ ಅವುಗಳ ವಿಚಾರವನ್ನು ಚರ್ಚೆ ಮತ್ತು ವಿಮರ್ಶೆಗೊಳಪಡಿಸಿ ತನ್ನದೇ ಅಭಿಪ್ರಾಯಗಳನ್ನು ದಾಖಲಿಸುವುದರ ಮೂಲಕ ಪ್ರಸ್ತುತದ ಅಧ್ಯಯನಕ್ಕೆ ಬೇಕಾದಂತಹ ಪ್ರಶ್ನೆಗಳನ್ನು ಹಾಕಿಕೊಳ್ಳಲಾಗಿದೆ.

# ಅಧ್ಯಾಯ 3

# ಅಧ್ಯಯನದ ವಿಶ್ಲೇಷಣೆ ಮತ್ತು ವಿವರಣೆ

## ಶಿಕ್ಷಣದ ಅನುಸಂಧಾನಗಳು: ಕನಸುಗಳು, ಆಯ್ಕೆಗಳು ಮತ್ತು ಅವಕಾಶಗಳು

ಯುವ ದಲಿತ ಮಹಿಳೆಯರು ತಮ್ಮ ಶಿಕ್ಷಣದ ಪ್ರಶ್ನೆಗೆ ಬಂದಾಗ ಅವರ ಸಂಧಾನದಲ್ಲಿನ ಸಂಕೀರ್ಣತೆಯನ್ನು ಈ ಸಂಶೋಧನೆಯು ಹೊರತರುತ್ತದೆ. ಇಲ್ಲಿ ಪ್ರತಿರೋಧ, ಹೋರಾಟ ಮತ್ತು ಸಾಧನೆಯ ನಿದರ್ಶನಗಳೊಂದಿಗೆ ಮಹಿಳೆಯರ ಕನಸುಗಳು ಮತ್ತು ಅವುಗಳಿಗೆ ಕಾರಣವಾಗುವ ಅಂಶಗಳಿಗೆ ಮಿತಿಗಳನ್ನು ಗುರುತಿಸಿ ಮುಖಾಮುಖಿಗೊಳಿಸುವ ಪ್ರಯತ್ನ ಮಾಡಲಾಗಿದೆ. ಬೆಂಗಳೂರು, ಬಿಜಾಪುರ, ಕೋಲಾರ ಮತ್ತು ಮಂಗಳೂರಿನ ನಾಲ್ಕು ಜಿಲ್ಲೆಗಳಿಂದ ಒದಗಿಸಿದ ಆಳವಾದ ಅನುಭವ ಕಥನಗಳ ಮೂಲಕ ಈ ಅಧ್ಯಾಯವನ್ನು ಬರೆಯಲಾಗಿದೆ.

### ಕನಸುಗಳ ಮಿತಿ

“ಕನಸು ಅಂದ್ರೇನು? ಶಿಕ್ಷಣ ಅಂದ್ರೇನು? ನಮ್ಮನ್ನು ಓದಿಸಲು ಯಾರು ಇರಲಿಲ್ಲ. ಮನೆಯ ಬಡತನದಿಂದ ಹಸಿವನ್ನು ನೀಗಿಸಿಕೊಳ್ಳೋದೆ ದೊಡ್ಡ ಸವಾಲಾಗಿತ್ತು. ಏನೋ ಎರಡ್ಮೂರನೆ ಕ್ಲಾಸ್ ಓದ್ಕೊಂಡ್ವಿ. ಈಗ ಸೈನ್ ಮಾಡೋಕು ಬರಲ್ಲ”. 21ನೇ ಶತಮಾನ ಡಿಜಿಟಲ್ ಕ್ರಾಂತಿಯ ಬಗ್ಗೆ ಮಾತನಾಡುತ್ತಿರುವ ಈ ಸಂದರ್ಭದಲ್ಲಿ ಕನಸೆಂದರೇನು?. ನಮ್ಮ ಹಸಿವು ಬಡತನಗಳ ಮುಂದೆ ಕನಸುಗಳು ಹುಟ್ಟಲೆ ಇಲ್ಲ, ಇವತ್ತಿಗೆ ಬದುಕಬೇಕೆಂದರೆ ಇವತ್ತಿಗೆ ದುಡಿಯಬೇಕು ಎನ್ನುವ ಮಾತುಗಳು ಕಟ್ಟಕಡೆಯ ದಲಿತ ಮಹಿಳೆಯರ ಜ್ವಲಂತ ನಿದರ್ಶನಗಳನ್ನು ಎತ್ತಿ ತೋರಿಸುತ್ತಿದೆ.

ಚಿಂತಾಮಣಿಯ ಚೌಡದೇನಹಳ್ಳಿಯ ಕೂಲಿಕಾರಕ ಹೆಣ್ಣುಮಕ್ಕಳು ಹೇಳುವಂತೆ “ನಮಗೆ ಓದಿಸಿ ಅಂತಾ ಯಾರನ್ನು ಕೇಳುವ ಸ್ಥಿತಿ ಇರಲಿಲ್ಲ. ಅವರ ಜೊತೆಗೆ ನಾವು ಕೆಲಸಕ್ಕೆ ಹೋಗೋದು ಶುರು ಮಾಡಿದ್ವಿ .ಆಗ ಅಮ್ಮನ ಜೊತೆಗೆ ಹೋಗ್ತಾ ಇದ್ವಿ, ಈಗ ಗಂಡನ ಮನೆಗೆ ಬಂದು ಅದೇ ಕೆಲಸ ಮಾಡ್ತಿದ್ದೀವಿ” ಎಂದು ಕನಸೇ ಕಾಣದ ಮಾತುಗಳನ್ನು ಆಡುತ್ತಾರೆ. “ಏನು ಓದಿಲ್ಲ, ಅಲ್ಪ ಸ್ವಲ್ಪ ಓದಿಕೊಂಡವರಿಗೆ ಗಾರ್ಮೆಂಟ್ಸ್‌ನಲ್ಲಿ ಕೆಲಸಕ್ಕೆ ತೆಗೆದುಕೊಳ್ಳುತ್ತಾರೆ. ಅದು 25 ವಯಸ್ಸಿನೊಳಗಿನ ಯುವತಿಯರನ್ನ ತೆಗೆದುಕೊಳ್ಳುತ್ತಾರೆ. ಅದಕ್ಕಿಂತ ಹೆಚ್ಚು ವಯಸ್ಸಿನವರಿಗೆ ಅದಕ್ಕೂ ಅವಕಾಶವಿರುವುದಿಲ್ಲ”. ಎಂದು ಮತ್ತೊಬ್ಬ ಪ್ರತಿಸ್ಪಂದಕಿ ಹೇಳುತ್ತಾರೆ. ಹೀಗೆ ತಮ್ಮ ಅನುಭವ ಹಂಚಿಕೊಂಡಿರುವ ಯುವ ದಲಿತ ಮಹಿಳೆಯರ ಸ್ಥಿತಿ ಕನಸುಗಳನ್ನು ಕಾಣಲೂ ಆಗದ ಪರಿಸ್ಥಿತಿ

ಒಂದು ಕಡೆಯಾದರೆ, ಕನಸು ಕಂಡು ಪ್ರತಿನಿತ್ಯ ಸಂಘರ್ಷಮಾಡುತ್ತಿರುವವರು ಮತ್ತೊಂದೆಡೆ ಕಣ್ಣೀರು ಹಾಕುತ್ತಿದ್ದಾರೆ.

ಕೋಲಾರದಲ್ಲಿ ಸಂದರ್ಶನ ಮಾಡಿದ 20 ಯುವತಿಯಲ್ಲಿ ಅರ್ಧದಷ್ಟು (10) ಯುವತಿಯರು ಟೀಚರ್ ಆಗಲು ಬಯಸಿದ್ದಾರೆ. ಆದರೆ ಕೆಲವರಿಗೆ ಬಡತನದಿಂದಾಗಿ ಆ ಕನಸನ್ನು ಪೂರ್ಣಗೊಳಿಸಿಕೊಳ್ಳಲು ಆಗಲಿಲ್ಲ. ಶಿಕ್ಷಣದ ಕನಸುಗಳಿದ್ದವು ಆದರೆ ನಾವೆಂದುಕೊಂಡದ್ದು ಆಗಲು ಸಾಧ್ಯವಾಗಿಲ್ಲ. ನನಗೆ ಐ.ಎ.ಎಸ್ ಆಫೀಸರ್ ಆಗಲು, ಲಾಯರ್ ಆಗಲು, ಟೀಚರ್ ಆಗಲು ಆಸೆ ಇತ್ತು ಆದರೆ ಮನೆಯ ಬಡತನದ ಕಾರಣಕ್ಕೆ ಸಾಧ್ಯವಾಗಲಿಲ್ಲ ಎಂದು ಇನ್ನೂ ಕೆಲವರು ತಮ್ಮ ಕನಸುಗಳನ್ನು ಬಿಚ್ಚಿಟ್ಟಿದ್ದಾರೆ.

ಬೆಂಗಳೂರಿನ ಕೆಲವು ಕಥನಗಳು ಭಾರತದಲ್ಲಿ ಜಾತಿ ಮತ್ತು ವರ್ಗದ ಅಂತರ-ಸಂಬಂಧವನ್ನು ಬೆಳಕಿಗೆ ತರುತ್ತವೆ. ವೃತ್ತಿಪರ ಕೋರ್ಸ್ ಅನ್ನು ಆರಿಸುವುದರ ಮೂಲಕ ಸಮಾಜದಲ್ಲಿ ಆರ್ಥಿಕವಾಗಿ ಮೇಲೇರಲು ಅಥವಾ "ಉತ್ತಮ"ವಾದ ಕೆಲಸಗಳನ್ನು ಪಡೆಯಲು ಸಾಧ್ಯವಾಗುತ್ತದೆ. ಆದರೆ ದಲಿತ ಮಹಿಳೆಯರಿಗೆ ತಮ್ಮ ಆಸಕ್ತಿಯ ಕನಸು ಕಾಣಲು ಮತ್ತು ಹಣಗಳಿಗೆಗಾಗಿ ಆ ಕ್ಷೇತ್ರದಲ್ಲಿ ತೊಡಗಿಸಲು ಸಾಧ್ಯವಾಗುವುದಿಲ್ಲ. ಮತ್ತೊಂದೆಡೆ ವೃತ್ತಿಪರ ಕೋರ್ಸ್‌ಗಳನ್ನು ಮಾಡಲು ಅವರಿಗೆ ಸಾಕಷ್ಟು ಆರ್ಥಿಕ ನೆರವು ಇಲ್ಲ. ವೈಯಕ್ತಿಕ ಚಲನಶೀಲತೆಯನ್ನು (ವೈಯಕ್ತಿಕ ಗುರುತು) ಗುರುತಿಸಿಕೊಳ್ಳಲು ಅಥವಾ ಆರ್ಥಿಕ ಚಲನಶೀಲತೆಯನ್ನು ಪಡೆಯಲು ಸಾಧ್ಯವಾಗುವುದಿಲ್ಲ. ವೃತ್ತಿಪರ ಕೋರ್ಸ್‌ಗಳನ್ನು ಮಾಡಲಾಗದೆ ಹೆಚ್ಚು ಕಲಾವಿಭಾಗದ (ಆರ್ಟ್ಸ್) ಕೋರ್ಸ್‌ಗಳನ್ನು ಮಾಡುವ ಸ್ಥಿತಿ ಇದೆ. "ಆರ್ಟ್ಸ್ ಕೋರ್ಸ್‌ಗಳು ಸಹ ಭಾರತೀಯ ವಿಶ್ವವಿದ್ಯಾಲಯಗಳಲ್ಲಿ ಅಳಿವಿನಂಚಿನಲ್ಲಿರುವ ಕೆಲವು ಕೋರ್ಸ್‌ಗಳಿಗೆ ಸೀಮಿತವಾಗಿವೆ. ಸಮಾಜಶಾಸ್ತ್ರ ಮತ್ತು ಇತಿಹಾಸದಂತಹ ಕೋರ್ಸ್‌ಗಳು ಪರಿಶೋಧನೆಗೆ ಹೆಚ್ಚಿನ ಅವಕಾಶವನ್ನು ಹೊಂದಿವೆ. ಆದರೆ ದಲಿತ ಮಹಿಳೆಯರಿಗೆ ಪ್ರವೇಶ ಪಡೆಯುವ ಕಾಲೇಜಿನಲ್ಲಿ ಅಲ್ಲ. ಆದ್ದರಿಂದ, ಪದವಿ ಮತ್ತು ಸ್ನಾತಕೋತ್ತರ ಪದವಿಗಳಲ್ಲಿನ ಕೋರ್ಸ್‌ಗಳ ಆಯ್ಕೆಯು ಅವರ ತುಳಿತಕ್ಕೊಳಗಾದ ಜಾತಿ ಮತ್ತು ಲಿಂಗ ಗುರುತಿಸುವಿಕೆಯಿಂದ ಸ್ಪಷ್ಟವಾಗಿ ನಿರ್ಧರಿಸಲ್ಪಡುತ್ತದೆ" ಎಂದು ಮೇರಿ ಜಾನ್ ತಿಳಿಸಿದ್ದಾರೆ.

ಈ ಕುರಿತು ಪ್ರತಿಸ್ಪಂದಕಿಯರು ಹೇಳಿರುವಂತೆ:

"ನನಗೆ ಕನ್ನಡ ಎಂ.ಎ ಮಾಡಲು ಇಷ್ಟ ಇರಲಿಲ್ಲ, ಬದಲಿಗೆ ಬಿ.ಕಾಂ ಮಾಡಿ ಬ್ಯಾಂಕ್‌ನಲ್ಲಿ ಕೆಲಸ ಮಾಡಬೇಕು ಅಂತ ಅಂದುಕೊಂಡೆ. ಆದರೆ ಯಾರ ಗೈಡೆನ್ಸ್ ಇಲ್ಲದೆ, ಬಿ.ಕಾಂಗೆ ಫೀಸ್ ಕಟ್ಟೋಕೆ ಆಗದೆ ಕಡಿಮೆ ಫೀಸ್ ಇದ್ದ ಆರ್ಟ್ಸ್ ತಗೊಂಡೆ" **-ಎಂ.ಎ ವಿದ್ಯಾರ್ಥಿನಿ.**

“ನನಗೆ ಎಂ.ಎ ಕನ್ನಡದ ಬಗ್ಗೆ ಏನು ಗೊತ್ತಿರಲಿಲ್ಲ. ನನ್ನ ಅಣ್ಣ ಕನ್ನಡ ಎಂ.ಎ ಮಾಡಲು ಸೂಚಿಸಿದ. ನನಗೆ ಎಂ.ಎಸ್.ಡಬ್ಲ್ಯೂ ಆಯ್ಕೆ ಮಾಡಿಕೊಳ್ಳೋ ಆಸೆ ಇತ್ತು. ಆದರೆ ಅದು ದುಬಾರಿ ಅಂತ ತೆಗೆದುಕೊಳ್ಳಲಿಲ್ಲ. ನನ್ನ ತಂಗಿಗೂ ಶಿಕ್ಷಣ ಸಿಗಬೇಕು ನನ್ನಿಂದ ಅವಳು ಶಿಕ್ಷಣದಿಂದ ವಂಚಿತಳಾಗಬಾರದು ಅಂತ ನಾನು ಎಂ.ಎ ಕನ್ನಡ ಆಯ್ಕೆ ಮಾಡಿಕೊಂಡೆ. ನನಗೆ ಆರ್ಥಿಕ ಬೆಂಬಲ ಇದ್ದಿದ್ದರೆ ನಾನು ಎಂ.ಎಸ್.ಡಬ್ಲ್ಯೂ ಆಯ್ಕೆ ಮಾಡಿಕೊಳ್ಳುತ್ತಿದ್ದೆ” **–ಎಂ.ಎ ವಿದ್ಯಾರ್ಥಿನಿ.**

“ನನಗೆ ನರ್ಸಿಂಗ್ ಮಾಡಬೇಕು ಅಂತ ಆಸೆ ಇತ್ತು ಆದರೆ, ಸಣ್ಣ ವಯಸ್ಸಿಗೆ ಅಂದರೆ 17ನೇ ವಯಸ್ಸಿಗೆ ಮದುವೆ ಮಾಡಿದರು. ಹಾಗಾಗಿ ಓದಿಗೆ ವಿದಾಯ ಹೇಳಬೇಕಾಯ್ತು. ಅಪ್ಪನ ಮತ್ತು ಗಂಡನ ಮನೆಯ ಆರ್ಥಿಕ ಪರಿಸ್ಥಿತಿಯ ಕಾರಣಗಳಿಂದ ಓದು ಮುಂದುವರೆಸೋಕೆ ಆಗಲಿಲ್ಲ. ನನ್ನ ಅಪ್ಪನ ಬಳಿ ದುಡ್ಡು, ಜಮೀನು ಇದ್ದಿದ್ದರೆ ನಾನು ಓದಬಹುದಿತ್ತು”. **–ಪ್ರಿಂಟಿಂಗ್ ಪ್ರೆಸ್‌ನಲ್ಲಿ ಸಹಾಯಕಿಯಾಗಿ ಕೆಲಸ ನಿರ್ವಹಿಸುತ್ತಿರೋ ಮಹಿಳೆ.**

“10ನೇ ತರಗತಿ ಆದ ಮೇಲೆ ನಾನು ಆರ್ಟ್ಸ್ ತಗೊಂಡೆ. ನಾನು 10ನೇ ಕ್ಲಾಸ್‌ನಲ್ಲಿ ಇದ್ದಾಗ ಸೈನ್ಸ್, ಕಾಮರ್ಸ್ ಮತ್ತು ಆರ್ಟ್ಸ್ ಅಂತ ಮೂರು ಡಿಸಿಪ್ಲೀನ್ ಇದೆ ಅಂತ ಅಷ್ಟೇಗೊತ್ತಿತ್ತು. ಆದರೆ ನಾನು ಯಾವುದನ್ನ ಆಯ್ಕೆ ಮಾಡಿಕೊಳ್ಳಬೇಕು?. ನನ್ನ ಸಾಮರ್ಥ್ಯಕ್ಕೆ ಯಾವ ಕೋರ್ಸ್ ಸೂಕ್ತ ಅನ್ನೋ, ಯಾವ ತಿಳುವಳಿಕೆಯೂ ಇರಲಿಲ್ಲ. ಎಸ್.ಎಸ್.ಎಲ್.ಸಿ ಮತ್ತು ಪಿ.ಯು.ಸಿಯಲ್ಲಿ ಯಾವ ಟ್ಯೂಷನ್ಸ್‌ಗೂ ಹೋಗಲಿಲ್ಲ. ಅಂಗಾಗಿ ಎಂ.ಎ ಕೋರ್ಸ್ ಸೂಕ್ತ ಅಂತ ಆಯ್ಕೆ ಮಾಡಿಕೊಂಡೆ” **–ಇಂಗ್ಲೀಷ್‌ನಲ್ಲಿ ಎಂ.ಎ ವಿದ್ಯಾರ್ಥಿನಿ**

ಮಂಗಳೂರಿನಲ್ಲಿ, ಶಿಕ್ಷಣ ಮತ್ತು ವೃತ್ತಿಜೀವನದ ಮೇಲೆ ಹಾಗೂ ಅವರ ಕನಸುಗಳ ಮೇಲೆ ಜಾತಿ ಮತ್ತು ಲಿಂಗದ ಪರಿಣಾಮಗಳು ಕಣ್ಣಿಗೆ ರಾಚುತ್ತವೆ. ಸಂವಾದಿಯೊಬ್ಬರು ನೀಡಿದ ಮಾಹಿತಿಯಂತೆ, ಬಡತನ ಮತ್ತು ಶಾಲೆಯಲ್ಲಿ ಅವರನ್ನು ನಡೆಸಿಕೊಳ್ಳುತ್ತಿದ್ದ ರೀತಿಯಿಂದಾಗಿ ಆಕೆ ಎರಡು ಬಾರಿ ಶಾಲೆಯಿಂದ ಹೊರಬೀಳಬೇಕಾಯಿತು. ಸಮಗ್ರ ಗ್ರಾಮೀಣ ಆಶ್ರಮದ ಸಹಾಯದಿಂದ ಆಕೆ ಶಾಲಾ ಶಿಕ್ಷಣವನ್ನು ಮುಂದುವರೆಸಲು ಹಾಗೂ ಕಾಲೇಜು ಶಿಕ್ಷಣದಲ್ಲಿ ಅಂಚಿನಲ್ಲಿರುವ ಮಹಿಳೆಯರಿಗಾಗಿ ಇರುವ ಹಾಸ್ಟೆಲ್ ಸೌಲಭ್ಯಗಳನ್ನು ಪಡೆದು ಉನ್ನತ ಶಿಕ್ಷಣದಲ್ಲಿ ತೊಡಗಿಕೊಂಡಿದ್ದಾರೆ.

ಕೊರಗ ಸಮುದಾಯದ ಮತ್ತೊಬ್ಬ ಪ್ರತಿಸ್ಪಂದಕಿ ನೀಡಿದ ಮಾಹಿತಿ ಪ್ರಕಾರ, “ಈ ಸಮುದಾಯದ ಬಗೆಗಿನ ಪೂರ್ವಾಗ್ರಹಗಳಿಂದಾಗಿ ಇಡೀ ಸಮುದಾಯವನ್ನು ಬಲವಂತವಾಗಿ ಹರಿಯದೆ ಒಂದೇ ಕಡೆ ಇರುವ ಕೊಳಚೆ ನೀರು, ನೈರ್ಮಲ್ಯ ಕೊರತೆ, ಸರಿಯಾದ ಆರೋಗ್ಯ ಸೌಲಭ್ಯ ಇಲ್ಲದ ಊರ ಹೊರ ಪ್ರದೇಶಗಳಲ್ಲಿ

ಇರಿಸಿದರು ಮತ್ತು ಆ ಕಾರಣದಿಂದಾಗಿ ಉಂಟಾದ ಖಾಯಿಲೆಗಳನ್ನೇ ನೆಪಮಾಡಿಕೊಂಡು ಇನ್ನಷ್ಟು ತುಚ್ಚವಾಗಿ ಕಾಣುತ್ತಾರೆ" ಎಂದು ತಿಳಿಸಿದರು.

"ನಮಗಾಗಿ ಪ್ರತ್ಯೇಕವಾದ ಮೇಜುಗಳನ್ನು ಇತರರಿಂದ ದೂರದಲ್ಲಿ ಇರಿಸುತ್ತಿದ್ದರು. ಇದರಿಂದ ನನಗೆ ತುಂಬಾ ಅವಮಾನವಾಗುತ್ತಿತ್ತು. ಎಷ್ಟೋ ಸಲ ನನಗೆ ಈ ಕಾರಣದಿಂದ ಓದು ಮುಂದುವರೆಸುವುದೇ ಬೇಡ ಎಂದು ಅನ್ನಿಸುತ್ತಿತ್ತು. ಆದರೆ, ಹೇಗೋ ಒಂದು ದೃಢ ನಿರ್ಧಾರ ಮಾಡಿ ಎಲ್ಲಾ ರೀತಿಯ ಅವಮಾನಗಳನ್ನು ಸಹಿಸಿ ಪಿ. ಹೆಚ್‌ಡಿವರೆಗೆ ಓದಿದೆ" ಎಂದು ಮಂಗಳೂರಿನ ಯುವತಿ ತಿಳಿಸಿದರು.

ಈ ರೀತಿಯ ಲಿಂಗಾಧಾರಿತ ಮತ್ತು ಜಾತಿಯಾಧಾರಿತವಾಗಿ ಸಿಕ್ಕಿರುವ ಶಿಕ್ಷಣವು ಮಹಿಳೆಯರು ಮುಂದೆ ಹೋಗುತ್ತಿದ್ದ ವೃತ್ತಿಗಳ ಮೇಲೂ ನೇರವಾಗಿ ಪ್ರಭಾವಿಸಿದ್ದವು. ಈ ರೀತಿಯ ಅನುಭವಗಳನ್ನು ವೃತ್ತಿಜೀವನದ ಮೇಲೆ ಕೇಂದ್ರೀಕರಿಸಿರುವ ಮುಂದಿನ ಅಧ್ಯಾಯಗಳನ್ನು ದಾಖಲಿಸಲಾಗಿದೆ.

### ದೇವದಾಸಿ ವ್ಯವಸ್ಥೆ ಮತ್ತು ಕೈತಪ್ಪಿಹೋಗುವ ಶಿಕ್ಷಣದ ಕಲ್ಪನೆಗಳು

ದೇವದಾಸಿ ಸಮುದಾಯದ ಹಿನ್ನೆಲೆಯಿರುವ ಬಿಜಾಪುರದಲ್ಲಿನ ಯುವತಿಯರು ಶಿಕ್ಷಣ ಅಥವಾ ವೃತ್ತಿಜೀವನದ ಬಗ್ಗೆ ಕನಸು ಕಾಣುವುದು ಅಂದರೇನು ಎಂದೇ ಕೇಳುತ್ತಾರೆ. ದಲಿತ ಸಮುದಾಯಗಳಲ್ಲೇ ಅತ್ಯಂತ ಅಂಚಿನಲ್ಲಿರುವ ಇಲ್ಲಿನ ಕೆಲವು ಮಹಿಳೆಯರಿಗೆ ಶಿಕ್ಷಣವನ್ನು ಒಂದು ಹಕ್ಕು ಎಂದು ಕಾಣಲಿಕ್ಕೂ ಸಾಧ್ಯವಾಗುತ್ತಿಲ್ಲ. ಅನೇಕರಿಗೆ ಶಿಕ್ಷಣವನ್ನು ಪಡೆಯಲು ಸಾಧ್ಯವಾಗದ ಕಾರಣ ಇದು ಅವರಿಗೆ ಅತ್ಯಂತ ದೂರದ ಮಾತೇ ಸರಿ. ಸಂಶೋಧನೆಯಲ್ಲಿ ಭಾಗವಹಿಸಿದವರಲ್ಲಿ, ಈ ಸಮುದಾಯದ ಒಬ್ಬರೇ ಒಬ್ಬರು ಮಾತ್ರ 12 ನೇ ತರಗತಿಯ ತನಕ ಓದಿದ್ದಾರೆ. ಉಳಿದವರೆಲ್ಲಾ ಮಧ್ಯದಲ್ಲೇ ಶಾಲೆ ತೊರೆದವರೇ ಆಗಿದ್ದಾರೆ. ಅಂತಹವರಲ್ಲಿ ಒಬ್ಬ ಪ್ರತಿಸ್ಪಂದಕಿ ಶಾಲಾ ಶಿಕ್ಷಣದ ಬಗ್ಗೆ ಹೀಗೆ ಹೇಳಿದ್ದಾರೆ:

"ನಾನು ದೇವದಾಸಿಯಾಗಿರುವುದೇ ನನ್ನ ಬದುಕು. ಶಿಕ್ಷಣವು ನನ್ನ ಬದುಕಿನ ಒಂದು ಭಾಗ ಎಂದು ನನಗೆ ಎಂದೂ ಅನಿಸಲಿಲ್ಲ. ಅದರ ಬಗ್ಗೆ ನಾನೆಂದೂ ಕನಸು ಕಂಡಿಲ್ಲ ಮತ್ತು ಅದರ ಬಗ್ಗೆ ನಮಗೆ ಯಾರೂ ಏನೂ ಹೇಳಿಲ್ಲ."

ಈ ಪ್ರದೇಶಗಳಲ್ಲಿ ಸ್ಥಳೀಯ ವಾಸ್ತವಗಳನ್ನು ಅರ್ಥಮಾಡಿಕೊಳ್ಳುವ, ಸ್ಥಳೀಯ ಭಾಷೆಗೆ ಅನುಗುಣವಾಗಿ ವಿನ್ಯಾಸಗೊಳಿಸಲಾದ ಶಾಲಾ ಶಿಕ್ಷಣ ವ್ಯವಸ್ಥೆಯ ಅವಶ್ಯಕತೆಯಿದೆ. ಅದರಿಂದಾಗಿ ದಲಿತ ಬಾಲಕಿಯರು ಶಾಲೆ ಬಿಡುವುದನ್ನು ಕಡಿಮೆ ಮಾಡುವುದನ್ನು ಖಚಿತಪಡಿಸಿಕೊಳ್ಳಬೇಕಿದೆ.

## ಶಿಕ್ಷಣ ಮತ್ತು ವೃತ್ತಿ ಮಾರ್ಗದರ್ಶನದ ಕೊರತೆ

"ನಾನೊಬ್ಬ ಬರಹಗಾರನಾಗಬೇಕೆಂದು ಬಯಸುತ್ತೇನೆ. ಕಾರ್ಲ್ ಸೇಗನ್‌ನಂತೆ ನಾನೊಬ್ಬ ವಿಜ್ಞಾನ ಬರಹಗಾರನಾಗಬೇಕು"–**ರೋಹಿತ್ ವೇಮುಲ**

ಈಗಿನ ದಲಿತ ಯುವತಿಯರಿಗೆ ತಮ್ಮ ಓದು ಮತ್ತು ವೃತ್ತಿಯ ಕನಸುಗಳ ಕುರಿತು ಮಾರ್ಗದರ್ಶನದ ಕೊರತೆ ಇದೆ. ಔಪಚಾರಿಕ ಶಿಕ್ಷಣ ವ್ಯವಸ್ಥೆಯಲ್ಲಿ ಹತ್ತನೆ ತರಗತಿ ಬಹುಮುಖ್ಯವಾಗಿರುತ್ತದೆ. ಹತ್ತನೆ ತರಗತಿಯ ನಂತರದ ಆಯ್ಕೆಗಳು ಅವರ ವೃತ್ತಿ ಮಾರ್ಗಗಳನ್ನು ನಿರ್ದೇಶಿವುದರಿಂದ ವಿದ್ಯಾರ್ಥಿ/ನಿಯರಿಗೆ ನಿರ್ಣಾಯಕ ವರ್ಷವಾಗಿದೆ. ವಿದ್ಯಾರ್ಥಿ/ನಿಯರಿಗೆ ಹನ್ನೆರಡನೇ ತರಗತಿಯ ನಂತರ ತಮ್ಮ ಕೋರ್ಸ್ ಅಥವಾ ಶಿಸ್ತನ್ನು ಬದಲಾಯಿಸುವ ಆಯ್ಕೆ ಇದ್ದರೂ, ಹತ್ತನೇ ತರಗತಿಯ ನಂತರದ ವಿಜ್ಞಾನೇತರ ಸ್ಟ್ರೀಮ್‌ಗಳಲ್ಲಿರುವವರಿಗೆ ಈ ಆಯ್ಕೆಯನ್ನು ಮುಚ್ಚಲಾಗಿದೆ. ಈ ಸನ್ನಿವೇಶದಲ್ಲಿ, ವಿದ್ಯಾರ್ಥಿ/ನಿಗಳಿಗೆ ಪ್ರಜ್ಞಾಪೂರ್ವಕವಾಗಿ ವೃತ್ತಿ ಮಾರ್ಗಗಳನ್ನು ನೀಡುವುದು ಅತ್ಯಗತ್ಯವಾಗಿದೆ. ಅವರು ಆಯ್ಕೆ ಮಾಡಲು ಮತ್ತು ಅವರ ಕನಸುಗಳನ್ನು ಸಾಧಿಸುವ ಅವಕಾಶಗಳತ್ತ ಹೆಜ್ಜೆಹಿಡಲು ಚಿಕ್ಕ ವಯಸ್ಸಿನಲ್ಲಿಯೇ ಮಾರ್ಗದರ್ಶನವನ್ನು ನೀಡುವುದು ಬಹಳಮುಖ್ಯವಾಗಿದೆ.

ಬೆಂಗಳೂರಿನಲ್ಲಿ ನಮಗೆ ಪ್ರತಿಕ್ರಿಯಿಸಿದವರಲ್ಲಿ ಶೇ 80% ರಷ್ಟು ನಮಗೆ 10ನೇ ತರಗತಿಯಲ್ಲಿ ಇದ್ದಾಗ ಯಾವುದೇ ಶೈಕ್ಷಣಿಕ ಮಾರ್ಗದರ್ಶನ ಸಿಕ್ಕಿಲ್ಲ ಎಂದು ತಿಳಿಸಿದರು. ಹೀಗಾಗಿ 10 ನೇ ತರಗತಿ ನಂತರ ಯಾವರೀತಿಯ ಶೈಕ್ಷಣಿಕ ಆಯ್ಕೆಗಳಿವೆ ಎಂಬುದರ ಬಗ್ಗೆ ಅವರಿಗೆ ಅರಿವಿರಲಿಲ್ಲ. ಶಿಕ್ಷಣ ಮಾರ್ಗದರ್ಶನದ ಕೊರತೆ, ಕೋರ್ಸ್‌ಗಳ ಮಾಹಿತಿ ಕೊರತೆ ಹಾಗೂ ಇತರೆ ಕಾರಣಗಳಿಂದ ದಲಿತ ಮಹಿಳೆಯರು ಆಸಕ್ತಿಯ ವಿಷಯಗಳನ್ನು ಆಯ್ಕೆ ಮಾಡಿಕೊಂಡಿಲ್ಲ ಎಂಬ ಅಂಶ ತಿಳಿದುಬಂದಿದೆ. ಈ ನಿಟ್ಟಿನಲ್ಲಿ ಪ್ರತಿಸ್ಪಂದಕಿಯರಿಂದ ತಿಳಿದು ಬಂದ ಪ್ರಮುಖ ಅಂಶಗಳ ಸಾರಾಂಶವನ್ನು ಗಮನಿಸುವುದಾದರೆ:

1. ಬಹುತೇಕ ದಲಿತ ಮಹಿಳೆಯರು ಈಗಲೂ ಮೊದಲ ತಲೆಮಾರಿನ ಶೈಕ್ಷಣಿಕ ಹಿನ್ನಲೆಯವರಾದ್ದರಿಂದ ಅವರಿಗೆ ಕುಟುಂಬದ ಸದಸ್ಯರಿಂದಾಗಲಿ ಅಥವಾ ಸಂಬಂಧಿಕರಿಂದಾಗಲಿ ಲಭ್ಯವಿರುವ ಶೈಕ್ಷಣಿಕ ಅವಕಾಶಗಳ ಬಗ್ಗೆ ಮಾಹಿತಿ ಸಿಕ್ಕಿಲ್ಲ.

2. ಜ್ಞಾನವು, ಶಕ್ತಿ ಮತ್ತು ಸಾಮಾಜಿಕ ಬಂಡವಾಳವಾಗಿದ್ದು ಅದು ಭಾರತದಲ್ಲಿ ಪ್ರಬಲ ಜಾತಿ, ವರ್ಗ ಮತ್ತು ಲಿಂಗಗಳ ಕೈಯಲ್ಲಿದೆ. ಬೆಂಗಳೂರಿನಂತಹ ಮಹಾನಗರಗಳು ಮಹಿಳೆಯರಿಗೆ, ದಲಿತ ಮಹಿಳೆಯರಿಗೆ ವಿವಿಧ ವಿಭಾಗಗಳ, ಕೋರ್ಸ್‌ಗಳ ಮತ್ತು ಕಾಲೇಜುಗಳ ಬಗ್ಗೆ ಮಾಹಿತಿಯನ್ನು ಒದಗಿಸುತ್ತವೆ ಎಂದು ತೋರುತ್ತದೆ. ಆದರೆ ಬೆಂಗಳೂರಿನ 20 ರಲ್ಲಿ 19 ಪ್ರತಿಸ್ಪಂದಕಿಯರು ಮೆಟ್ರೋಪಾಲಿಟನ್ ಜಾಗದಲ್ಲಿಯೂ ಸಹ

ಜ್ಞಾನ ಮತ್ತು ಮಾಹಿತಿ ಹಾಗೂ ವೃತ್ತಿಮಾರ್ಗದರ್ಶನವನ್ನು ಪಡೆಯದ ಅನುಭವಗಳನ್ನು ಹಂಚಿಕೊಂಡಿದ್ದಾರೆ. ಶಿಕ್ಷಣವಿಷಯಕ್ಕೆ ಸಂಬಂಧಿಸಿದಂತೆ ಮಹಾನಗರಗಳ ಮತ್ತು ಹಳ್ಳಿಗಳ ನಡುವಿನ ಪರಿಸ್ಥಿತಿ ಭಿನ್ನವಾಗಿಲ್ಲ ಎಂಬುದನ್ನು ಇದರಿಂದ ಗುರುತಿಸಬಹುದಾಗಿದೆ.

ದಲಿತ ಮಹಿಳೆಯರಿಗೆ ಸಾಮಾಜಿಕ ಬಂಡವಾಳವಿದ್ದು ಶೈಕ್ಷಣಿಕ – ವೃತ್ತಿ ಮಾರ್ಗದರ್ಶನ ಸಿಕ್ಕಿದ್ದರೆ ಅವರ ಕನಸು ಹಾಗೂ ವೃತ್ತಿ ಕುರಿತ ಆಕಾಂಕ್ಷೆಗಳ ಬದಲಾಗುತ್ತಿದ್ದವು ಎಂಬುದು ಹಲವು ಪ್ರತಿಸ್ಪಂದಕಿಯರ ಅಭಿಪ್ರಾಯ. ಈ ಕುರಿತು ಕೆಲವು ಪ್ರತಿಕ್ರಿಯೆಗಳನ್ನು ಗಮನಿಸೋಣ.

"ನಾನು ಏಳನೇ ತರಗತಿಯವರೆಗೆ ಓದಿದ್ದೇನೆ. ನನಗೆ ನನ್ನ ಬದುಕಿನ ಬಗ್ಗೆ ಯಾವುದೇ ಕನಸಾಗಲಿ, ಆಕಾಂಕ್ಷೆಯಾಗಲಿ ಇರಲಿಲ್ಲ. ಜೊತೆಗೆ ನನಗೆ ಶಿಕ್ಷಣವು ಮುಖ್ಯವೆಂದೂ ತಿಳಿದಿರಲಿಲ್ಲ. ಏಳನೇ ತರಗತಿಯಲ್ಲಿ ಫೇಲಾದ ಮೇಲೆ ಓದನ್ನು ಮುಂದುವರೆಸಲಿಲ್ಲ. ಅದರ ಬಗ್ಗೆ ನನಗೆ ಈಗಲೂ ಬೇಸರವಿದೆ. ನಾನು ಓದಿದ್ದರೆ ನಮ್ಮ ಮನೆಯಲ್ಲಿ ಓದಿಸುತ್ತಿದ್ದರು. ಓದು ಮುಂದುವರೆಸಿದ್ದರೆ ಈಗ ಒಳ್ಳೆಯ ಕೆಲಸದಲ್ಲಿರಬಹುದಿತ್ತು ಅಂಥ ಅನಿಸುತ್ತದೆ. ನನಗೆ ನನ್ನ ಮನೆಯವರ ಬೆಂಬಲ ಸಿಕ್ಕಿದ್ದರೆ, ನೆರೆಹೊರೆಯವರು ನನಗೆ ಓದುವುದಕ್ಕೆ ಸಹಾಯ ಮಾಡಿದ್ದರೆ ಅಥವಾ ನನ್ನ ತಂದೆ, ತಾಯಿ ನನ್ನನ್ನು ಟ್ಯೂಷನ್‌ಗೆ ಕಳಿಸಿದ್ದರೆ ನಾನು ಫೇಲ್ ಆಗದೆ ಓದು ಮುಂದುವರಿಸಬಹುದಿತ್ತು" ಎಂದು ತಮ್ಮ ಅನಿಸಿಕೆಯನ್ನು ವ್ಯಕ್ತಪಡಿಸಿದರು.– **ಮನೆ ಕೆಲಸದ ವೃತ್ತಿ, ಕೆ.ಎಸ್. ಗಾರ್ಡನ್**.

"ನಾನು ಪಿಯುಸಿಯಲ್ಲಿ ಆರ್ಟ್ಸ್ ತಗೊಂಡಿದ್ದೆ. ಮನೆಯಲ್ಲಿ ಯಾರೂ ಉನ್ನತ ಶಿಕ್ಷಣ ಪಡೆದವರಿರಲಿಲ್ಲ ಹಾಗಾಗಿ ನನಗೆ ಯಾವುದೇ ಮಾರ್ಗದರ್ಶನ ಸಿಕ್ಕಿರಲಿಲ್ಲ. ನನ್ನ ಬಹುತೇಕ ಗೆಳತಿಯರು ಆರ್ಟ್ಸ್ ತೆಗೆದುಕೊಂಡಿದ್ದರಿಂದ ನಾನು ಅದನ್ನೇ ಆಯ್ಕೆ ಮಾಡಿಕೊಂಡೆ. ನನಗೆ ಯಾವುದೇ ಗುರಿ ಇರಲಿಲ್ಲ. ನನಗೆ ಸರಿಯಾದ ಮಾರ್ಗದರ್ಶನ ಸಿಕ್ಕಿದ್ದರೆ, ಪಿಯುಸಿ ನಂತರ ಎಲ್.ಎಲ್.ಬಿ ಮಾಡುತ್ತಿದ್ದೆ. ಈಗಲೂ ನನಗೆ ಲಾಯರ್ ಆಗುವ ಆಸೆ ಇದೆ". **–ಶಿಕ್ಷಕಿ, ಆನೇಕಲ್**.

"ನಮ್ಮ ಕಾಲೇಜಿನ ಒಂದು ಕಾರ್ಯಕ್ರಮಕ್ಕೆ ಕೌನ್ಸಿಲಿಂಗ್ ಬಗ್ಗೆ ಮಾತನಾಡಲು ಕೌನ್ಸಿಲರ್ ಒಬ್ಬರು ಬಂದಿದ್ದರು. ಅವರ ಮಾತುಗಳನ್ನು ಕೇಳಿದ ನಂತರ ನನಗೆ ಕೌನ್ಸಿಲರ್ ಆಗಬೇಕೆಂಬ ಆಸೆಯಾಯಿತು. ಹಾಗಾಗಿ ಎಂ.ಎಸ್.ಡಬ್ಲ್ಯು ಮಾಡಿದೆ". "ಬಿ.ಎಡ್, ಡಿ.ಎಡ್ ಮಾಡಿದರೆ ಬೇಗ ಸರ್ಕಾರಿ ಕೆಲಸ ಸಿಗಬಹುದು ಅಂತಾ ಇಷ್ಟವಿಲ್ಲದಿದ್ದರೂ ಅದನ್ನೆ ಮಾಡಬೇಕಾಗಿ ಬಂತು" ಎಂದು ಮತ್ತೊಬ್ಬರು ಹೇಳುತ್ತಾರೆ. ಈಗಾಗಲೇ ಪದವಿ ಮತ್ತು ಸ್ನಾತಕೋತ್ತರ ಪದವಿಯನ್ನು ಪೂರೈಸಿರುವ ಯುವತಿಯರಲ್ಲಿ ತಾವು ಓದಿರುವ ಓದಿನ ಬಗ್ಗೆ ತುಂಬಾ

ಗೊಂದಲವಿದೆ. ಬಹಳ ಸ್ಪಷ್ಟವಾಗಿ ಏನನ್ನು ಓದಬೇಕು ಎಂಬುದರ ಬಗ್ಗೆ ಮಾಹಿತಿ ಇಲ್ಲ. ತಾವು ಮಾಡಬೇಕಾದ ವೃತ್ತಿಯ ಬಗ್ಗೆ ಮಾರ್ಗದರ್ಶನವಿಲ್ಲ ಎಂಬ ಅಂಶಗಳನ್ನು ಬಿಚ್ಚಿಟ್ಟಿದ್ದಾರೆ.

"ನಾನು ನನ್ನ ಗೆಳತಿ ಎರಡು ಚೀಟಿಗಳನ್ನು ಬರೆದೆವು. ಒಂದರಲ್ಲಿ ಜಾನಪದ ಸಾಹಿತ್ಯ, ಮತ್ತೊಂದರಲ್ಲಿ ಕನ್ನಡ ಎಂ.ಎ. ಚೆನ್ನಾಗಿ ಕುಲುಕಿ ಮನಸ್ಸಿನಲ್ಲಿ ದೇವ್ರನ್ನ ನೆನೆದು ಒಂದು ಚೀಟಿ ಎತ್ತಿದೆವು. ಬಂದಿದ್ದು ಜಾನಪದ ಎಂಎ. ಮನೇಲಿ ಕಷ್ಟಪಟ್ಟು ಓದಿ ನಮ್ಮ ಸ್ಥಿತಿ ನಿಮಗೆ ಬರುವುದು ಬೇಡ ಎನ್ನುತ್ತಿದ್ದರು ಆದರೆ ಏನನ್ನು ಓದಬೇಕು ಎಂದು ಯಾರು ಗೈಡ್ ಮಾಡಲಿಲ್ಲ". ಇದು ನಮ್ಮ ಪ್ರತಿಸ್ಪಂದಕಿಯೊಬ್ಬರ ಮಾತು.

ನಮ್ಮ ಪ್ರತಿಸ್ಪಂದಕಿಯರಲ್ಲಿ ಓದಿರುವ ಬಹುತೇಕರು ಆರ್ಥಿಕ ಭದ್ರತೆಯ ಕಾರಣಕ್ಕಾಗಿ ಡಿ.ಎಡ್, ಬಿ.ಎಡ್, ಟಿ.ಸಿ.ಎಚ್, ತರಹದ ತರಬೇತಿಗಳನ್ನು ಪಡೆದಿದ್ದಾರೆ. ಇಲ್ಲಿ ದಲಿತ ಯುವತಿಯರೊಂದಿಗೆ ಅವರ ಕನಸುಗಳ ಬಗ್ಗೆ, ಅವರಿಗಿರುವ ಆಸಕ್ತಿ, ಸಾಮರ್ಥ್ಯಗಳ ಬಗ್ಗೆ ಮಾತಾಡುವುದು ಕಡಿಮೆ. ಆದರೆ ಜೀವನ ನಿರ್ವಹಣೆಗಾಗಿ ಹೆಚ್ಚು ಸ್ಕೋಪ್, ಸೆಕ್ಯುರಿಟಿ, ನೀಡುವ ಕೆಲಸಗಳಿಗೆ ಅವರನ್ನು ಸಿದ್ಧಗೊಳಿಸಿದಂತಿದೆ. ದಲಿತ ಸಂಘಟನೆಗಳು, ದಲಿತ ಸ್ತ್ರೀವಾದಿಗಳು ಶೈಕ್ಷಣಿಕ ಕ್ಷೇತ್ರಗಳಲ್ಲಿ ದಲಿತ ಯುವತಿಯರ ಪ್ರಾತಿನಿಧ್ಯದ ಬಗ್ಗೆ ಮಾತನಾಡಿದ್ದಾರೆ. ಆದರೆ ಅದಕ್ಕೆ ಪೂರಕವಾದ ಯೋಜನೆಗಳು, ಮಾಹಿತಿ, ಮಾರ್ಗದರ್ಶನದ ಕೊರತೆಯನ್ನು ಯಾರು ಪರಿಗಣಿಸಿಲ್ಲ.

### ಉನ್ನತ ಶಿಕ್ಷಣಕ್ಕೆ ಪ್ರವೇಶ

ಕೋಲಾರದಲ್ಲಿ, ಸ್ಥಳೀಯ ಸ್ವಯಂಸೇವಾ ಸಂಸ್ಥೆಗಳು, ರಾಜಕೀಯ ಸಂಸ್ಥೆಗಳು ಮತ್ತು ಪ್ರಗತಿಪರ ಗುಂಪುಗಳ ಜೊತೆಗೆ ಒಡನಾಟವಿರುವ ಕೆಲವು ಯುವತಿಯರು ಉನ್ನತ ಶಿಕ್ಷಣ ಮತ್ತು ವಿಭಿನ್ನ ವೃತ್ತಿಪರ ಕ್ಷೇತ್ರಗಳಲ್ಲಿ ತಮ್ಮ ಭವಿಷ್ಯವನ್ನು ಕಲ್ಪಿಸಿಕೊಳ್ಳಲು ಸಮರ್ಥರಾಗಿದ್ದಾರೆ. ಬಿಜಾಪುರದಲ್ಲಿ ಅಕ್ಕಮಹಾದೇವಿ ವಿಶ್ವವಿದ್ಯಾಲಯವು ಇದೇ ರೀತಿಯ ವಾತಾವರಣವನ್ನು ಸೃಷ್ಟಿಸಿದೆ.

ದೇವದಾಸಿ ಸಮುದಾಯದ ಮಹಿಳೆಯರು ವ್ಯವಸ್ಥೆಯಿಂದ ಹೊರಗುಳಿದಿದ್ದರೂ, ಇತರ ಜಾತಿಗಳಾದ ಮಾದಿಗ ಮತ್ತು ಸಂಗಾರುವಿನ ಮಹಿಳೆಯರು ಮೀಸಲಾತಿ ಮತ್ತು ಹಾಸ್ಟೆಲ್ ಸೌಲಭ್ಯಗಳಂತಹ ಬೆಂಬಲ ವ್ಯವಸ್ಥೆಗಳಿಂದಾಗಿ ಔಪಚಾರಿಕ ಶಿಕ್ಷಣಕ್ಕೆ ಪ್ರವೇಶ ಪಡೆಯಲು ಸಾಧ್ಯವಾಗಿದೆ. ಅದಾಗ್ಯೂ, ಈ ಸಂಶೋಧನೆಯಲ್ಲಿ ಭಾಗಿಯಾಗಿದ್ದ ಇತರ ಜಿಲ್ಲೆಗಳ ಯುವ ದಲಿತ ಮಹಿಳೆಯರಂತೆ ಈ ಮಹಿಳೆಯರಿಗೂ ಉನ್ನತ ಶಿಕ್ಷಣದ ಬಗ್ಗೆ ಯೋಜನೆಗಳನ್ನು ಮತ್ತು ಕನಸುಗಳನ್ನು ರೂಪಿಸುವ ಮಾರ್ಗದರ್ಶನ ಇಲ್ಲ. ಕೆಲವರು ಸರ್ಕಾರಿ ಉದ್ಯೋಗಗಳನ್ನು ಪಡೆಯಲು ವಿಫಲವಾದ ನಂತರ ಸ್ನಾತಕೋತ್ತರ ಪದವಿಗಳನ್ನು ಪಡೆಯಲು ಹೊರಟಿದ್ದಾರೆ. ಈ ಮಹಿಳೆಯರು ಈಗ ವಿಶ್ವವಿದ್ಯಾಲಯದಲ್ಲಿ ಮಾರ್ಗದರ್ಶಕರು ಮತ್ತು ಸಹಪಾಠಿಗಳೊಂದಿಗೆ ಚರ್ಚೆ ನಡೆಸಿದ

ನಂತರ ಡಾಕ್ಟರೇಟ್ ಪದವಿ ಮಾಡಲು ಮತ್ತು ಬೋಧನೆಯಲ್ಲಿ ತೊಡಗಲು ಆಸಕ್ತಿ ಹೊಂದಿದ್ದಾರೆ ಸಂಶೋಧನೆಯಿಂದ ತಿಳಿದು ಬಂದಿದೆ.

ವಿಜಯಪುರದಲ್ಲಿ ರಾಜ್ಯ ಸರ್ಕಾರದ ವಿಶ್ವವಿದ್ಯಾಲಯ ಇದ್ದರೂ ಈ ಪ್ರದೇಶದ ಮಹಿಳೆಯರ ನಿಜ ಬದುಕಿನ ವಾಸ್ತವಗಳನ್ನು ಅದು ಪ್ರತಿಬಿಂಬಿಸಿಲ್ಲ. ಈ ಭಾಗದ ಹೆಣ್ಣುಮಕ್ಕಳು ತಮ್ಮ ವೈಯಕ್ತಿಕ ಪ್ರಯತ್ನ, ಹೋರಾಟಗಳ ಮೂಲಕ ಅವಕಾಶಗಳನ್ನು ಪಡೆದುಕೊಂಡು ಉನ್ನತ ಶಿಕ್ಷಣಕ್ಕೆ ಪ್ರವೇಶಿಸಲು ಸಾಧ್ಯವಾದ ನಂತರವೇ, ಅವರು ವಿಶ್ವವಿದ್ಯಾಲಯದೊಳಗಿನ ಮಹಿಳಾ ಮತ್ತು ಸ್ತ್ರೀವಾದಿ ಅಧ್ಯಯನ ಉದ್ದೇಶಗಳನ್ನು ಕಂಡುಕೊಂಡಿದ್ದಾರೆ.

ದುರಾದೃಷ್ಟವಶಾತ್, ಬಿಜಾಪುರದ ಕೆಲವು ವಿವಾಹಿತ ಮಹಿಳೆಯರಿಗೆ, ಪಿಎಚ್‌ಡಿ ಪಡೆದ ನಂತರವೂ ಅವರ ಕನಸುಗಳು ಈಡೇರಿಲ್ಲ ಎಂದು ನಮ್ಮ ಸಂಶೋಧನೆಯು ತೋರಿಸುತ್ತದೆ. ಇದು ಅವರನ್ನು ಮನೆಯಲ್ಲಿ ಉಳಿಯಲು ಒತ್ತಾಯಿಸುವ ಪಿತೃಪ್ರಧಾನ ವ್ಯವಸ್ಥೆ ಮತ್ತು ಕನಸುಗಳನ್ನು ಬಿಚ್ಚಿಡಲು ಅನುಕೂಲಕರವಾದ ವಾತಾವರಣ ಇಲ್ಲದಿರುವುದು ಮತ್ತು ಅವರ ಗಂಡಂದಿರು ತಮ್ಮ ವಿಚಾರ ವಿಷಯಗಳಿಗೆ ಬೆಂಬಲ ನೀಡದಿರುವ ಕಾರಣಗಳೂ ಇವೆ ಎಂಬುದು ತಿಳಿದುಬಂದಿದೆ.

### ಶೈಕ್ಷಣಿಕ ಸ್ಥಳಗಳಲ್ಲಿ ಜಾತಿ, ಲಿಂಗರಾಜಕಾರಣ

2007 ರಲ್ಲಿ, ನವದೆಹಲಿಯ ಅಖಿಲ ಭಾರತ ವೈದ್ಯಕೀಯ ವಿಜ್ಞಾನ ಸಂಸ್ಥೆಯಲ್ಲಿ (ಏಮ್ಸ್) ಎಸ್ಸಿ/ಎಸ್ಟಿ ವಿದ್ಯಾರ್ಥಿ/ನಿಯರಿಗೆ ಕಿರುಕುಳ ನೀಡಿದ ಆರೋಪದ ಬಗ್ಗೆ ತನಿಖೆ ನಡೆಸಲು ಕೇಂದ್ರ ಸರ್ಕಾರ ರಚಿಸಿದ ಸಮಿತಿಯು ಈ ವಿದ್ಯಾರ್ಥಿ/ನಿಯರ ವಿರುದ್ಧ ಅತಿರೇಕದ ತಾರತಮ್ಯವನ್ನು ಗುರುತಿಸಿದೆ. ಮಾಜಿ ಯುಜಿಸಿ ಅಧ್ಯಕ್ಷ ಸುಖದೇವ್ ಥೋರತ್ ನೇತೃತ್ವದ ಸಮಿತಿಯು ಏಮ್ಸ್‌ನಲ್ಲಿ ಅರ್ಧದಷ್ಟು ಎಸ್ಸಿ/ಎಸ್ಟಿ ವಿದ್ಯಾರ್ಥಿ/ರ್ಥಿನಿಯರ ಸಮೀಕ್ಷೆ ಮಾಡಿತು. ಇದು ಏಮ್ಸ್ ಹಾಸ್ಟೆಲ್‌ಗಳಲ್ಲಿ ಪ್ರತ್ಯೇಕತೆಯ ಪುರಾವೆಗಳನ್ನು ಗುರುತಿಸಿತು.

ಎಸ್ಸಿ/ಎಸ್ಟಿ ವಿದ್ಯಾರ್ಥಿ/ರ್ಥಿನಿಯರು ಪ್ರಬಲ ಜಾತಿ ವಿದ್ಯಾರ್ಥಿಗಳಿಂದ ಕಿರುಕುಳ, ನಿಂದನೆ ಮತ್ತು ಹಿಂಸಾಚಾರಕ್ಕೆ ಒಳಗಾದ ನಂತರ ಬೇರೆ ಹಾಸ್ಟೆಲ್‌ಗಳಿಗೆ ಸ್ಥಳಾಂತರಗೊಳ್ಳುವಂತೆ ಒತ್ತಾಯಿಸಲಾಯಿತು. ಎಸ್ಸಿ/ಎಸ್ಟಿ ವಿದ್ಯಾರ್ಥಿ/ರ್ಥಿನಿಯರಿಗೆ ಊಟದ ಕೋಣೆಗಳಲ್ಲಿ, ಕ್ರೀಡಾ ಮೈದಾನದಲ್ಲಿ ಮತ್ತು ಸಾಂಸ್ಕೃತಿಕ ಕಾರ್ಯಕ್ರಮಗಳಲ್ಲಿ ಸಾಮಾಜಿಕ ಪ್ರತ್ಯೇಕತೆಯನ್ನು ಎದುರಿಸಿದ್ದಾರೆ ಎಂದು ವರದಿಯಲ್ಲಿ ಹೇಳಲಾಗಿದೆ. ಶಿಕ್ಷಕರ ತಾರತಮ್ಯದ ಬಗ್ಗೆಯೂ ವಿದ್ಯಾರ್ಥಿ/ನಿಯರು ಥೋರತ್ ಸಮಿತಿಗೆ ತಿಳಿಸಿದರು. ಆ ಕಾರಣಕ್ಕಾಗಿ ಆ ವಿದ್ಯಾರ್ಥಿ/ನಿಯರನ್ನು ತಿರಸ್ಕರಿಸುವುದು, ಅಸಹಕಾರ ಮತ್ತು ನಿರುತ್ಸಾಹ ತೋರುವುದು ಮತ್ತು ಭೇದಾತ್ಮಕವಾಗಿ ವರ್ತಿಸಲು

ಪ್ರಾರಂಭಿಸಿದರು. ಬೆಂಗಳೂರಿನಲ್ಲಿ ಥೋರತ್ ಅವರ ಸಮಿತಿ ವರದಿಯ ಅಂಶಗಳಿಗೆ ಹೋಲುವ ವಿಚಾರಗಳಿವೆ ಅದನ್ನು ಈ ವಿಭಾಗದಲ್ಲಿ ಪರಿಶೋಧಿಸಲಾಗುವುದು.

ಕ್ಯಾಂಪಸ್‌ಗಳಲ್ಲಿನ ತಾರತಮ್ಯವು ದೈಹಿಕ ಹೊರಗಿಡುವಿಕೆಯಿಂದ ಮೊದಲುಗೊಂಡು ಹಲವು ರೀತಿಯ ಅವಕಾಶಗಳನ್ನು ಸೂಕ್ಷ್ಮವಾಗಿ ನಿರಾಕರಿಸ್ಪಟ್ಟಿದೆ. ಇದನ್ನು ಸಹಜವಾದ ನಡವಳಿಕೆ, ಪ್ರಕ್ರಿಯೆ ಎಂದು ಕಟ್ಟಿಕೊಡಲಾಗಿದೆ. ಈ ಬಗ್ಗೆ ತನಿಖೆ ಮಾಡಲು ಸ್ಥಾಪಿಸಲಾದ ಹಲವಾರು ಅಧಿಕೃತ ಸಂಸ್ಥೆಗಳು ಜಾತಿ ಆಧಾರಿತ ತಾರತಮ್ಯದ ಪುರಾವೆಗಳನ್ನು ಕಂಡುಕೊಂಡಿವೆ. ಒಂದೆಡೆ ದಲಿತ ಮಹಿಳೆಯರು ಶಿಕ್ಷಣ ಪಡೆಯಲು ಕುಟುಂಬಗಳೊಂದಿಗೆ ಮಾತುಕತೆ ನಡೆಸುತ್ತಾರೆ ಮತ್ತು ಇನ್ನೊಂದೆಡೆ ಅವರು ಜಾತಿವಾದಿ ಸಾಂಸ್ಥಿಕ ಶೈಕ್ಷಣಿಕ ವಾತವರಣದೊಂದಿಗೆ ಪ್ರತಿನಿತ್ಯ ಸಂಘರ್ಷ ಮಾಡುತ್ತಿದ್ದಾರೆ. ಸಾಂಸ್ಥಿಕ ಸ್ಥಳಗಳಲ್ಲಿ ಕೇಂದ್ರೀಕೃತ ಗುಂಪು ಚರ್ಚೆಯಲ್ಲಿ ಜಾತಿವಾದದಲ್ಲಿ ಪ್ರತಿಕ್ರಿಯಿಸಿದವರು ಹಂಚಿಕೊಂಡ ನಿರೂಪಣೆಗಳ ಪ್ರಕಾರ ಉಡುಗೆ, ಭಾಷೆ, ಪ್ರತ್ಯೇಕ ಹಾಸ್ಟೆಲ್‌ಗಳನ್ನು ಹೊಂದಿರುವುದು ಮತ್ತು ಮೀಸಲಾತಿಗಳ ಬಗ್ಗೆ ಅಹಿತಕರ ಚರ್ಚೆಗಳಲ್ಲಿ ತೊಡಗುವುದೂ ಕೂಡ ಇದೆ.

ಜಾತಿ ಸಂವೇದನಾಶೀಲವಾಗಿರಬೇಕಾದ ಶೈಕ್ಷಣಿಕ ಸ್ಥಳಗಳು ದಲಿತ ಮಹಿಳೆಯರಿಗೆ ಜಾತಿ ಸಂವೇದನಾಶೀಲದ ವಿರುದ್ಧವಾಗಿ ರೂಪುಗೊಂಡಿವೆ. ಸಾವು (ರೋಹಿತ್ ವೇಮುಲಾ ಅವರ ಸಾವು) ಕೂಡ ಒಂದು ವಿಮೋಚನೆಯ ಕ್ಷಣವಾಗಿತ್ತು. ಏಕೆಂದರೆ ದಲಿತ ಯುವಜನರನ್ನು ಆಧುನಿಕ ಮತ್ತು ಪ್ರಬುದ್ಧ ಸ್ಥಳಗಳಲ್ಲಿ ಅಂಚಿಗೆ ಸರಿಸಲಾಗಿದೆ ಎನ್ನುವುದನ್ನು ಅನೇಕ ದಲಿತ ಯುವಜನರ ಮಾತುಗಳಿಂದ ಸಾಬೀತುಪಡಿಸಲು ಸಾಧ್ಯವಾಯಿತು. ಅದಾಗ್ಯೂ, ದಲಿತ ಯುವಜನರು ಅಧಿಕಾರ ಕೇಂದ್ರಗಳಿಂದ ಅವಮಾನವನ್ನು ಎದುರಿಸುತ್ತಿದ್ದಾರೆ. ನಮ್ಮ ಸಂಶೋಧನಾ ಸಂದರ್ಶನಗಳು ಮತ್ತು ಕೇಂದ್ರೀಕೃತ ಗುಂಪು ಚರ್ಚೆಗಳು ಕೂಡ ಇದೇ ರೀತಿಯ ಅನುಭವವನ್ನು ಹೊಂದಿವೆ. ಭಾರತದ ಉನ್ನತ ವಿಶ್ವವಿದ್ಯಾಲಯಗಳಿಂದ ತಮ್ಮ ಪ್ರಾಣವನ್ನು ತ್ಯಜಿಸಿದ ಅನೇಕ ದಲಿತ ವಿದ್ಯಾರ್ಥಿ/ನಿಯರ ಧ್ವನಿಯೊಂದಿಗೆ ಪ್ರತಿಧ್ವನಿಸಬಹುದು ಎಂದು ಅವರು ಹೇಳಿದರು. ಬೆಂಗಳೂರಿನ ಶಾಲಾ–ಕಾಲೇಜುಗಳಲ್ಲಿ ಮತ್ತು ಭಾರತದ ಇತರ ಭಾಗಗಳಲ್ಲಿನ ಶಾಲಾ–ಕಾಲೇಜುಗಳಲ್ಲಿ ಅಂಚಿಗೆ ಸರಿಸುವ ರಾಜಕೀಯದ ನಡುವೆ ಸಾಮ್ಯತೆಗಳಿವೆ. ಶೈಕ್ಷಣಿಕ ಸ್ಥಳಗಳಲ್ಲಿ ಹೊರಗಿಡಲಾದ ಕೆಲವು ಧ್ವನಿಗಳು ಇಲ್ಲಿವೆ:

“ಶಾಲೆಯ ಒಂದು ಕಾರ್ಯಕ್ರಮಕ್ಕೆ ನಾನು ನನ್ನ ಅಕ್ಕನ ಬಟ್ಟೆ ಹಾಕಿಕೊಂಡು ಹೋಗಿದ್ದೆ. ಅದು ನನಗೆ ತೀರ ಸಡಿಲವಾಗಿತ್ತು. ಮತ್ತು ಅದು ನನ್ನದಲ್ಲ ಎಂದು ಗೊತ್ತಾಗುತ್ತಿತ್ತು. ಇದನ್ನು ಗಮನಿಸಿದ ನನ್ನ ಹಿರಿಯ

ವಿದ್ಯಾರ್ಥಿನಿಯೊಬ್ಬಳು, ಒಂದು ಒಳ್ಳೆ ಬಟ್ಟೆ ತೆಗೆದುಕೊಳ್ಳಲು ಆಗದೆ ಇದ್ದ ಮೇಲೆ ಶಾಲೆಗೆ ಏಕೆ ಬರಬೇಕು ಎಂದು ಹೀಯಾಳಿಸಿದ್ದಳು." **ಎಂ. ಎ, ಸಮಾಜಶಾಸ್ತ್ರ**

"ಕೆಲವು ಶಿಕ್ಷಕರು ಜಾತಿವಾದಿಗಳಾಗಿದ್ದರು. ನಮ್ಮನ್ನು ನೋಡಿದಾಗಲೆಲ್ಲಾ ಮೀಸಲಾತಿ ಬಗ್ಗೆ ಮತ್ತು ಅವರು ಪ್ರಬಲ ಜಾತಿಯವರಾಗಿದ್ದ ಪರಿಣಾಮವಾಗಿ, ಅವಕಾಶಗಳಿಂದ ಹೇಗೆ ವಂಚಿತರಾದರು ಎಂದು ಹೇಳುತ್ತಿದ್ದರು. ನಮಗೆ ಸಿಗುತ್ತಿದ್ದ ಮೀಸಲಾತಿಯ ಬಗ್ಗೆ ನಮಗೆ ಇಷ್ಟ ಆಗದ ರೀತಿಯಲ್ಲಿ ಕಮೆಂಟ್ ಮಾಡುತ್ತಿದ್ದರು." – **ಪರ್ತಕರ್ತೆ, ನೆಲಮಂಗಲ**

"ದಲಿತರಿಗೆಂದೇ ಪ್ರತ್ಯೇಕವಾಗಿ ನಿರ್ಮಿಸುವ ವಸತಿನಿಲಯದ ರಚನೆಯೇ ನಾವು ಜಾತಿ ವ್ಯವಸ್ಥೆಯಲ್ಲಿ ಪತ್ಯೇಕವಾಗಿ ಇರಬೇಕಾದವರು ಎಂಬುದನ್ನು ಪುನರುಚ್ಚರಿಸುತ್ತದೆ." **–ಎಂ. ಎ, ಮಹಿಳಾ ಅಧ್ಯಯನ**

"ಮೀಸಲಾತಿ ಕೋಟಾದಡಿ ಆಯ್ಕೆಯಾದವರು ಅವರ ದಕ್ಷತೆಯನ್ನು ಪ್ರತಿದಿನ ಸಾಬೀತುಪಡಿಸಬೇಕಾಗುತ್ತದೆ. ಯಾವುದೇ ರೀತಿಯ ಸಣ್ಣ ತಪ್ಪು ನಡೆದರೂ ಅವರನ್ನು ಕೋಟಾ ಟೀಚರ್ ಎನ್ನುವ ಹಣೆಪಟ್ಟಿ ಕೊಡಲಾಗುತ್ತದೆ" ಎಂದು ಕಸ್ಬೆ ಹೇಳಿದ್ದಾರೆ. ವಿಶ್ವವಿದ್ಯಾಲಯದ ಯುವತಿಯರು ತಮ್ಮ ಅನುಭವವನ್ನು ಜಾತಿ ಹಾಗು ಲಿಂಗ ಅಸ್ಮಿತೆಯ ಹಿನ್ನಲೆಯಲ್ಲಿ ಗುರುತಿಸಿಕೊಳ್ಳುತ್ತಾರೆ. ವಿಶ್ವವಿದ್ಯಾಲಯದ ಪ್ರಾಧ್ಯಾಪಕರು ಕೆಲಸದ ಸ್ಥಳದಲ್ಲಿ ಇದೇ ರೀತಿಯ ಅನುಭವವನ್ನು ಹೊಂದಿದ್ದರು. ಇದು ಒಂದು ಶೈಕ್ಷಣಿಕ ಸ್ಥಳವಾಗಿದ್ದರೂ ವಿದ್ಯಾರ್ಥಿನಿಯರು ಹಾಗು ಪ್ರಾಧ್ಯಾಪಕಿಯರು 'ದಲಿತ' ಮತ್ತು 'ಮಹಿಳೆ' ಆಗಿದ್ದರೆ ಇದೇ ರೀತಿಯ ಸಮಸ್ಯೆ ಎದುರಿಸುತ್ತಿದ್ದಾರೆ. 'ದಲಿತ ಮಹಿಳೆ'ಯಾಗಿದ್ದರಂತೂ ಈ ಸನ್ನಿವೇಶ ಇನ್ನೂ ಕೆಟ್ಟದಾಗಿರುತ್ತದೆ ಎಂದು ಬೆಂಗಳೂರಿನ ಹೆಸರಾಂತ ಶಿಕ್ಷಣ ಸಂಸ್ಥೆಯ ಸಹಾಯಕ ಪ್ರಾಧ್ಯಪಕಿ ಒಬ್ಬರು ಹೇಳುತ್ತಾರೆ.

"ನನ್ನ ಸಹೋದ್ಯೋಗಿಗಳು ಪಾಸಾಗದೆ ಇರುವ ಎನ್ಇಟಿ ಪರೀಕ್ಷೆಯಲ್ಲಿ ನಾನು ಪಾಸಾಗಿರುವ ಸತ್ಯವನ್ನು ಅವರಿಂದ ಒಪ್ಪಿಕೊಳ್ಳಲು ಈವರೆಗೆ ಸಾಧ್ಯವಾಗಿಲ್ಲ. ಮೀಸಲಾತಿಯಿಂದಾಗಿ ನಾನು ಎನ್ಇಟಿ ಹೊಂದಿದ್ದೇನೆ ಹೊರತು ನನ್ನ ಸ್ವಂತ ಪ್ರತಿಭೆಯಿಂದಲ್ಲ. ಸರ್ಕಾರ ನಮಗೆ ಮಾಡಿದ ಸಹಾಯದಿಂದಾಗಿ ದಕ್ಕಿರುವುದು ಮತ್ತು ಮೀಸಲಾತಿಯಿಂದಾಗಿ ನನಗೆ ಉದ್ಯೋಗ ಸಿಕ್ಕಿದೆಯೇ ಹೊರತು ನಾನು ಆ ಹುದ್ದೆಗೆ ಅರ್ಹಳಲ್ಲ ಎಂಬುದು ಅವರ ಧೋರಣೆ." **–ಸಹ ಪ್ರಾಧ್ಯಾಪಕಿ**

"ನಾನು ಕೆಲಸ ಮಾಡುವ ಸ್ಥಳಗಳಲ್ಲಿ ಜಾತಿವಾದಿ ಹೇಳಿಕೆಗಳನ್ನು ನೀಡಲು ಶುರುಮಾಡಿದಾಗ, ಅವರ ಹೇಳಿಕೆ ಜಾತಿವಾದಿ ಹೇಳಿಕೆಯಾ ಅಲ್ಲವ ಎಂದು ನಾನು ನನ್ನೊಂದಿಗೆ ಸಮಾಲೋಚನೆ ನಡೆಸುತ್ತಿದ್ದೆ. ನನ್ನೆಲ್ಲಾ

ಶಕ್ತಿ ನನ್ನಲ್ಲಿ ಏಳುತ್ತಿದ್ದ ಪ್ರಶ್ನೆಗಳಿಗೆ ಉತ್ತರಿಸಿಕೊಳ್ಳುವುದಕ್ಕೆ ವ್ಯಯವಾಗುತ್ತಿತ್ತು" ಎಂದು ಮತ್ತೊಬ್ಬ ಪ್ರತಿಸ್ಪಂದಕಿ ತಿಳಿಸಿದ್ದಾರೆ.

ದಲಿತ ಮಹಿಳೆಯರು ಮಾತುಕತೆಯ ಮೂಲಕ ತಮ್ಮ ಅಸ್ತಿತ್ವ ಕಂಡುಕೊಳ್ಳಲು ಹಾಗು ಬೆಳೆಯಲು ಸಾಧ್ಯತೆಗಳನ್ನು ರೂಪಿಸಿಕೊಳ್ಳುತ್ತಾರೆ. ಇದನ್ನು ಮೀರಿ ಕೆಲವರು ತಮ್ಮ ಹಕ್ಕುಗಳನ್ನು ಪಡೆಯಲು ಪ್ರತಿರೋಧದ ರಾಜಕೀಯವನ್ನು ಮಾಡುತ್ತಿದ್ದಾರೆ. ಈ ಕ್ರಿಯೆಯು ಅವರಿಗೆ ಹಾಗು ಅವರ ಸಮುದಾಯಕ್ಕೆ ಬಹಳ ಮುಖ್ಯವೆಂದು ಭಾವಿಸುತ್ತಾರೆ. ಹೀಗೆ ದಲಿತ ಮಹಿಳೆಯರು ರಾಜಿ–ಸಂದಾನಗಳಷ್ಟೇ ಅಲ್ಲದೇ ಪ್ರತಿರೋಧ ಮಾಡುವ ಮೂಲಕ ತಮ್ಮಲ್ಲಿ ಇರಬಹುದಾದ ಕೀಳರಿಮೆಯನ್ನು ಮುರಿದಿದ್ದಾರೆ.

ಸಾಮಾಜಿಕ ಬಂಡವಾಳವಿರುವ ಶಕ್ತಿಕೇಂದ್ರವು ಶೈಕ್ಷಣಿಕ ಸ್ಥಳಗಳಲ್ಲಿ ಸಾಮಾಜಿಕವಾಗಿ ಅಂಚಿನಲ್ಲಿನರುವ ಸಮುದಾಯಗಳಿಂದ ಬಂದಿರುವವರನ್ನು ಇನ್ನಷ್ಟು ಅಂಚಿಗೆ ತಳ್ಳಲು ಪ್ರಯತ್ನಿಸುತ್ತವೆ. ಇದನ್ನು ಎದುರಿಸುವುದು ದಲಿತ ಯುವತಿಯರ ಬಹಳ ದೊಡ್ಡ ಸವಾಲಾಗುತ್ತದೆ. ಅದಕ್ಕೆ ದಲಿತ ಯುವತಿಯರು ಆಯ್ಕೆ ಮಾಡಿಕೊಳ್ಳುವ ಶೈಕ್ಷಣಿಕ ಸಂಸ್ಥೆಗಳ ಹಿನ್ನಲೆಯೂ ಕಾರಣವಾಗುತ್ತದೆ. ಅವರು ಸಾಮಾನ್ಯವಾಗಿ ಮಧ್ಯಮ ವರ್ಗದ ಜಾತಿವಾದಿಗಳು ಹೆಚ್ಚಾಗಿ ಇರುವ ಕಾಲೇಜುಗಳು ಅಥವಾ ಇಂಗ್ಲೀಷ್ ಮಾಧ್ಯಮದಲ್ಲಿ ಬೋಧಿಸುವ ಎಲೀಟ್ ಕಾಲೇಜುಗಳಲ್ಲಿ ಈ ರೀತಿಯ ಅನುಭವಗಳನ್ನು ಪಡೆದಿದ್ದಾರೆ. ಸರ್ಕಾರಿ ಕಾಲೇಜಿನಲ್ಲಿ ಇಂತಹ ಸ್ಥಿತಿ ಇಲ್ಲದೇ ಇರಬಹುದು ಎಂದು ಅಂದುಕೊಂಡರೂ, ಇಲ್ಲಿ ಮಾತಾನಾಡಿದವರ ಪ್ರಕಾರ ಸರ್ಕಾರಿ ಕಾಲೇಜುಗಳು ಸಹ ಜಾತಿವಾದದ ಕೇಂದ್ರಗಳಾಗಿವೆ. ಜೊತೆಗೆ ಇಲ್ಲಿ ಗಮನಿಸಬೇಕಾದ ಮುಖ್ಯ ಅಂಶವೆಂದರೆ ದಲಿತ ಮಹಿಳೆಯರನ್ನು ಬಲಿಪಶುವಾಗಿ ನೋಡುವ, ನಿರ್ವಚನದಿಂದ ಪ್ರತಿರೋಧದ ನೆಲೆಯಲ್ಲಿ ನೋಡುವ ಸಂಕಥನವನ್ನು ಕಾಣಬಹುದು. ಇಲ್ಲಿ ಅಂತಹ ಕೆಲವು ಪ್ರತಿರೋಧದ ಧ್ವನಿಗಳನ್ನು ನೋಡಬಹುದು.

"ಮೀಸಲಾತಿ ಮತ್ತು ಶಿಷ್ಯವೇತನದಿಂದಾಗಿ ನನಗೆ ಪದವಿ ಮುಗಿಸಲು ಸಾಧ್ಯವಾಯಿತು. ಬೇರೆ ಜಾತಿಯ ತಂದೆ ತಾಯಿಯಂದಿರು ಅವರ ಮಕ್ಕಳಿಗೆ ವಿದ್ಯಾವಂತರಾಗಲು ಮಾರ್ಗದರ್ಶನ ನೀಡುತ್ತಾರೆ. ಆದರೆ ದಲಿತ ಕುಟುಂಬದ ತಂದೆ ತಾಯಿಯರು ಮಾನಸಿಕ ಮತ್ತು ಆರ್ಥಿಕವಾಗಿ ಸಬಲರಾಗಿರುವುದಿಲ್ಲ. ಹಾಗಾಗಿ ಶಿಷ್ಯವೇತನ ನಮ್ಮ ಹಕ್ಕೇ ಹೊರತು ದಾನವಲ್ಲ." **– ಎಂ.ಎ, ಸಮಾಜಶಾಸ್ತ್ರ ವಿದ್ಯಾರ್ಥಿನಿ, ದೊಡ್ಡಬಳ್ಳಾಪುರ.**

"ನಾನು ಓದುತ್ತಿರುವ ಕಾಲೇಜಿನಲ್ಲಿ ಕೆಲವು ವಿದ್ಯಾರ್ಥಿಗಳು ಪ್ರಬಲ ವರ್ಗ ಮತ್ತು ಜಾತಿಗೆ ಸೇರಿದವರಾಗಿದ್ದು, ಅವರೆಲ್ಲಾ ತುಂಬಾ ಸ್ಟೈಲಿಷಾಗಿ ಬರುತ್ತಾರೆ ಮತ್ತು ಹೆಚ್ಚು ಅಂಕಗಳನ್ನು ಪಡೆಯುತ್ತಾರೆ. ಆದರೆ ಅವರಿಗೆ ನಮ್ಮ ವಾಸ್ತವದ ಬಗ್ಗೆ ಅರಿವಿಲ್ಲ ಅಂತ ನನಗೆ ಅನ್ನಿಸುತ್ತದೆ. ನಮ್ಮ ವಾಸ್ತವತೆ ಮತ್ತು

ಅನುಭವಗಳು ಅವರಿಗಿಂತ ಹೆಚ್ಚು ಭಿನ್ನ. ಕ್ರಮೇಣವಾಗಿ ಕಾಲೇಜಿನಲ್ಲಿ ಅವರಿಂದ ಬೆದರಿಕೆಗೆ ಒಳಗಾಗದೆ ಇರುವುದನ್ನು ಕಲಿತ್ತಿದ್ದೇನೆ." **–ಇಂಗ್ಲೀಷ್ ಸಾಹಿತ್ಯ ವಿದ್ಯಾರ್ಥಿನಿ.**

"ನಾನು ಓದಿದ್ದು, ಸಾಮಾಜಿಕ ಚಳವಳಿಗಳಿಗೆ ಹೆಸರಾಗಿದ್ದ ಕಾಲೇಜಿನಲ್ಲಿ. ದಲಿತ ಚಳವಳಿ ಮತ್ತು ರೈತ ಚಳವಳಿ ಮೊದಲು ಹುಟ್ಟಿದ್ದೇ ನಮ್ಮ ಕಾಲೇಜಿನಲ್ಲಿ. ಹಾಗಾಗಿ ನಮ್ಮ ಕಾಲೇಜು ಎಂದಿಗೂ ಕಾಸ್ಟಿಸ್ಟ್ ಆಗಿರಲಿಲ್ಲ."**– ಪತ್ರಕರ್ತೆ**

ಕಸ್ಬೆ ಅವರ ಪ್ರಕಾರ, "ಶೈಕ್ಷಣಿಕ ಸ್ಥಳಗಳಲ್ಲಿ ಆಗುವ ಜಾತಿವಾದಿ ಸ್ವರೂಪದ ಅವಮಾನಗಳನ್ನು, ಒಬ್ಬ ದಲಿತ ಅಥವಾ ಆದಿವಾಸಿ ಆತ್ಮಹತ್ಯೆ ಮಾಡಿಕೊಳ್ಳುವವರೆಗೆ ವಿಚಾರಣೆಗೆ ಒಡ್ಡುವುದೇ ಇಲ್ಲ. ಅದು ಅನವಶ್ಯಕ ಎಂದೇ ಪರಿಗಣಿಸಲ್ಪಟ್ಟಿದೆ". ದಲಿತರ ಶವ ಬೀಳದೆ ಸವರ್ಣ ಜಾತಿ ಅಪ್ರಸ್ತುತವಾದುದು ಮತ್ತು ಅದು ಯಾವುದೇ ಪರೀಕ್ಷೆಗೂ ಒಳಪಡುವುದಿಲ್ಲ. ಇದಲ್ಲದೆ, ಹೆಚ್ಚಿನ ಸಂಸ್ಥೆಗಳಲ್ಲಿ, 'ಸಾಮಾನ್ಯ ವರ್ಗ' ವಿದ್ಯಾರ್ಥಿಗಳು ಮತ್ತು 'ಮೀಸಲಾತಿ ವರ್ಗ' ವಿದ್ಯಾರ್ಥಿಗಳು ವಿಭಿನ್ನ ಸಾಮಾಜಿಕ ಗುಂಪುಗಳನ್ನು ಹೊಂದಿದ್ದಾರೆ. ಈ ಅಭ್ಯಾಸವನ್ನು ಸವರ್ಣ ಜಾತಿಯ ಶಿಕ್ಷಕರು ಅನಪೇಕ್ಷಿತವಾಗಿ ಅನುಸರಿಸುತ್ತಾರೆ ಎಂದು ಕೆಲವು ಸಂವಾದಿಗಳು ತಿಳಿಸಿದ್ದಾರೆ.

### ಶಾಲಾ ಕಾಲೇಜುಗಳಲ್ಲಿ ಶಿಕ್ಷಕರ/ಸ್ನೇಹಿತರ ಮನೋ ಪ್ರವೃತ್ತಿ

"ಮುಂದಿನ ಮೂರು ಡೆಸ್ಕ್‌ಗಳಲ್ಲಿ ನಾವು ಕೂರುವಂತಿರಲಿಲ್ಲ, ಅದು ಚೆನ್ನಾಗಿ ಓದುವ ಮೇಲ್ಜಾತಿಯ ಹುಡುಗಿಯರು ಕೂರುವ ಜಾಗವಾಗಿತ್ತು. ನಮಗೆ ಬೋರ್ಡ್ ಮೇಲೆ ಬರೆಯುವ ಹಾಗಿರಲಿಲ್ಲ. ನಾನು ಅವರೆಲ್ಲರಿಗಿಂತ ಚೆನ್ನಾಗಿ ಓದುತ್ತಿದ್ದೆ. ಆದ್ದರಿಂದ ಕೆಲವು ಶಿಕ್ಷಕರು, ಸ್ನೇಹಿತರು ನನ್ನನ್ನ ಮಾತನಾಡಿಸುತ್ತಿರಲಿಲ್ಲ. ನಮ್ಮನ್ನು ಯಾವಾಗಲು ಏಕವಚನದಲ್ಲೆ ಕರೆಯುತ್ತಿದ್ದರು. ಇನ್ನೂ ಶಿಷ್ಯವೇತನ ಬಂದಾಗ ಅವರಿಗೆ ನಮ್ಮ ಹೆಸರೇ ಮರೆತುಹೋಗಿರುತ್ತಿತ್ತು ನಮ್ಮನ್ನು ಶಿಸ್ಯವೇತನವೆಂದೇ ಕರೆಯುತ್ತಿದ್ದರು. ಕೆಲವೊಮ್ಮೆ ಜಾತಿಯನ್ನು ಸುಳ್ಳು ಹೇಳಲು ಬಯಸಿದರೂ ನಾವು ಹಾಸ್ಟೆಲ್‌ನಲ್ಲಿದ್ದರೆ ಅಥವಾ ಶಿಸ್ಯವೇತನ ಬರುವ ಸಮಯದಲ್ಲಿ ನಮ್ಮ ಜಾತಿ ಯಾವುದೆಂದು ತಿಳಿದುಬಿಡುತಿತ್ತು".

ಇನ್ನೂ ಕೆಲವರಿಗೆ ತಮಗೆ ಅವಮಾನವಾಗುತ್ತಿದೆ ಎಂದು ಗುರುತಿಸಿಕೊಳ್ಳಲು ಕಷ್ಟವಾಗುತ್ತಿದೆ. ನಾಲ್ಕು ಯುವತಿಯರು ಬಂಡಾಯವೆದ್ದು ನಾವು ದಲಿತ ಯುವತಿಯರೆ ಎಂದು ತಮ್ಮ ಅಸ್ಮಿತೆಯನ್ನು ಗಟ್ಟಿಯಾಗಿ ಪ್ರತಿನಿಧಿಸಿದ್ದಾರೆ. ಅವರಿಗೆ "ಎಕೆ", "ಮೀಸಲಾತಿಗಳು" ಎಂಬ ಬಿರುದುಗಳು ಸಿಕ್ಕಿವೆ. ಶಿಕ್ಷಣಕ್ಕೆ ಕಾಲಿರಿಸಿದ ನಂತರ

ಶಾಲಾ ಕಾಲೇಜುಗಳಲ್ಲಿ ಶಿಕ್ಷಕರು, ತಮ್ಮ ಗೆಳತಿಯರು ಮಾಡುವ ಸಿಟ್ಟು, ಅವಮಾನದ ಕಾರಣಕ್ಕೆ ಬಡಿದೆಬ್ಬಿಸಿದ್ದರೆ, ಮತ್ತೊಂದೆಡೆ ಶಿಕ್ಷಣದಿಂದಲೇ ವಂಚಿತರಾಗಿ ಹೊರಗುಳಿಯಬೇಕಾದ ಪರಿಸ್ಥಿತಿಯು ಇದೆ.

### ಕೃತಜ್ಞತೆಯ ಮನೋಭಾವ

ಅಪ್ಪ ಅಮ್ಮ ತಮಗೆಷ್ಟೆ ಕಷ್ಟವಿದ್ದರೂ ತಮ್ಮ ಮಕ್ಕಳು ತಮ್ಮಂತಾಗಬಾರದು ಎಂಬ ಕಾರಣಕ್ಕೆ ಶಿಕ್ಷಣ ಕೊಡಿಸುತ್ತಿದ್ದಾರೆ. ಹಾಗಾಗಿ ಅವರು ಏನೇ ಹೇಳಿದರು ಕೇಳಬೇಕು ಎನ್ನುವ ಮನೋಭಾವ ನಮ್ಮ ಸಂವಾದಿಗಳಲ್ಲಿದೆ. ತಾರತಮ್ಯ ರಹಿತ ಶಿಕ್ಷಣ ಪಡೆಯುವುದು ನನ್ನ ಹಕ್ಕು, ಉನ್ನತ ಶಿಕ್ಷಣ ಪಡೆಯುವುದು ನನ್ನ ಹಕ್ಕು ಎನ್ನುವುದು ಕಾಣೆಯಾಗಿ, ತನ್ನ ಕನಸು ಕೂಡ ತನ್ನ ಪೋಷಕರ ಕನಸೇ ಆಗಿದೆ.

### ಉನ್ನತ ಶಿಕ್ಷಣದಿಂದ ಹೊರಗುಳಿಯುವಿಕೆ

ಕೋಲಾರದಂತಹ ಸ್ಥಳದಲ್ಲಿ ದಲಿತ ಸಂಘಟನೆಗಳ ಪ್ರಭಾವಕ್ಕೊಳಗಾದ ಗಂಡಸರು ತಮ್ಮ ಮಕ್ಕಳನ್ನು ಓದಿಸುವುದು ಸ್ವಾಭಿಮಾನದ ಸಂಕೇತವಾಗಿ ಪರಿಗಣಿಸಿದರೆ ಯುವತಿಯರ ವಿಚಾರಕ್ಕೆ ಬಂದಾಗ ಪ್ರಾಥಮಿಕ ಮತ್ತು ಮಾಧ್ಯಮಿಕ, ಪದವಿಪೂರ್ವದವರೆಗೂ ಶಿಕ್ಷಣ ದೊರಕಿಸಿಕೊಡುವುದರಲ್ಲಿ ಕುಟುಂಬದ ಸಹಕಾರವಿರುತ್ತದೆ. ಆದರೆ, ಉನ್ನತ ಶಿಕ್ಷಣಕ್ಕೆ ಬಂದಾಗ ಯುವತಿಯರು ತುಂಬಾ ಸಂಧಾನಗಳನ್ನು ಮಾಡಬೇಕಾಗುತ್ತದೆ. ನಮ್ಮ ಕೋಲಾರದ ಇಪ್ಪತ್ತು ಪ್ರತಿಸ್ಪಂದಿಗಳಲ್ಲಿ 4 ಯುವತಿಯರು ಮಾತ್ರ ಉನ್ನತ ಶಿಕ್ಷಣ ವ್ಯಾಸಂಗ ಮಾಡುತ್ತಿದ್ದು ಎಂ.ಡಿ.ಎಸ್, ಎಲ್.ಎಲ್.ಬಿ, ಪಿಎಚ್.ಡಿ, ಪಿಡಿ.ಎಫ್–ಓದುತ್ತಿದ್ದು, ಉಳಿದವರು ಸ್ನಾತಕೋತ್ತರ ಪದವಿ ಮುಗಿಸಿದ್ದಾರೆ. ಅಲ್ಲಿಯೂ ಕೂಡ ಕನ್ನಡ, ಸಮಾಜ ಕಾರ್ಯದಂತಹ ಸ್ನಾತಕೋತ್ತರ ಪದವಿಯನ್ನು ಮಾಡಿದ್ದಾರೆ. ಉಳಿದ ಯುವತಿಯರು ಡಿಎಡ್, ಬಿಎಡ್, ಟಿಸಿಎಚ್ ಮಾಡಿದ್ದಾರೆ. ಬದಲಾಗುತ್ತಿರುವ ಶಿಕ್ಷಣ ಮತ್ತು ವೃತ್ತಿಯ ಲೋಕದ ಬಗೆಗಿನ ಮಾಹಿತಿಯ ಕೊರತೆ ಎದ್ದು ಕಾಣುತ್ತದೆ. "ಹಳ್ಳಿಗಳು ಮತ್ತು ತಾಲೂಕುಗಳಲ್ಲಿನ ಬಹುತೇಕ ಸರ್ಕಾರಿ ಶಾಲೆಗಳಲ್ಲಿ ಹುಡುಗಿಯರದ್ದೆ ಮೇಲುಗೈ. ಅದರಲ್ಲಿ ಬಹುತೇಕ ದಲಿತ ಯುವತಿಯರೆ" ಎಂದು ಕೋಟಿಗಾನಹಳ್ಳಿ ರಾಮಯ್ಯ ಅಭಿಪ್ರಾಯಪಟ್ಟಿದ್ದಾರೆ. ಇನ್ನು ಸರ್ಕಾರದ ಅಂಕಿಅಂಶಗಳು ಕೂಡ ಇದನ್ನೆ ಹೇಳುತ್ತವೆ.

ಶಿಕ್ಷಣದ ಮಾನದಂಡದಲ್ಲಿ ನೋಡಿದಾಗ ಕರ್ನಾಟಕದಲ್ಲಿ ಶೇ.52.71 (38.37 ಲಕ್ಷ ದಷ್ಟಿರುವ ದಲಿತ ಅಕ್ಷರಸ್ಥರ ಪ್ರಮಾಣದಲ್ಲಿ ಪುರುಷರು ಶೇ 62.58 ರಷ್ಟಿದ್ದರೆ ಮಹಿಳೆಯರು ಶೇ.40.23 ರಷ್ಟಿದ್ದಾರೆ. ಸಾಕ್ಷರತೆಗೆ ಸಂಬಂಧಪಟ್ಟಂತೆ ಹೇಳುವುದಾದರೆ ಪರಿಶಿಷ್ಟ ಮಹಿಳೆಯರ ಪ್ರಮಾಣ 40.23 ರಷ್ಟಿದ್ದರೆ, ಶಿಷ್ಟ ಮಹಿಳೆಯರ

ಪ್ರಮಾಣ 63.39 ರಷ್ಟಿದೆ. ದಲಿತ ಯುವಕರಿಗೆ ಉನ್ನತ ಶಿಕ್ಷಣದಲ್ಲಿ ಅವಕಾಶಗಳು ಹೆಚ್ಚಿದ್ದರೆ ಯುವತಿಯರ ಪಾಲು ಕಡಿಮೆ ಇದೆ. (ನೀರದಾರಿ 2014)

### ಶಿಕ್ಷಣದ ಅನುಸಂಧಾನಗಳು

"ನನ್ನಪ್ಪನಿಗೆ ದಲಿತ ಸಂಘಟನೆಯ ಬಗ್ಗೆ ಅಪಾರವಾದ ಪ್ರೀತಿ ಇತ್ತು. ಅಂಬೇಡ್ಕರ್ ಹೇಳಿದಂತೆ "ಶಿಕ್ಷಣ ನಮ್ಮ ಬದುಕಿಗೆ ಬಹಳಮುಖ್ಯ ಅಂತ ಭಾವಿಸಿದ್ದರು. ಹಾಗಾಗಿ ಎಲ್ಲಾ ಮಕ್ಕಳನ್ನು ತುಂಬಾ ಕಷ್ಟ ಪಟ್ಟು ಓದಿಸುತ್ತಿದ್ದರು. ನನ್ನ ಶಿಕ್ಷಣದ ಕ್ರೆಡಿಟ್ ಅನ್ನು 100ಕ್ಕೆ 100ರನ್ನು ದಲಿತ ಸಂಘಟನೆಗೆ ನೀಡಲು ಬಯಸುತ್ತೇನೆ". 70 ಮತ್ತು 80ರ ದಶಕದಲ್ಲಿ ಕೋಲಾರದಲ್ಲಿ ದಲಿತ ಚಳವಳಿಯು ಬಹಳ ಉತ್ತುಂಗ ಸ್ಥಿತಿಯಲ್ಲಿತ್ತು. ಆ ಸಂದರ್ಭದಲ್ಲಿ ದಲಿತ ಚಳವಳಿಯಲ್ಲಿ ಭಾಗವಹಿಸಿದವರಿಗೆ ಅಂಬೇಡ್ಕರ್ ರವರ ಶಿಕ್ಷಣ, ಸಂಘಟನೆ, ಹೋರಾಟ ತಮ್ಮ ಬಾಳಿನ ನವ ಸೂತ್ರಗಳಾಗಿದ್ದವು. ಆ ಕುಟುಂಬಗಳಲ್ಲಿ ಜನಿಸಿದ ಮಕ್ಕಳಿಗೆ ಓದಲು ಯಾವುದೇ ಅನುಸಂಧಾನಗಳನ್ನು ಮಾಡಬೇಕಿರಲಿಲ್ಲ. ತಂದೆ ತಾಯಂದಿರು ತಮ್ಮ ಬದುಕನ್ನ ಮಕ್ಕಳನ್ನು ಓದಿಸಲು ಮುಡಿಪಾಗಿಟ್ಟಿದ್ದರು. ತಮಗಿರುವ ಬಡತನ ಮತ್ತು ಅವಕಾಶಗಳಲ್ಲಿ ದಲಿತ ಯುವಕರಿಗೆ ಇರುವಷ್ಟು ಶಿಕ್ಷಣದ ಅವಕಾಶ ಸ್ವಾತಂತ್ರ್ಯ ದಲಿತ ಯುವತಿಯರಿಗೆ ಇಲ್ಲ. ಆದರೆ ದಲಿತ ಚಳವಳಿ ಪ್ರಭಾವ ಇಲ್ಲದ ಕುಟುಂಬಗಳ ಪರಿಸ್ಥಿತಿ ಭಿನ್ನವಾಗಿಯೇ ಇತ್ತು.

ಪ್ರತಿಕ್ರಿಯಿಸಿದವರಲ್ಲಿ ಒಬ್ಬಾಕೆ, "ನನ್ನ ಚಿಕ್ಕಂದಿನಲ್ಲಿ ನನ್ನ ತಂದೆ ಶಾಲೆಗೆ ಸೇರಿಸಿರಲಿಲ್ಲ. ಅಪ್ಪನ ಸ್ನೇಹಿತನನ್ನು ಕರೆದುಕೊಂಡು ಹೋಗಿ ನಾನೇ ಶಾಲೆಗೆ ಸೇರಿಕೊಂಡೆ. ಅಮ್ಮ ಎಸ್.ಎಸ್.ಎಲ್.ಸಿ ವರೆಗೆ ಓದಿಸಿದರು ಅದರ ನಂತರ ಪಿಯುಸಿ ಮಾಡಿದೆ. ಪಿಯುಸಿ ನಂತರ ಡಿಎಡ್ ಮಾಡು ಅಂದ್ರು. ಆದ್ರೆ ಅಮ್ಮನಿಗೆ ದಿನಕ್ಕೆ ಸಿಗುತ್ತಿದ್ದ ಕೂಲಿ ಕೇವಲ 85 ರೂಪಾಯಿ. ಹಾಗಾಗಿ ಓದುವುದನ್ನು ಬಿಟ್ಟೆ. ನಂತರ ನನ್ನ ತಮ್ಮನ ಸಹಾಯದಿಂದ ಎಮ್.ಎಸ್.ಡಬ್ಲ್ಯೂ ಮಾಡಿದೆ" ಎಂದು ತಿಳಿಸಿದರು.

ದಲಿತ ಯುವತಿಯರು ಉನ್ನತ ಶಿಕ್ಷಣಕ್ಕೆ ತೆರೆದುಕೊಳ್ಳುವ ಸಂದರ್ಭದಲ್ಲಿ ಹೆಚ್ಚು ಅನುಸಂಧಾನಗಳನ್ನು ಮಾಡಬೇಕಾಗುತ್ತದೆ. "ಅವಮಾನಗಳು ಆಗದಿರಲೆಂದು ನೋಡಲು ಚೆಂದ ಕಾಣಲು ಹೆಣಗಾಡುತ್ತಿದ್ದೆವು. ನಮ್ಮನ್ನು ನೋಡಿ ಯಾರು ಏನಿದು "ಹೊಲೆಮಾದಿಗರ ತರಹ ಗಲೀಜಾಗಿದ್ದೀಯ" ಅಂದುಬಿಡ್ತಾರೇನೋ ಅನ್ನೋ ಒತ್ತಡದಲ್ಲೇ ಬದುಕುತ್ತಿದ್ದೆವು. ಮನೆಯಲ್ಲಿ ನಾವು ಕಾಲೇಜಿಗೆ ಹೋಗುತ್ತಿದ್ದೇವೆ ಎಂಬ ಕಾರಣಕ್ಕೆ ನಮಗೆ ಹೆಚ್ಚು ಗೌರವ ಸಿಗುತ್ತಿತ್ತು ಜೊತೆಗೆ ಸಮುದಾಯದವರು ಕೂಡ ಹೊಗಳುತ್ತಿದ್ದರು.

"ನಮ್ಮ ಊರುಗಳನ್ನು ಹೊರತುಪಡಿಸಿ ಹೊರಗಡೆ ಓದಲು ಹೋದಾಗ ನಮ್ಮ ಜಾತಿ ಕೇಳಿದರೆ ಸುಳ್ಳು ಹೇಳುತ್ತಿದ್ದೆವು. ನಾವು ಒಕ್ಕಲಿಗರು ಎಂದರೆ ಯಾವ ಬಣ ಅಂತಾ ಕೇಳ್ತಿದ್ರು. ಆದರೆ ಕೆಲವೊಮ್ಮೆ ಸುಲಭವಾಗಿ ಗುರುತಿಸುತ್ತಿದ್ದರು. ತುಂಬಾ ಸಮಯ ಪೇಚಿಗೆ ಸಿಲುಕಿದ್ದು ಇದೆ. ಅವಮಾನದಿಂದ ಮನೆಯಕಡೆ ಮುಖ ಮಾಡಿದ್ದು ಇದೆ" ಎನ್ನುತ್ತಾರೆ. ಮತ್ತೊಬ್ಬ ಪ್ರತಿಸ್ಪಂದಕಿ ಹೇಳುವಂತೆ "ನನ್ನ ಓದಿನ ಕನಸ್ಸನ್ನು ನನಸು ಮಾಡಿಕೊಳ್ಳಲು ಅವತ್ತು ಮನೆಯಿಂದ ಓಡಿ ಬಂದೆ. ಈಗ ಎಲ್.ಎಲ್.ಬಿ ಮಾಡುತ್ತಿದ್ದೇನೆ".

"ಪಿಯುಸಿ ಮುಗಿದಾಕ್ಷಣ ಮದುವೆ ಮಾಡಲು ತಯಾರಿ ಮಾಡುತ್ತಿದ್ದರು. ಎರಡು ಮೂರು ದಿನ ಉಪವಾಸ ಕೂತು ಹಠ ಮಾಡಿ ಕಾಲೇಜು ಸೇರಿದೆ. ಆದರೂ ಪಿಯುಸಿ ನಂತರ ಮದುವೆ ಮುಗಿಸಿದ್ರು" ಎಂದರೆ, ಮತ್ತೊಬ್ಬರು "ಅಪ್ಪನ ಕಾಲಿಗೆ ಬಿದ್ದು ನಾನು ನಿಮ್ಮ ಮರ್ಯಾದೆ ಹೋಗುವ ಯಾವುದೇ ಕೆಲಸ ಮಾಡೊಲ್ಲ, ನೀವು ತೋರಿಸಿದ ಹುಡುಗನ ಕೈಯಲ್ಲೆ ತಾಳಿ ಕಟ್ಟಿಸಿಕೊಳ್ತೀನಿ ಅಂತಾ ಹೇಳಿದ ಮೇಲೆ ಓದಲು ಕಳಿಸಿದ್ರು" ಎನ್ನುತ್ತಾರೆ. ಈ ತರಹದ ಅನುಸಂಧಾನಗಳನ್ನು ಕೆಲವರಿಗೆ ಮಾಡಲು ಸಾಧ್ಯವಾಗಿದೆ. ಆದರೆ ಇನ್ನೂ ಕೆಲವರಿಗೆ ಬದುಕು ಹೇಗೆ ಬಂತೋ ಹಾಗೆ ಸ್ವೀಕರಿಸುವ ಮೂಲಕ ಯಾವ ಸಂಧಾನಗಳು ಮಾಡುವ ಗೋಜಿಗೆ ಹೋಗಿಲ್ಲ.

ಬೆಂಗಳೂರಿಗೆ ಸೇರಿದ ಪ್ರತಿಸ್ಪಂದಕಿ ಬೇರೆಯದೆ ಆದ ಆಲೋಚನೆಯನ್ನು ಪ್ರತಿಪಾದಿಸಿದರು. ಅವರ ಪ್ರಕಾರ ಅನುಸಂಧಾನ ಅನ್ನೋದೆ ಬಹಳ ಕಷ್ಟದ ವಿಷಯ. ಒಬ್ಬ ದಲಿತ ಮಹಿಳೆಗೆ ಸಂಧಾನ ಮಾಡುವುದು ತೀರ ಕಷ್ಟದ ವಿಷಯ. "ತಾನೊಬ್ಬ ಮಹಿಳೆಯಾಗಿ ಮುಖ್ಯವಾಗಿ ದಲಿತ ಮಹಿಳೆಯಾಗಿ ಆದ ಅನುಭವಗಳು ಸಮಾಜದ ಅಧಿಕಾರ ಶ್ರೇಣಿಯನ್ನು ಸಹಜವಾಗಿ ಆಂತರಿಕಗೊಳಿಸಿದೆ ಮತ್ತು ಒಪ್ಪಿಕೊಳ್ಳುವಂತೆ ಮಾಡಿದೆ. ಕೆಲವೊಮ್ಮೆ ಅವುಗಳನ್ನು ಪ್ರಜ್ಞಾಪೂರ್ವಕವಾಗಿಯೇ ಪ್ರತಿರೋಧದ ಮತ್ತು ಸಮಾಲೋಚನೆಯ ಅರಿವಿಲ್ಲದಂತೆ ಮಾಡಲಾಗುತ್ತದೆ." **– ಶಿಕ್ಷಕಿ, ಬೆಂಗಳೂರು**

"ನನಗೆ ನರ್ಸ್ ಅಗೋಕೆ ಇಷ್ಡ ಇತ್ತು. ಆದರೆ ನಾನು ಎಂ.ಎ. ಎಕನಾಮಿಕ್ಸ್ ಮಾಡ್ದೆ. ನನ್ನ ತಂದೆಗೆ ನಾನು ನರ್ಸ್ ಆಗೋದು ಇಷ್ಟ ಇರಲಿಲ್ಲ. ತಂದೆಯ ಪ್ರಕಾರ ಹೆಣ್ಣು ಮಕ್ಕಳಿಗೆ ರಾತ್ರಿ ಪಾಳಿಯ ಕೆಲಸ ಒಳ್ಳೆಯ ಆಯ್ಕೆ ಅಲ್ಲ. ಹಾಗೆ ನರ್ಸಿಂಗ್ ಹೆಣ್ಣು ಮಕ್ಕಳಿಗೆ ಸೂಕ್ತವಾದ ವೃತ್ತಿ ಅಲ್ಲ ಎನ್ನುವುದು ಅವರ ಅಭಿಪ್ರಾಯವಾಗಿತ್ತು. ಇದಕ್ಕೆ ಸಂಭಂದಿಸಿದಂತೆ ನಾನು ನನ್ನ ತಂದೆಯ ಜೊತೆ ಮಾತಾಡಿ ನನ್ನ ಆಸೆಯ ಬಗ್ಗೆ ಮಾತನಾಡಲು ಮಾನಸಿಕವಾಗಿ ತಯಾರಿರಲಿಲ್ಲ. ನನ್ನ ತಂದೆ ತಾಯಿ ಸೇರಿದಂತೆ ನಮ್ಮ ಕುಟುಂಬದಲ್ಲಿ ಎಲ್ಲರೂ

ಅನಕ್ಷರಸ್ಥರಾಗಿದ್ದರಿಂದ ನನಗೆ ನರ್ಸಿಂಗ್ ಓದಲು ಇಷ್ಟ ಇರುವುದನ್ನು ಮುಕ್ತವಾಗಿ ಹೇಳಿಕೊಳ್ಳಲು ಸಾಧ್ಯವಾಗಲಿಲ್ಲ." – **ಶಿಕ್ಷಕಿ**

ಎರಡನೇ ತಲೆಮಾರಿನ ಕಲಿಕೆಗೆ ತೆರೆದುಕೊಂಡಿರುವ ಸಂವಾದಿಯೊಬ್ಬರು ಇಂಗ್ಲೀಷ್ ಶಿಕ್ಷಣದ ಬಗ್ಗೆ ಮಾತನಾಡುತ್ತಾ, "ಒಬ್ಬ ಎರಡನೇ ತಲೆಮಾರಿನ ದಲಿತ ಮಹಿಳೆಗೆ ಶಿಕ್ಷಣ ಪಡೆಯುವುದು ಇತರರಿಗಿಂತ ಭಿನ್ನವಾದುದು. ಶಿಕ್ಷಣಕ್ಕೆ ತೆರೆದುಕೊಂಡ ದಲಿತ ಕುಟುಂಬ ತಮ್ಮ ಮಕ್ಕಳಿಗೆ ಒಳ್ಳೆ ಶಾಲೆಯಲ್ಲಿ ಶಿಕ್ಷಣ ಸಿಗುವುದನ್ನು ಖಾತ್ರಿ ಪಡಿಸಿಕೊಳ್ಳುತ್ತಾರೆ. ಹಾಗಾಗಿ, ಶಿಕ್ಷಣದ ಹಿನ್ನಲೆ ಇರುವ ಕುಟುಂಬಗಳು ಒಂದು ಸಾಮಾಜಿಕ ಬಂಡವಾಳ. ಅದನ್ನು ದಕ್ಕಿಸಿಕೊಳ್ಳಲು ದಲಿತ ಮಹಿಳೆಯರು ಈ ದಿನದವರೆಗೂ ಪ್ರಯತ್ನಿಸುತ್ತಿದ್ದಾರೆ".

"ನನ್ನ ತಂದೆ ನನ್ನನ್ನು ಒಳ್ಳೆಯ ಶಾಲೆಗೆ ಸೇರಿಸುತ್ತಿದ್ದರು. ನನ್ನ ತಂದೆಗೆ ಅವರ ಕೆಲಸದಲ್ಲಿ ಆಗಾಗ ವರ್ಗಾವಣೆ ಆಗುತ್ತಿತ್ತು. ಹೋದಲೆಲ್ಲಾ ಒಳ್ಳೆಯ ಖಾಸಗಿ ಶಾಲೆಗೆ ಸೇರಿಸುತ್ತಿದ್ದರು. ನಮಗೆ ಇಂಗ್ಲೀಷ್ ಚೆನ್ನಾಗಿ ಬರಬೇಕೆಂಬುದು ನನ್ನ ತಂದೆಯ ಆಸೆಯಾಗಿತ್ತು. ಇಂಗ್ಲೀಷ್ ಕಲಿಕೆಯ ಬೆಲೆ ಒಬ್ಬ ದಲಿತ ಪುರುಷನಿಗೆ ಮತ್ತು ಮಹಿಳೆಯರಿಗೆ ಇತರರಿಗಿಂತ ಸೂಕ್ಷ್ಮವಾಗಿ ಗೊತ್ತಿರುತ್ತದೆ." – **ಸಹ ಪ್ರಾಧ್ಯಾಪಕಿ**

ಹೀಗೆ ಪ್ರತಿನಿತ್ಯ ಸಂಘರ್ಷ ಮಾಡುತ್ತಿರುವ ದಲಿತ ಮಹಿಳೆಯರು ತಮ್ಮ ಕನಸ್ಸಿನ ಶಿಕ್ಷಣವನ್ನು ಪಡೆಯಲು ಮಾಡಿಕೊಂಡಿರುವ ಅನುಸಂಧಾನಗಳ ಬಗ್ಗೆ ಅವರ ಅನುಭವಗಳನ್ನು ಹಂಚಿಕೊಂಡಿದ್ದಾರೆ.

## ವೃತ್ತಿಯ ಆಯ್ಕೆ, ಅವಕಾಶ ಮತ್ತು ಅನುಸಂಧಾನಗಳು

ಈ ಅಧ್ಯಾಯದಲ್ಲಿ ಯುವ ದಲಿತ ಮಹಿಳೆಯರು ತಾವು ಆಸಕ್ತಿ ಹೊಂದಿರುವ ವೃತ್ತಿಜೀವನವನ್ನು ಮುಂದುವರಿಸಲು ಅಥವಾ ತಮ್ಮ ಜೀವನೋಪಾಯವನ್ನು ಭದ್ರಪಡಿಸಿಕೊಳ್ಳಲು ತೊಡಗಿರುವ ವಿವಿಧ ರೀತಿಯ ಅನುಸಂಧಾನಗಳನ್ನು ನಾವು ನೋಡುತ್ತೇವೆ. ಮುಂದಿನ ವಿಭಾಗಗಳು ಶಿಕ್ಷಣದ ಅವಕಾಶಗಳು, ಸಮಾನ ಉದ್ಯೋಗಾವಕಾಶಗಳನ್ನು ಪಡೆಯಲು ಸರ್ಕಾರದ ಕ್ರಮಗಳು, ಮದುವೆ, ಜಾತಿ ಮತ್ತು ಲಿಂಗಗಳೊಂದಿಗೆ ವೃತ್ತಿಜೀವನದ ಕಲ್ಪನೆಯ ಪರಸ್ಪರ ಸಂಬಂಧವನ್ನು ಹೊರತರುವ ಪ್ರಯತ್ನವನ್ನು ಮಾಡುತ್ತವೆ.

### ಶಿಕ್ಷಣದಿಂದ ವೃತ್ತಿ ವರೆಗಿನ ಹಾದಿ: ಅನಿಶ್ಚಿತತೆ ಮತ್ತು ರಾಜಿಗಳು

ಸಂವಾದಿಗಳಲ್ಲಿ ಕೆಲವರಿಗೆ ಕುಟುಂಬ ಮತ್ತು ಸ್ನೇಹಿತರಿಂದ ವೃತ್ತಿ ಮಾರ್ಗದರ್ಶನ ಪಡೆಯಲು ಸಾಧ್ಯವಾಗಿಲ್ಲ, ಇನ್ನೂ ಕೆಲವರು ಮನೆಯಲ್ಲಿನ ಆರ್ಥಿಕ ತೊಂದರೆಯು ಅವರ ಶೈಕ್ಷಣಿಕ ಆಯ್ಕೆಗಳನ್ನು

ಪ್ರಭಾವಿಸಿದೆ ಎಂದು ತಿಳಿಸಿದ್ದಾರೆ. ಕಲಾ ವಿಭಾಗ ಆಯ್ಕೆ ಮಾಡಿಕೊಂಡ ಪ್ರತಿಕ್ರಿಯಿಸಿದವರು ಹಂಚಿಕೊಂಡ ಕಾರಣಗಳು ಹೀಗಿವೆ.

1. ಇತರ ಕೋರ್ಸ್‌ಗಳನ್ನು ಆಯ್ಕೆ ಮಾಡಲು ಮಾರ್ಗದರ್ಶನದ ಕೊರತೆ.
2. ವೃತ್ತಿಪರ ಕೋರ್ಸ್‌ಗಳನ್ನು ಆಯ್ಕೆ ಮಾಡಲು ಆರ್ಥಿಕ ಬೆಂಬಲದ ಕೊರತೆ.
3. ವಿಜ್ಞಾನ ವಿಷಯಗಳಲ್ಲಿ ಉತ್ತಮ ಸಾಧನೆ ಮಾಡಲು ಸಾಧ್ಯವಾಗುವುದಿಲ್ಲ ಎಂಬ ಭಯ.
4. ಆರ್ಟ್ಸ್ ಆಯ್ಕೆ ಮಾಡಲು ಜೊತೆಗೆ ಓದಿದವರ ಒತ್ತಡ.
5. ಆರ್ಟ್ಸ್ ಕೋರ್ಸ್ ಆಯ್ಕೆ ಮಾಡುವಲ್ಲಿ ಸುರಕ್ಷತೆ ಮತ್ತು ವಿಶ್ವಾಸದ ಪ್ರಜ್ಞೆ.
6. ಸರ್ಕಾರಿ ಹುದ್ದೆ ಪಡೆಯಲು ಅಥವಾ ಐಎಎಸ್ ಪರೀಕ್ಷೆಗಳನ್ನು ಪಾಸಗಲು.

ಮಂಗಳೂರು ಮತ್ತು ಕೋಲಾರದ ಪ್ರತಿಕ್ರಿಯೆಗಳು, ಬೆಂಗಳೂರಿನ ಪ್ರತಿಕ್ರಿಯೆಯೊಂದಿಗೆ ಸಾಮ್ಯತೆ ಹೊಂದಿದೆ. 10 ಮತ್ತು 12 ನೇ ತರಗತಿ ಹಂತಗಳಲ್ಲಿ ವೃತ್ತಿ ಮಾರ್ಗದರ್ಶನದ ಕೊರತೆಯು ಯುವತಿಯರನ್ನು ತಮ್ಮ ಹಿತಾಸಕ್ತಿಗಳಿಗೆ ಹೊಂದಿಕೆಯಾಗದ ವೃತ್ತಿಜೀವನಕ್ಕೆ ಕರೆದೊಯ್ಯುತ್ತದೆ. ಕೆಲವೊಮ್ಮೆ ಆರ್ಥಿಕವಾಗಿ ಸ್ವತಂತ್ರರಾಗಲು ಸಹಾಯ ಮಾಡುವ ಸಂಬಳವೂ ದೊರಕುವುದಿಲ್ಲ.

ಬಿಜಾಪುರದ ಪ್ರಾಥಮಿಕ ಹಂತದಲ್ಲೇ ಶಾಲೆಯಿಂದ ಹೊರಗುಳಿದ ದೇವದಾಸಿ ಸಮುದಾಯದ ಯುವತಿಯೊಬ್ಬರು ಹೇಳಿದಂತೆ “ಬದುಕಿನ ನಿರ್ವಹಣೆಗೆ ಹಲವು ರೀತಿಯ ಕೆಲಸಗಳನ್ನು ಮಾಡಿದ್ದೇನೆ. ನನ್ನನ್ನು ದೇವಾಲಯಕ್ಕೆ ಸಮರ್ಪಿಸಲಾಗಿದೆ. ಕನಸು ಎನ್ನುವ ಮಾತಿಗೆ ನನ್ನ ಬದುಕಿನಲ್ಲಿ ಅರ್ಥವೇನು?” ಎನ್ನುತ್ತಾರೆ. ಕಡಿಮೆ ಸಂಬಳದಲ್ಲಿರುವ, ಕೆಳ ಹಂತದ ಉದ್ಯೋಗದಲ್ಲಿರುವ ಇತರರು ತಮ್ಮ ಕೆಲಸವನ್ನು ತಮ್ಮ ವೃತ್ತಿ ಎಂದು ಕರೆಯಲು ನಿರಾಕರಿಸುತ್ತಾರೆ. ಶಿಕ್ಷಣ, ಅಥವಾ ವೃತ್ತಿಜೀವನ ಈ ಮಹಿಳೆಯರಿಗೆ ಕನಸುಗಳಾಗಿ ಕಾಣಿಸಿಕೊಂಡಿಲ್ಲ.

### ಕೆಲಸದ ಸ್ಥಳಗಳಲ್ಲಿ ತಾರತಮ್ಯ

ನಮ್ಮ ಪ್ರತಿಸ್ಪಂದಕಿಯರಲ್ಲಿ 25 ರಿಂದ 30 ವಯಸ್ಸಿನ ಯುವತಿಯರು ಹೇಳುವಂತೆ, ಅವರಿಗೆ ಸುರಕ್ಷತೆ ನೀಡುವ, ಸ್ಕೋಪ್ ಇರುವ ಗೌರವಾನ್ವಿತ ಕೆಲಸಕ್ಕಾಗಿ ಟೀಚರ್ ಕೋರ್ಸ್‌ಗಳನ್ನು ಮಾಡಿದ್ದಾರೆಂದು ಅಭಿಪ್ರಾಯಪಟ್ಟಿದ್ದಾರೆ. ಸರ್ಕಾರಿ ನೌಕರಿ ದೊರೆಯದೇ ಅತಿಥಿ ಶಿಕ್ಷಕಿ/ಶಿಕ್ಷಕರಾಗಿ ಖಾಸಗಿ ಶಾಲೆಯಲ್ಲಿ ಕೆಲಸ ಮಾಡುತ್ತಿದ್ದಾರೆ. ಅದರಲ್ಲಿ ಒಬ್ಬ ಪ್ರತಿಸ್ಪಂದಕಿ ಹೇಳುವಂತೆ “ಶಾಲೆಗಳಲ್ಲಿ ಪ್ರತಿ ಜಾತಿಯವರ ಗುಂಪುಗಳಿರುತ್ತವೆ.

ಸರಸ್ವತಿ ಪೂಜೆ ತರಹದ ಕಾರ್ಯಕ್ರಮಗಳಲ್ಲಿ ನಮ್ಮನ್ನು ದೂರವಿಡುತ್ತಾರೆ. ಅವರ ಪ್ರಕಾರ "ಉತ್ತಮ ಜಾತಿಗಳು" ಮಾತ್ರ ಮಾಡಬೇಕಾದ ಪೂಜೆ. ಇನ್ನೂ ಪ್ರಮೋಶನ್‌ನ ವಿಚಾರಕ್ಕೆ ಬಂದರೆ, ಮೊದಲ ಆದ್ಯತೆ ಉನ್ನತ ಜಾತಿಯವರಿಗೆ ನೀಡಿ ನಂತರ ನಾವು ಆಯ್ಕೆ ಮಾಡಿಕೊಳ್ಳಬೇಕಿತ್ತು. ಕೆಲಸದ ಸ್ಥಳದಲ್ಲಿ ನಾವು ಬರುವ ಜಾಗದ ಮುಖಾಂತರ ನಮ್ಮನ್ನು ಗುರುತಿಸುತ್ತಾರೆ. ಹಟ್ಟಿ, ಪಾಳ್ಯಗಳಿಂದ ಬರುವ ಟೀಚರ್ಸ್ ಎನ್ನುತ್ತಾರೆ. ನಾವೆಷ್ಟೆ ಚೆನ್ನಾಗಿ ಪಾಠ ಮಾಡಿದರೂ ನಮಗೆ ಸಿಗುವ ಮರ್ಯಾದೆಯಲ್ಲಿ ವ್ಯಂಗ್ಯವಿರುತ್ತದೆ" ಎಂದು ಹೇಳುತ್ತಾರೆ.

"ಟೈಲರಿಂಗ್ ಕಲಿಯಲು ಹೋಗ್ತಿದ್ವಿ ಎಸ್.ಸಿ/ಎಸ್.ಟಿಗೆ ಬೇರೆ ಟೀಮ್ ಮಾಡಿದ್ದರು. ಕೊನೆಗೆ ಪ್ಯಾಕ್ ಮಾಡಿ ಕಸಗುಡಿಸಿ ಹೋಗಬೇಕಿತ್ತು. ಯಾರೂ ನಮ್ಮೊಡನೆ ಊಟಕ್ಕೆ ಬರುತ್ತಿರಲಿಲ್ಲ. ಯಾಕೆ ಎಂದು ಕೇಳಿದಕ್ಕೆ ನಮ್ಮನ್ನು ಜೊತೆಗೆ ಕರೆದುಕೊಂಡು ಹೋದರು. ಆದರೆ ಒಳಗೆ ಹೋಗಿ ನಮ್ಮನ್ನು ಹೊರಗೆ ಕೂರಿಸಿದರು. ಯಾವುದೇ ಫ್ಯಾಕ್ಟರಿಗೆ ಹೋದರೂ ನಮಗೆ ಕೊನೆಯ ಪ್ಯಾಕೆಜಿಂಗ್ ಕೆಲಸ ಮತ್ತೆ ಗೋಡನ್‌ಗಳನ್ನು ಕಸ ಗುಡಿಸುವ ಕೆಲಸ ಖಾಯಂ ಆಗಿತ್ತು".

ಇನ್ನು ಹೆಚ್ಚು ಶಿಕ್ಷಣ ಪಡೆಯದೆ ಅಸಂಘಟಿತ ಕ್ಷೇತ್ರಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವ ಯುವತಿಯರು ತಾವು ಕೆಲಸ ಮಾಡುವ ಸ್ಥಳಗಳಲ್ಲಿ ಪ್ರತಿದಿನ ಏಕವಚನದಲ್ಲೇ ಬೈಯುತ್ತಾರೆ ಎಂದು ತಮ್ಮ ನೋವನ್ನು ಹಂಚಿಕೊಂಡರು. "ನಮಗೂ ಯಂತ್ರಗಳಿಗೂ ಯಾವುದೇ ವ್ಯತ್ಯಾಸವಿಲ್ಲ. ನಾವೂ ಕೂಡ ಯಂತ್ರಗಳ ರೀತಿಯಲ್ಲಿ ಕೆಲಸ ಮಾಡುತ್ತಿರಬೇಕು. ಇಲ್ಲದಿದ್ದರೆ ಸಂಬಳ ಕಟ್ ಆಗುತ್ತದೆ. ಪೀರಿಯಡ್ಸ್ ಸಂದರ್ಭದಲ್ಲೂ ಕಾರ್ಮಿಕರಿಗೆ ಸಿಗಬೇಕಾದ ಮೂಲಭೂತ ಸೌಲಭ್ಯಗಳು ಸಿಗುವುದಿಲ್ಲ. ಮನೆಯ ಬಡತನ ಮತ್ತು ಹಸಿವು ಸಿಕ್ಕ ಯಾವುದೇ ಕೆಲಸಕ್ಕೆ ಹೋಗಬೇಕಾದ ಅನಿವಾರ್ಯ. ಮನೆಯಲ್ಲಿ ಗಂಡ ಸಂಸಾರದ ಬಗ್ಗೆ ತಲೆ ಕೆಡಿಸಿಕೊಳ್ಳುವುದಿಲ್ಲ. ಮಕ್ಕಳ ಜವಾಬ್ದಾರಿ ನಮ್ಮ ಮೇಲಿದೆ. ಅವರ ಓದು, ಊಟ ಮನೆಯ ಎಲ್ಲಾ ಜವಾಬ್ದಾರಿ ನಮ್ಮದೆ".

ಪೌರಕಾರ್ಮಿಕ ಮಹಿಳೆಯರು ಅದರಲ್ಲೂ ಗುತ್ತಿಗೆ ಆಧಾರದ ಮೇಲೆ ಕೆಲಸಕ್ಕೆ ಹೋಗುತ್ತಿರುವವರಿಗೆ ಕನಿಷ್ಟ ಸುರಕ್ಷತೆಗೆ ಬೇಕಾಗಿರುವ ಸಾಮಗ್ರಿಗಳಿಲ್ಲ. ಪ್ರತಿನಿತ್ಯ ಮುಂಜಾನೆಯೆ ಕೆಲಸಕ್ಕೆ ಹೋಗುವ ಇವರಿಗೆ ಲೈಂಗಿಕ ದೌರ್ಜನ್ಯಗಳು ಕೂಡ ಆಗುತ್ತವೆ. "ದಲಿತ ಹೆಣ್ಣು ಮಕ್ಕಳೆಂದರೆ ನಾವು ಕರೆದ ತಕ್ಷಣ ಬಂದು ನಮ್ಮ ಪಕ್ಕದಲ್ಲಿರ್ತಾರೆ ಅಂತ ಭಾವಿಸುವವರು ಹೆಚ್ಚು. ನಾವು ನಮ್ಮ ದೇಹ ಅಷ್ಟು ಚೀಪಲ್ಲ ಎಂದು ಅರ್ಥ ಮಾಡಿಸುವುದು ನಮ್ಮ ಕೆಲಸ ಅದಕ್ಕಾಗಿ ನಾವು ಒಂದಾಗಬೇಕಿದೆ".

ಮಂಗಳೂರಿನಲ್ಲಿ, ನಮ್ಮ ಸಂಶೋಧನೆಯು ಮಹಿಳೆಯರ ಎರಡು ವಿಭಿನ್ನ ಗುಂಪುಗಳು ಮತ್ತು ಅವರ ಅನುಭವಗಳ ಮೇಲೆ ಕೇಂದ್ರೀಕರಿಸಿದೆ. ಉನ್ನತ ಶಿಕ್ಷಣಕ್ಕೆ ಪ್ರವೇಶ ಪಡೆಯಲು ಮತ್ತು ಬೋಧನಾ

ವೃತ್ತಿಯಲ್ಲಿರುವವರು ಒಂದು ಗುಂಪಾಗಿದ್ದಾರೆ. ಇನ್ನೊಂದು ಕಾರ್ಮಿಕ ವರ್ಗದ ಮಹಿಳೆಯರದ್ದಾಗಿದೆ. ಎರಡನೇ ಗುಂಪಿನಲ್ಲಿ ಬೀಡಿ ಕಾರ್ಮಿಕರು, ಗೃಹರಕ್ಷಕ ಸಿಬ್ಬಂದಿ ಮತ್ತು ಖಾಸಗಿ ಸಂಸ್ಥೆಗಳಲ್ಲಿ ಸ್ವಚ್ಛತಾ ಕೆಲಸಗಳನ್ನು ಮಾಡುವ ಸಿಬ್ಬಂದಿಗಳಿದ್ದಾರೆ. ಈ ಮಹಿಳೆಯರು ಬಹಳ ಬೇಗ ಶಾಲೆಯಿಂದ ಹೊರಬಿದ್ದವರಾಗಿದ್ದಾರೆ. ಕೆಲವರು 8 ಅಥವಾ 9ನೇ ತರಗತಿಯಲ್ಲಿ ಮತ್ತು ಹಲವರು ಪ್ರೌಢಶಾಲೆಗೆ ಬರುವುದಕ್ಕೆ ಮೊದಲೇ ಶಿಕ್ಷಣ ತೊರೆದಿದ್ದಾರೆ. ಆ ಕುಟುಂಬಗಳು ತಲೆಮಾರುಗಳಿಂದ ಸಂಪನ್ಮೂಲಗಳಿಂದ ವಂಚಿತರಾಗಿದ್ದು, ಇಂತಹ ಪರಿಸ್ಥಿತಿಗೆ ಪ್ರಮುಖ ಕಾರಣ ಆರ್ಥಿಕ ಸಂಕಷ್ಟಗಳೇ ಆಗಿವೆ. ಹೆಚ್ಚಿನ ಸಂದರ್ಭಗಳಲ್ಲಿ, ಈ ಮಹಿಳೆಯರ ಪೋಷಕರು ಕೂಲಿ/ದೈನಂದಿನ ಮಂಜೂರಿಗಾಗಿ ಕಾರ್ಮಿಕರಾಗಿದ್ದರಿಂದ, ಈ ಜನರು ಚಿಕ್ಕ ವಯಸ್ಸಿನಲ್ಲಿಯೇ ಕೆಲಸ ಮಾಡಲು ದೂಡಲ್ಪಟ್ಟವರಾಗಿದ್ದಾರೆ. ಪ್ರತಿಕ್ರಿಯಿಸಿದವರಲ್ಲಿ ಒಬ್ಬರು ತನ್ನ ವೃತ್ತಿಯ ಬಗ್ಗೆ ಹೀಗೆ ಹೇಳಿದ್ದಾರೆ, "ನಾನು ಇನ್ನೇನು ಮಾಡಲಿ. ನಾನು ಏನಾದರೂ ಕೆಲಸ ಮಾಡಲೇಬೇಕು. ನನಗೆ ಆಯ್ಕೆ ಇಲ್ಲ , ಬೇರೆ ವಿಧಿಯಿಲ್ಲ"

ಪ್ರತಿಸ್ಪಂದಕಿಯೊಬ್ಬರು 2 ನೇ ಪಿಯುಸಿ ಪೂರ್ಣಗೊಳಿಸಿದ್ದರೂ ಅವರ ಅರ್ಹತೆಗೆ ಸೂಕ್ತವಾದ ಉದ್ಯೋಗವನ್ನು ಪಡೆಯಲಾಗಲಿಲ್ಲ. ಅವರ ಆಸೆ, ಕನಸುಗಳು ವಿಭಿನ್ನವಾಗಿದ್ದರೂ, ಬೇರೆ ದಾರಿಯಿಲ್ಲದ ಕಾರಣ ಅವರು ಕಡಿಮೆ ಸಂಬಳ ಸಿಗುವ ಉದ್ಯೋಗದಲ್ಲಿದ್ದಾರೆ. ತನ್ನ ಪರಿಸ್ಥಿತಿಯ ಬಗ್ಗೆ ಅವರು ಹೀಗೆ ಹೇಳುತ್ತಾರೆ.

"ನಾನು ಇಷ್ಟು ಓದಿದ್ದರು, ನನಗೆ ಸಿಕ್ಕಿದ್ದು ಸ್ವಚ್ಛಗೊಳಿಸುವ ಕೆಲಸ. ಶಾಲೆಯವರು ನನಗೆ ಶೌಚಾಲಯ ಸ್ವಚ್ಛಗೊಳಿಸಲು ಹೇಳಿದಾಗ ನನಗೆ ತುಂಬ ಬೇಸರವಾಯಿತು. ಆದರೆ, ನಾನು ಮಕ್ಕಳ ಸೇವೆ ಮಾಡುತ್ತಿದ್ದೇನೆ ಎಂದು ನನಗೆ ನಾನೇ ಸಮಾಧಾನ ಮಾಡಿಕೊಂಡೆ. ಈಗ ನನ್ನ ಕೆಲಸದಲ್ಲಿ ಶಾಂತಿ ಸಿಕ್ಕಿದೆ" ಎನ್ನುತ್ತಾರೆ.

ಈ ಸನ್ನಿವೇಶಗಳು ಬಹಳ ಸ್ಪಷ್ಟವಾಗಿ ವ್ಯವಸ್ಥಿತ ಜಾತಿವಾದದ ಕಾರಣದಿಂದಾಗಿ ಕಂಡುಬರುತ್ತದೆಯಾದರೂ, ಮಹಿಳೆಯರು ಇದನ್ನು ಜಾತಿವಾದದಿಂದ ಎಂದು ಹೇಳಿಲ್ಲ. ಜಾತಿಯ ಕಾರಣದಿಂದಾಗಿ ಅವರನ್ನು ಕೌಶಲ್ಯರಹಿತ ಮತ್ತು ಕಡಿಮೆ ಆದಾಯದ ಉದ್ಯೋಗಗಳಿಗೆ ದೂಡಲಾಗಿದೆ ಎಂದೂ ಹೇಳಿಲ್ಲ. ಮಾಹಿತಿ ನೀಡಿದ ಅನೇಕರ ಪ್ರತಿಕ್ರಿಯೆಗಳು ಚುಟುಕಾಗಿತ್ತು. ಅವರು ತಮ್ಮ ಕೆಲಸದ ಸ್ಥಳದಲ್ಲಿ ಜಾತಿವಾದ ಅಥವಾ ಅದರಿಂದಾದ ತಾರತಮ್ಯವನ್ನು ಖಡಾಖಂಡಿತವಾಗಿ ತಿರಸ್ಕರಿಸಿದರು. ಹಕ್ಕುಗಳು ಮತ್ತು ತಾರತಮ್ಯ ಭಾಷೆ ಅವರ ಕಲ್ಪನೆಯಲ್ಲಿ ಇಲ್ಲವೇಯಿಲ್ಲ ಎಂದೆನಿಸುತ್ತದೆ. ಅವರು ಸೇವಾ ಮನೋಭಾವವನ್ನು ಅಳವಡಿಸಿಕೊಳ್ಳುತ್ತಾರೆ ಅಥವಾ ತಮ್ಮ ವಿಧಿಯೆಂದುಕೊಂಡು ನಿಟ್ಟುಸಿರುಬಿಡುತ್ತಾರೆ.

## ವೃತ್ತಿಯಲ್ಲಿ ನಿರಂತರ ಜಾತಿ ಪಕ್ಷಪಾತ

ಉನ್ನತ ಶಿಕ್ಷಣ ಪಡೆದು ಸ್ವಲ್ಪ 'ಪ್ರತಿಷ್ಠಿತ' ಕೆಲಸದಲ್ಲಿರುವವರು ಕೂಡ ಜಾತಿಯ ತಾರತಮ್ಯಗಳಿಂದ ನಲುಗಿದ್ದಾರೆ. ಜಾತಿ, ಮಹಿಳೆ ಮತ್ತು ಬಡತನ ಈ ಮೂರರ ಕಾರಣಕ್ಕೆ ಕೆಲಸದ ಸ್ಥಳಗಳಲ್ಲಿ ಹೆಚ್ಚು ತಾರತಮ್ಯಗಳಾಗುತ್ತಿವೆ. ಪ್ರತಿಸ್ಪಂದಕಿಯೊಬ್ಬರು ಹೇಳುವಂತೆ "ನಾನೆಲ್ಲೂ ಕೆಲಸ ಮಾಡಿಲ್ಲ. ಎಲ್ಲೂ ಸಂಬಳ ತಗೊಂಡಿಲ್ಲ. ಟೆಲಿಕಾಲಂಗೆ ಹೋದೆ. ಲವ್ವ್ಯೂ ಅನ್ನೋದು, ಮದುವೆ ಮಾಡ್ಕೊಳ್ತೀಯ ಅನ್ನೋದು. ಐ ಲವ್ಯು ಅಂದು ಬಿಡಮ್ಮ ಅನ್ನೊದು ಜಾಸ್ತಿ ಇರ್ತಿತ್ತು. ಅದು ಇಷ್ಟ ಆಗಲಿಲ್ಲ. ಸಂಬಳ ತಗೊಳ್ಳೋಕು ಹೋಗಲಿಲ್ಲ. ಧರಿದ್ರವಾಗಿ ನಡೆದುಕೊಳ್ಳುತ್ತಿದ್ರು". ಮತ್ತೊಬ್ಬರು ಹೇಳುವಂತೆ "ಹಾಸ್ಪಿಟಲ್‌ನಲ್ಲಿ ಕೆಲಸಕ್ಕೆ ಹೋದೆ. ಒಬ್ಬ ನಮ್ಮ ಅಪ್ಪನ ವಯಸ್ಸಿನವನು ಕಾಲು ತುಳಿದುಕೊಂಡು ಹೋದ. ಯಾಕಣ್ಣ ಕಾಲು ತುಳಿತೀಯ ಅಂದೆ ಅದನ್ನು ಲೆಕ್ಕಿಸದೆ ಆತ ಮತ್ತೆ ಮತ್ತೆ ಬಂದು ಕಾಲು ತುಳಿಯೋದು ಮಾಡ್ತಿದ್ದ ಮತ್ತು ಇದು ಇಲ್ಲಿ ಕಾಮನ್ ಅಂದ. ಅದಕ್ಕೆ ಕೆಲಸ ಬಿಟ್ಟು ಬಂದೆ".

ಉನ್ನತ ಶಿಕ್ಷಣದಲ್ಲಿರುವ ಮಹಿಳೆಯರು ಹೇಳಿರುವಂತೆ, ಅವರು ಆ ಮಟ್ಟಕ್ಕೆ ಬರುವುದು ಅಷ್ಟೇನೂ ಸುಲಭದ ದಾರಿಯಾಗಿರಲಿಲ್ಲ. ಕೆಲವು ಪ್ರಕರಣಗಳಲ್ಲಿ, ಈ ಮಹಿಳೆಯರು ಉನ್ನತ ಶಿಕ್ಷಣಕ್ಕೆ ಬರಲು ಕುಟುಂಬದ ಸದಸ್ಯರ ಬೆಂಬಲ ದೊರಕಿದ್ದು, ಇಂತಹದೇ ಆಕಾಂಕ್ಷೆಗಳನ್ನು ಇತರ ತರುಣಿಯರಲ್ಲಿ ಪ್ರೇರೇಪಿಸುವುದಕ್ಕೆ ಕಾರಣರಾಗಿದ್ದಾರೆ. ಶಿಕ್ಷಣದ ಅಧ್ಯಾಯದಲ್ಲಿ ವಿವರಿಸಿರುವಂತೆ, ವಿದ್ಯಾರ್ಥಿವೇತನ, ಮೀಸಲಾತಿ ಮತ್ತು ಹಾಸ್ಟೆಲ್ ಸೌಲಭ್ಯಗಳು ಅವರ ಇಚ್ಛೆಗೆ ತಕ್ಕ ವೃತ್ತಿಯನ್ನು ಹೊಂದಲು ಸಹಾಯವಾಗಿದೆ.

ಆದಾಗ್ಯೂ, ಶೈಕ್ಷಣಿಕ ಕ್ಷೇತ್ರವನ್ನು ಪ್ರವೇಶಿಸಿದ ಮೇಲೂ, ಅವರು ತಮ್ಮ ಕೆಲಸದ ಪ್ರದೇಶದಲ್ಲಿ ಮತ್ತು ಅವರ ವೈಯಕ್ತಿಕ ಜೀವನದಲ್ಲಿ ಸೂಕ್ಷ್ಮವಾಗಿ ಮತ್ತು ಕೆಲವೊಮ್ಮೆ ಬಹಿರಂಗವಾಗಿ ಜಾತಿವಾದವನ್ನು ಮತ್ತದರ ವಿವಿಧ ರೂಪಗಳನ್ನು ಎದುರಿಸುತ್ತಲೇ ಇರುತ್ತಾರೆ. ಪ್ರಾಧ್ಯಾಪಕರಾಗಿ ಕೆಲಸ ಮಾಡುವ ಮತ್ತು ವಿಶ್ವವಿದ್ಯಾನಿಲಯದ ಕ್ಯಾಂಪಸ್‌ನಲ್ಲಿ ವಾಸಿಸುವ ಒಬ್ಬರು ಹೇಳಿದಂತೆ, ಅವರ ಕುಟುಂಬವು "ಎಸ್‌ಸಿ" ಎಂದು ತಿಳಿದುಬಂದ ನಂತರ ಮೇಲ್ಜಾತಿಯ ಸಹೋದ್ಯೋಗಿಗಳು (ಆಚಾರ್ಯರು) ಇವರ ಮನೆಗೆ ಭೇಟಿ ನೀಡುವುದನ್ನು ನಿಲ್ಲಿಸಿದ್ದಾರೆ.

## ವೃತ್ತಿಯ ಅನುಸಂಧಾನಗಳು

ಮಹಿಳೆಯರ ರಾಜಕೀಯ ವೃತ್ತಿಜೀವನವನ್ನು ರೂಪಿಸುವಲ್ಲಿ ಕುಟುಂಬ ಮತ್ತು ಪುರುಷರ ಬೆಂಬಲ ಮಹತ್ವದ ಪಾತ್ರ ವಹಿಸುತ್ತದೆ ಮತ್ತು ಹಕ್ಕುಗಳ ಅರಿವು ಹೆಚ್ಚಿಸುವಲ್ಲಿ ಮತ್ತು ಐಡೆಂಟಿಟಿಗಳನ್ನು ರೂಪಿಸುವಲ್ಲಿ

ತಳಜಾತಿ ಸಮುದಾಯಗಳ ಹಿತಾಸಕ್ತಿಗಳನ್ನು ಪೂರೈಸುವ ನಿರ್ದಿಷ್ಟ ಪಕ್ಷಗಳ ನಿರ್ಣಾಯಕ ಪಾತ್ರವನ್ನು ನಾವು ಕಾಣುತ್ತೇವೆ. ನಮ್ಮ ಅಧ್ಯಯನದಲ್ಲಿ ಕುಟುಂಬ, ಶಿಕ್ಷಣ ಹಾಗು ಮುಖ್ಯವಾಗಿ ಕೋಲಾರದಲ್ಲಿ ರಾಜಕೀಯ ಸಂಘಟನೆಗಳಲ್ಲಿ ಯುವತಿಯರು ತೊಡಗಿಕೊಳ್ಳಲು ಪರಸ್ಪರ ಬೆಂಬಲ ತೋರಿಸಿರುವುದು ಕಂಡುಬರುತ್ತದೆ. ಹಾಗು ಅವರು ಶಿಕ್ಷಣ ಹಾಗು ಮದುವೆಯ ಸಂಬಂಧಗಳಲ್ಲಿ ಉಳಿಯಲು ಸಂಕೀರ್ಣ ಹೊಂದಾಣಿಕೆಗಳನ್ನು ಸಹ ಮಾಡಿಕೊಂಡಿದ್ದಾರೆ.

ಕೆಲಸದ ಸ್ಥಳದಲ್ಲಿ ಯುವತಿಯರು ಅನುಸಂಧಾನ ಮಾಡಿಕೊಳ್ಳುವುದು ಕಷ್ಟ. "ಅಪ್ಪನ ಮನೆಯಲ್ಲಿ, ಗಂಡನ ಮನೆಯಲ್ಲಿ ಈಗ ಕೆಲಸಕ್ಕೆ ಹೋಗಬಾರದು ಅಂತೇನಿಲ್ಲ. ಆದರೆ ಅವ್ರು ಹೇಳುವ ಕೆಲಸಗಳಿಗೆ ಹೋಗಬೇಕು. ಬೆಳಗ್ಗೆ ಹೋಗಿ ಸಂಜೆ ಬರುವ, ಸರಿಯಾಗಿ ಸಂಬಳ ತರುವ ಕೆಲಸಗಳಾದರೆ ಅವರ ಅಭ್ಯಂತರವಿಲ್ಲ. ಇಷ್ಟಕ್ಕೆ ಅವಕಾಶ ಸಿಕ್ಕಿರುವುದೆ ನಮಗೆ ಖುಷಿ. ಪರ್ಯಾಯ ಅವಕಾಶಗಳು ದೊರಕಿರುವುದರಿಂದ ಎನ್‌ಜಿಓ ಮತ್ತು ಸಂಘಟನೆಗಳ ಸಂಪರ್ಕಕ್ಕೆ ಬಂದ ನಂತರ ತಮ್ಮ ಕೆಲಸದ ಕನಸುಗಳ ಬಗ್ಗೆ ವಿಭಿನ್ನವಾಗಿ ಆಲೋಚಿಸುತ್ತಿದ್ದಾರೆ. ನಾವು ಬೆಳೆಯಬೇಕು ನಮ್ಮ ಸಮುದಾಯದ ಯುವತಿಯರನ್ನು ಎಚ್ಚರಿಸಬೇಕು" ಎನ್ನುತ್ತಾರೆ ಪ್ರತಿಸ್ಪಂದಕಿಯೊಬ್ಬರು. ಕೆಲಸದ ಸ್ಥಳಗಳಲ್ಲಿ ಮೂಲಭೂತ ಸೌಕರ್ಯಗಳ ಕೊರತೆ, ಸರಿಯಾಗಿ ಸಂಬಳ ಕೊಡದೆ ಇರುವುದು, ಮೇಲಾಧಿಕಾರಿಗಳ ಕಿರುಕುಳಗಳು ಸಾಮಾನ್ಯವಾದಂತಿದೆ. ಅವುಗಳನ್ನು ಪ್ರಶ್ನಿಸಿದರೆ ಕೆಲಸ ಕಳೆದುಕೊಳ್ಳಬೇಕಾಗುತ್ತೆ. ಹಾಗಾಗಿ ಏನನ್ನು ಪ್ರಶ್ನಿಸದೆ ಕೆಲಸ ಮಾಡುವುದು ಅಥವಾ ಕೆಲಸದಿಂದ ಹೊರಗಡೆ ಬರುವುದು ಮಾಡುತ್ತೇವೆ.

## ಮದುವೆಯ ಕನಸುಗಳು, ವಾಸ್ತವಗಳು ಮತ್ತು ಸಂಧಾನ

ವಿವಾಹವು ಏಕಪತ್ನಿತ್ವದ ಸಕಂಥನದಲ್ಲಿ ಬೇರೂರಿದೆ, ಅದು ಪುರುಷರು ಮತ್ತು ಬಂಡವಾಳಶಾಹಿಗಳ ಹಿತಾಸಕ್ತಿಗಳಿಗೆ ಪ್ರಾಮುಖ್ಯತೆ ನೀಡುತ್ತದೆ. ಇದು ಪ್ರತ್ಯೇಕತೆ, ಏಕಸ್ವಾಮ್ಯತೆ ಮತ್ತು ಅಸೂಯೆಯ ಕಾರ್ಯವಿಧಾನಗಳ ಮೂಲಕ ಕಾರ್ಯನಿರ್ವಹಿಸುತ್ತದೆ.

ಸ್ತ್ರೀವಾದಿ ಅಧ್ಯಯನಗಳು ಯಾವಾಗಲೂ 'ಜೆಂಡರ್ ಲೆನ್ಸ್' ಮೂಲಕ ವಿವಾಹದ ಕುರಿತು ಚರ್ಚಿಸುತ್ತದೆ. ದಲಿತ ಅಧ್ಯಯನಗಳು ಜಾತಿಯ ಮಸೂರದ ಮೂಲಕ ಮದುವೆಯನ್ನು ನೋಡಿದೆ ಮತ್ತು ಜಾತಿ ಶ್ರೇಣಿಯನ್ನು ಪ್ರಶ್ನಿಸಲು ಅಂತರ್ಜಾತಿ ವಿವಾಹದ ಮಹತ್ವವನ್ನು ಇದು ಮುನ್ನಲೆಗೆ ತರುತ್ತದೆ. ದಲಿತ ಸ್ತ್ರೀವಾದವು ಮುಖ್ಯವಾಹಿನಿಯ ಮಹಿಳಾ ಆಂದೋಲನ ಮತ್ತು ದಲಿತ ಚಳವಳಿಯಿಂದ ಹೊರಗುಳಿದಿದ್ದರಿಂದ

ಹೊರಹೊಮ್ಮಿದೆ. ರೇಗೆ ಇದನ್ನು 'ಸ್ತ್ರೀತ್ವದ ಸವರ್ಣೈಸೇಶನ್ ಮತ್ತು ದಲಿತತೆಯ ಪುಲ್ಲಿಂಗೀಕರಣ' ಎಂದು ಕರೆಯುತ್ತಾರೆ. ದಲಿತ ರಾಜಕೀಯದಲ್ಲಿ ದಲಿತ ಮಹಿಳೆಯರ ಸ್ಥಳ ಮತ್ತು ಅಭಿವ್ಯಕ್ತಿ ತೀವ್ರ ಕುಸಿತ ಕಂಡಿದೆ.


ಅಂಬೇಡ್ಕರ್ ನಂತರ ದಲಿತ ರಾಜಕೀಯದಲ್ಲಿ ದಲಿತ ಮಹಿಳೆಯರ ಅಭಿವ್ಯಕ್ತಿ ತೀವ್ರ ಕುಸಿತ ಕಂಡಿದೆ. ಎರಡೂ ಚಳವಳಿಗಳು ವೈಯಕ್ತಿಕ ಅನುಭವ ಮತ್ತು ರಾಜಕೀಯದ ಮೇಲೆ ಬಂಡವಾಳ ಹೂಡಿದವು ಮತ್ತು ಈ ಪ್ರಕ್ರಿಯೆಯಲ್ಲಿ ಮೇಲ್ಜಾತಿ, ಮಧ್ಯಮ ವರ್ಗದ ಮಹಿಳೆಯ ಅನುಭವ ಮತ್ತು ದಲಿತ ಪುರುಷ ಅನುಭವವನ್ನು ಸಾರ್ವತ್ರಿಕಗೊಳಿಸಿತು. ಸಮುದಾಯವನ್ನು ಕಾಪಾಡುವ ಅಗತ್ಯತೆ ಮತ್ತು ಸಹೋದರತ್ವದ ಕಲ್ಪನೆಯ ಸಮರ್ಥನೆಯೊಂದಿಗೆ ಎರಡೂ ಚಳವಳಿಗಳು ದಲಿತ ಮಹಿಳೆಯರ 'ವಿಭಿನ್ನ' ಧ್ವನಿಯನ್ನು ಗುರುತಿಸಲು ನಿರಾಕರಿಸಿದವು.

## ಸಂಗಾತಿಯ ಆಯ್ಕೆ

ನಾಲ್ಕು ಜಿಲ್ಲೆಗಳಲ್ಲಿನ ವಿವಾಹಿತ ಮತ್ತು ಅವಿವಾಹಿತ ದಲಿತ ಮಹಿಳೆಯರು ಆಯ್ಕೆ ಮತ್ತು ಜೀವನ ಸಂಗಾತಿಯ ಕಲ್ಪನೆಗೆ ಸಂಬಂಧಿಸಿದಂತೆ ಪ್ರಸ್ತುತಪಡಿಸಲು ಭಿನ್ನ ನಿಲುವು ಮತ್ತು ವಾಸ್ತವಗಳನ್ನು ಹೊಂದಿದ್ದಾರೆ.

### *ಕುಟುಂಬದ ಬಗ್ಗೆ ಕೃತಜ್ಞತೆ: ಶಿಕ್ಷಣದಿಂದ ಮದುವೆಯತ್ತ ಪ್ರಯಾಣ*

ಅಧ್ಯಯನದಲ್ಲಿ ಭಾಗವಹಿಸಿದವರ ಕಥನಗಳನ್ನು ಗಮನಿಸಿದರೆ ಹೆಚ್ಚಿನವರಿಗೆ ವಿವಾಹದ ಬಗ್ಗೆ ಕನಸುಗಳಿಲ್ಲ ಎಂಬುದು ಸ್ಪಷ್ಟವಾಗುತ್ತದೆ. ಅವರಿಗೆ ಆಯ್ಕೆ ಮಾಡಲು ಸ್ವಾಯತ್ತತೆ ಇಲ್ಲ. ವಿವಾಹದ ಬಗ್ಗೆ ದಲಿತ ಮಹಿಳೆಯರ ಆಲೋಚನೆಗಳನ್ನು ರೂಪಿಸುವಲ್ಲಿ ಜಾತಿ ಮತ್ತು ಲಿಂಗ ಪ್ರಮುಖಪಾತ್ರವಹಿಸಿದೆ. ಬೆಂಗಳೂರಿನ ಇಪ್ಪತ್ತು ಜನರಲ್ಲಿ ಏಳು ಮಂದಿ ವಿವಾಹವಾಗಿದ್ದರೆ. ಒಬ್ಬರು ವಿಚ್ಛೇದಿತೆ. ಪ್ರತಿಕ್ರಿಯಿಸಿದ 20 ಜನರಲ್ಲಿ 19 ಮಂದಿ ಉನ್ನತ ಶಿಕ್ಷಣವನ್ನು ಪಡೆದ ಮೊದಲ ತಲೆಮಾರಿನವರು.



ಐತಿಹಾಸಿಕವಾಗಿ, ದಲಿತ ಸಮುದಾಯಕ್ಕೆ ಔಪಚಾರಿಕ ಶಿಕ್ಷಣವನ್ನು ನಿರಾಕರಿಸಲಾಗಿದೆ. ಆದ್ದರಿಂದ ಮೊದಲ ತಲೆಮಾರಿನ ಕಲಿಯುವ ಯುವತಿಯರು ಪದವೀಧರರಾಗಲು ಸಾಧ್ಯವಾಗಿಸಿದ ಪೋಷಕರಿಗೆ ಋಣಿಯಾಗಿರಬೇಕು ಎಂದು ಭಾವಿಸುತ್ತಾರೆ. ದಲಿತ ಸಮುದಾಯದ ಮಹಿಳೆ ಹಾಗು ಪುರುಷರು ಉನ್ನತ ಶಿಕ್ಷಣ ಪಡೆಯುವುದರಿಂದ ತಮ್ಮ ಆರ್ಥಿಕ ಸ್ಥಿತಿ ಉತ್ತಮವಾಗುತ್ತದೆ ಎಂದು ನಂಬಿದ್ದಾರೆ. ಆದ್ದರಿಂದ ಪೋಷಕರು ಯುವಕ, ಯುವತಿಯರನ್ನು ಶಿಕ್ಷಣ ಪಡೆಯಲು ಪ್ರೋತ್ಸಾಹಿಸುತ್ತಾರೆ. ಶಿಕ್ಷಣವನ್ನು ಪಡೆಯಲು ಪ್ರೋತ್ಸಾಹಿಸಲ್ಪಟ್ಟ ದಲಿತ ಮಹಿಳೆಯರು ತಮ್ಮ ಕೃತಜ್ಞತೆಯನ್ನು ವ್ಯಕ್ತಪಡಿಸುವ ಏಕೈಕ ಮಾರ್ಗವೆಂದರೆ ತಮ್ಮ ಮದುವೆಯಲ್ಲಿ ಪೋಷಕರ ನಿರ್ಧಾರವನ್ನು ಒಪ್ಪಿಕೊಳ್ಳುವುದು ಎಂದು ಕೋಲಾರ, ಬೆಂಗಳೂರು ಮತ್ತು ಮಂಗಳೂರಿನ ಅನೇಕ ಕಥನಗಳು ತೋರಿಸುತ್ತವೆ.

ಬೆಂಗಳೂರಿನಲ್ಲಿ ಸ್ನಾತಕೋತ್ತರ ವಿದ್ಯಾರ್ಥಿನಿಯರೊಂದಿಗೆ ನಡೆಸಿದ ಗುಂಪು ಚರ್ಚೆಯಲ್ಲಿ, ಪ್ರತಿಕ್ರಿಯಿಸಿದವರು ಹೀಗೆ ಹೇಳಿದರು:

"ನನ್ನ ಮದುವೆಯ ಬಗ್ಗೆ ನನಗೆ ಕನಸುಗಳಿಲ್ಲ. ನನ್ನ ಹೆತ್ತವರು ನನಗಿಂತ ನನ್ನ ಬಗ್ಗೆ ಚೆನ್ನಾಗಿ ತಿಳಿದಿದ್ದಾರೆ. ನನ್ನ ಪೋಷಕರು ನನಗೆ ಪ್ರತಿಯೊಂದು ವಿಷಯದಲ್ಲೂ ಸ್ವಾತಂತ್ರ್ಯವನ್ನು ನೀಡಿದ್ದಾರೆ. ಆದ್ದರಿಂದ, ನನ್ನ ಮದುವೆಯ ವಿಷಯ ಬಂದಾಗ ಅವರು ನನ್ನ ಸಂಗಾತಿಯನ್ನು ನಿರ್ಧಾರ ಮಾಡಬಹುದು. ಅವರು ನನಗೆ ಯಾವುದು ಉತ್ತಮ ಎಂದು ತಿಳಿದಿದ್ದಾರೆ" **– ಮಹಿಳಾ ಅಧ್ಯಯನ ವಿಭಾಗದ ವಿದ್ಯಾರ್ಥಿನಿ**

"ನಾನು ಮನೆಯವರು ನೋಡಿ ಮಾಡುವ ಮದುವೆಗೆ ಆದ್ಯತೆ ನೀಡುತ್ತೇನೆ. ಆಗ ಇಡೀ ಕುಟುಂಬವು ನಮ್ಮೊಂದಿಗೆ ಇರುತ್ತದೆ. ಪ್ರೀತಿಸಿ ಮದುವೆಯಾದಲ್ಲಿ ನಾವು ಪ್ರೀತಿಸುವವರ ಜೊತೆ ಇರಬಹುದು ಆದರೆ ಇಡೀ ಕುಟುಂಬವು ಸಂತೋಷವಾಗಿರುವುದಿಲ್ಲ. ಎರಡೂ ಕುಟುಂಬಗಳಲ್ಲಿ ಅಶಾಂತಿ ನೆಲೆಸುತ್ತದೆ. ನಮ್ಮ ಪೋಷಕರು ಶಿಕ್ಷಣ, ಉತ್ತಮ ಜೀವನ ಮತ್ತು ಎಲ್ಲವನ್ನೂ ಒದಗಿಸಿದ್ದಾರೆ. ನಾವು ಅವರಿಗೆ ಗೌರವವನ್ನು ತೋರಿಸುವ ಏಕೈಕ ಮಾರ್ಗವೆಂದರೆ ಅವರು ಆಯ್ಕೆ ಮಾಡುವವರನ್ನು ಮದುವೆಯಾಗುವುದು" **– ಸ್ನಾತಕೋತ್ತರ ವಿದ್ಯಾರ್ಥಿನಿ.**

ಈ ಪ್ರತಿಕ್ರಿಯೆಗಳು ದಲಿತ ಮಹಿಳೆಯರು ಮದುವೆ ಕುರಿತು ಪೋಷಕರ ಅಭಿಪ್ರಾಯದ ಕುರಿತ ಬದ್ಧತೆ ಹಾಗು ಪೋಷಕರು ಅವರಿಗೆ ಇದುವರೆಗೂ ಮಾಡಿರುವ ಬೆಂಬಲಕ್ಕೆ ಈ ಮೂಲಕ ಕೃತಜ್ಞತೆ ತೋರಲು ಬಯಸಿದ್ದಾರೆ ಎಂಬುದು ಸ್ಪಷ್ಟವಾಗಿ ಕಾಣಿಸುತ್ತದೆ. ಐದು ಪ್ರತಿಸ್ಪಂದಿಗಳು ಒಂದೇ ರೀತಿಯ ದೃಷ್ಟಿಕೋನವನ್ನು ಹೊಂದಿದ್ದರೆ, ಇದಕ್ಕೆ ಭಿನ್ನವಾದ ಪ್ರತಿಕ್ರಿಯೆಗಳಿವೆ, ಅದು ಮದುವೆಯ ಕುರಿತು ಭಿನ್ನವಾದ ಅಭಿಪ್ರಾಯ

ಹೊಂದಿದ್ದಾರೆ. ಆದ್ದರಿಂದ, ಸಂಸ್ಥೆಯಾಗಿ ವಿವಾಹವು ದಲಿತ ಮಹಿಳೆಯರ ಮೇಲೆ ಭಿನ್ನರೀತಿಯ ಪರಿಣಾಮಗಳನ್ನು ಬೀರುತ್ತದೆ.

### ದೇವದಾಸಿ ವ್ಯವಸ್ಥೆ ಮತ್ತು ವಿವಾಹದ ಕಲ್ಪನೆ

ಭೌಗೋಳಿಕವಾಗಿ ಅಂಚಿನಲ್ಲಿರುವ ಪ್ರದೇಶಗಳಲ್ಲಿ ಒಂದಾದ ಬಿಜಾಪುರ ಮತ್ತು ಅದರ ಸುತ್ತಮುತ್ತಲಿನ ಪ್ರದೇಶಗಳಲ್ಲಿ ದೇವದಾಸಿ ವ್ಯವಸ್ಥೆಯು ಸದಾಕಾಲಕ್ಕೂ ಯುವ ದಲಿತ ಮಹಿಳೆಯರನ್ನು ಅಶಕ್ತಗೊಳಿಸುತ್ತಲೇ ಇದೆ. ಇಲ್ಲಿ ಐತಿಹಾಸಿಕವಾಗಿ ಸಂಸ್ಕೃತಿ ಮತ್ತು ಸಂಪ್ರದಾಯದ ಹೆಸರಿನಲ್ಲಿ ಕುಟುಂಬವನ್ನು ಹೊಂದುವ ಹಕ್ಕನ್ನು ಮಹಿಳೆಯರಿಗೆ ನಿರಾಕರಿಸಿದ್ದರೂ, ಅವರು ತಮ್ಮದೇ ಕುಟುಂಬವನ್ನು ಹೊಂದುವ ಕನಸು ಕಾಣುತ್ತಾರೆ. ಉನ್ನತ ಶಿಕ್ಷಣಕ್ಕೆ ಪ್ರವೇಶಿಸಲು ಸಮರ್ಥರಾದ ಒಬ್ಬರು ಪ್ರತಿಕ್ರಿಯಿಸಿ, “ನಾನು ಗಂಡ, ಮನೆ, ಮಕ್ಕಳನ್ನು ಹೊಂದಲು ಬಯಸುತ್ತೇನೆ” ಎಂದು ಇತರರಂತೆ ಕುಟುಂಬವನ್ನು ಹೊಂದುವ ಹಂಬಲ ವ್ಯಕ್ತಪಡಿಸಿದ್ದಾರೆ.

ಇತರರು ಆರ್ಥಿಕವಾಗಿ ಸ್ವತಂತ್ರರಾಗಬೇಕೆಂಬ ಕನಸು ಕಾಣುತ್ತಿದ್ದರೆ ಮದುವೆ ಮತ್ತು ಕುಟುಂಬದ ಅವಶ್ಯಕತೆ ಈ ಕನಸಿನೊಟ್ಟಿಗೆ ಸೇರಿಹೋಗಿದೆ. ಪ್ರತಿ ಸ್ಪಂದಕಿಯೊಬ್ಬರು ಹೇಳುವಂತೆ “ನನಗೆ ಅಪ್ಪ ಇಲ್ಲ. ನನ್ನನ್ನು ಮದುವೆಯಾಗಲು ಯಾರು ತಯಾರಿಲ್ಲ. ಯಾರಾದರು ನನ್ನನ್ನು ಇಷ್ಟ ಪಟ್ಟರೆ, ಮದುವೆಯಾಗಲು ಇಚ್ಛಿಸಿದರೆ, ನಾನು ಅದು ನೆರವೇರುವ ನಿಟ್ಟಿನಲ್ಲಿ ಶ್ರಮಿಸುವೆ” ಎನ್ನುತ್ತಾರೆ.

ಇನ್ನೊಬ್ಬಾಕೆ ತನ್ನ ಮದುವೆ ಹೇಗೆ ವಿಫಲವಾಗಿದೆ ಎಂದು ಹೇಳಿರುವಂತೆ “ನನಗೆ ಮದುವೆ ಬಗ್ಗೆ ಯಾವುದೇ ಕನಸಿಲ್ಲ. ನಾನು ಪ್ರೀತಿಸಿ ಮದುವೆಯಾದೆ. ಆದರೆ ನನಗೆ ಅದರಲ್ಲಿ ಭರವಸೆಯೇ ಇಲ್ಲದಾಗಿದೆ. ನನ್ನ ಮದುವೆಯಾಗುವುದಕ್ಕೆ ಮುಂಚೆಯೇ ಇನ್ನೋರ್ವ ಹುಡುಗಿಯನ್ನು ಪ್ರೀತಿಸುತ್ತಿದ್ದ ಮತ್ತು ಅದರಿಂದ ಹೊರಬಂದಿದ್ದ. ನನಗೆ ಈ ವಿಷಯ ತಿಳಿಯುವಷ್ಟರಲ್ಲಿ ಬಹಳ ತಡವಾಗಿತ್ತು. ಆದರೆ ನಾನು ಈ ಮದುವೆಯಿಂದ ಹೊರಬರಲು ಸಾಧ್ಯವಿಲ್ಲ ಎಷ್ಟೇ ಆದರೂ ನಾನು ದೇವದಾಸಿಯಲ್ಲವೇ” ಎಂದು ವಿಷಾದಿಸಿದರು. ಈ ಸಂದರ್ಭದಲ್ಲಿ, ಆಗಬಹುದಾದ ಪರಿಣಾಮಗಳ ಭಯದಿಂದ ಆಕೆ ಮದುವೆಯಲ್ಲಿ ಸಿಕ್ಕಿಬಿದ್ದಿದ್ದಾಳೆ. ಮೋಸ ಹೋದ ನಂತರವೂ, ಆರ್ಥಿಕ ಅವಲಂಬನೆ ಮತ್ತು ಅವಳು ದೇವದಾಸಿ ಸಮುದಾಯದವಳಾಗಿದ್ದರಿಂದ ಪೂರ್ವಾಗ್ರಹಗಳು ಮತ್ತು ಎರಗಬಹುದಾದ ಕಳಂಕದಿಂದಾಗಿ ಮದುವೆಯಲ್ಲಿ ಹೊಂದಾಣಿಕೆ ಮಾಡಿಕೊಳ್ಳುತ್ತಿದ್ದಾಳೆ.

ಅನೇಕ ಸಂದರ್ಭಗಳಲ್ಲಿ, ವೈವಾಹಿಕ ಸಂಬಂಧಗಳು ಮಹಿಳೆಯರು ಆರ್ಥಿಕವಾಗಿ ಸಶಕ್ತೀಕರಣಕ್ಕೆ ಕಾರಣವಾಗಿಲ್ಲ. ಈ ಪ್ರದೇಶದ ಸುತ್ತಮುತ್ತಲಿನ ಪುರುಷರು ಆರ್ಥಿಕ ಸ್ಥಿರತೆಯನ್ನು ಪಡೆಯಲು ಸಾಧ್ಯವಾಗದ

ಕಾರಣ, ಮಹಿಳೆಯರು ಲೈಂಗಿಕ ಕಾರ್ಯಕರ್ತೆಯರು ಅಥವಾ ಇತರ ಕೆಳದರ್ಜೆಯ ಕೆಲಸಗಳಿಗೆ ದೂಡಲ್ಪಟ್ಟಿದ್ದಾರೆ. ವಿವಾಹವಾದ ಯುವಕರು ಸಹ ಸಮಾಜದ ಪಿತೃಪ್ರಧಾನ ವ್ಯವಸ್ಥೆಯಲ್ಲೇ ಮುಳುಗಿರುವುದರಿಂದ ಮಹಿಳೆಯರನ್ನು ಗೌರವದಿಂದ ಕಾಣುವುದಿಲ್ಲ. ದೇವದಾಸಿ ಸಮುದಾಯದ ಯುವತಿಯರಿಗೆ, ತಮ್ಮ ಸಮುದಾಯದೊಳಗೆ ಜೀವನ ಸಂಗಾತಿಗಳನ್ನು ಆಯ್ಕೆ ಮಾಡಿಕೊಳ್ಳುವ ಸಾಧ್ಯತೆಗಳು ಕಡಿಮೆ. ಅವರದೇ ಜಾತಿ ಅಥವಾ ಸಮುದಾಯಗಳ ಯುವಕರಿಗೆ ಸಾಮಾನ್ಯವಾಗಿ ಈ ಮಹಿಳೆಯರ ಬಗ್ಗೆ ಅಸಡ್ಡೆಯಿರುತ್ತದೆ. ನಮ್ಮ ಸಂಶೋಧನೆಯ ಭಾಗವಹಿಸಿದ್ದ ಅನೇಕ ಯುವತಿಯರು ತಮ್ಮ ಸಮುದಾಯಗಳ ಹೊರಗೆ ಸಂಗಾತಿಗಳನ್ನು ಆಯ್ಕೆ ಮಾಡಿಕೊಳ್ಳುವ ಬಯಕೆ ಹೊಂದಿದ್ದರೂ, ಅಂತಹವರು ಅವಾಸ್ತವಿಕ ನಿರೀಕ್ಷೆಗಳಲ್ಲಿ ಸಿಕ್ಕಿಹಾಕಿಕೊಳ್ಳುತ್ತಿದ್ದಾರೆ. ಪ್ರೀತಿ ಪ್ರಣಯ ಕುರಿತು ಮುಖ್ಯವಾಹಿನಿ ಮಾಧ್ಯಮಗಳಲ್ಲಿ ತೋರಿಸುವ ರೀತಿಯಿಂದಾಗಿ ಇಂತಹ ನಿರೀಕ್ಷೆಗಳು ಬಂದಿರಬಹುದು.

ಒಂದೆಡೆ, ವಿಮರ್ಶಾತ್ಮಕ ಸ್ತ್ರೀವಾದಿ ಚಿಂತನೆಯು ವಿವಿಧ ಸಾಮಾಜಿಕ ಹಿನ್ನೆಲೆಯ ಮಹಿಳೆಯರಿಗೆ ಕುಟುಂಬದ ವ್ಯವಸ್ಥೆಯನ್ನು ಮತ್ತು ಅದರ ದಬ್ಬಾಳಿಕೆಯ ಸ್ವರೂಪವನ್ನು ಪ್ರಶ್ನಿಸಲು ಅವಕಾಶ ಮಾಡಿಕೊಟ್ಟಿದೆ. ಮತ್ತೊಂದೆಡೆ, ಕುಟುಂಬವನ್ನು ಹೊಂದುವ ಹಕ್ಕನ್ನು ನಿರಾಕರಿಸಲ್ಪಟ್ಟ ಈ ಮಹಿಳೆಯರು, ವಿವಾಹವನ್ನು ಒಂದು ಪ್ರಮುಖ ಗುರಿಯಾಗಿ ನೋಡುತ್ತಾರೆ. ಈ ವ್ಯವಸ್ಥೆಯನ್ನು ತಮ್ಮ ಜೀವನದಲ್ಲಿ ಅಳವಡಿಸಿಕೊಳ್ಳಲು ನೋಡುತ್ತಿದ್ದಾರೆ. ಈ ಸಂದರ್ಭದಲ್ಲಿ ಕೇಳಲೇಬೇಕಾದ ಒಂದು ಪ್ರಮುಖ ಪ್ರಶ್ನೆ ಶಿಕ್ಷಣಕ್ಕೆ ಸಂಬಂಧಿಸಿದ್ದು. ಪ್ರಸ್ತುತ ಶಿಕ್ಷಣ ವ್ಯವಸ್ಥೆಯು ಯುವ ದಲಿತ ಮಹಿಳೆಯರನ್ನು ಸಕ್ರಿಯಗೊಳಿಸುತ್ತಿದೆಯೇ ಅಥವಾ ಮತ್ತಷ್ಟು ನಿಷ್ಕ್ರಿಯಗೊಳಿಸುತ್ತದೆಯೆ ಎಂಬುದಕ್ಕೆ ಹೌದು ಅಥವಾ ಇಲ್ಲ ಎಂಬ ಉತ್ತರವಲ್ಲ ಎಂಬುದು ಈ ನಿರೂಪಣೆಗಳಿಂದ ಸ್ಪಷ್ಟವಾಗಿದೆ. ಆದಾಗ್ಯೂ, ದಲಿತ ಮಹಿಳೆಯರ ಹಕ್ಕುಗಳನ್ನು ಖಾತರಿಗೊಳಿಸಬಹುದಾದ ಶಿಕ್ಷಣ ವ್ಯವಸ್ಥೆಗಾಗಿ ಪ್ರತಿಪಾದಿಸುವುದು ಮುಖ್ಯವಾಗಿದ್ದು, ಅದು ಅವರಿಗೊಂದು ದನಿಯನ್ನು (ಏಜೆನ್ಸಿ) ಸೃಷ್ಟಿಸಲು ಮತ್ತು ಲಿಂಗ ನ್ಯಾಯವನ್ನು ಅರಿತುಕೊಳ್ಳಲು ಸಹಾಯ ಮಾಡುತ್ತದೆ. ಸ್ನೇಹ, ಪ್ರೀತಿ, ಸಂಬಂಧಗಳು ಮತ್ತು ವಿವಾಹ ಕುರಿತಾಗಿ ಈಗ ವಿಮರ್ಶಾತ್ಮಕ ಮತ್ತು ಸಶಕ್ತ ಕಲ್ಪನೆಗಳ ತುರ್ತು ಅವಶ್ಯಕತೆಯಿದೆ. ಇದಲ್ಲದೆ, ಅಂಚಿನಲ್ಲಿರುವ ಭೌಗೋಳಿಕ ಪ್ರದೇಶಗಳಲ್ಲಿನ ಯುವ ದಲಿತ ಮಹಿಳೆಯರಿಗೆ ಆಪ್ತಸಮಾಲೋಚನೆ, ವೃತ್ತಿ ಮಾರ್ಗದರ್ಶನ ಮತ್ತು ಮಾಹಿತಿ ಹೊಂದುವ ತೀವ್ರ ಕೊರತೆಯನ್ನು ಪರಿಹರಿಸುವ ಅವಶ್ಯಕತೆಯಿದೆ.

### ವಿವಾಹದ ಸಂದರ್ಭದಲ್ಲಿ ಲಿಂಗಾಧಾರಿತ ತಾರತಮ್ಯದ ಅನುಭವ

ಮೊದಲೇ ಹೇಳಿದಂತೆ ದಲಿತ ಮಹಿಳೆಯರ ಪ್ರತಿಕ್ರಿಯೆಗಳು ಭಿನ್ನ ಭಿನ್ನ ನೆಲೆಗಳಲ್ಲಿ ಇವೆ. ದಲಿತ ಯುವತಿಯರ ಪ್ರಕಾರ ಅವರ ಬದುಕಿನಲ್ಲಿ ಜಾತಿಗಿಂತ ಲಿಂಗವು ನಿರ್ಣಾಯಕ ಪಾತ್ರ ವಹಿಸುತ್ತದೆ ಮತ್ತು

ಜಾತಿಯಲ್ಲ. ಅವರ ಜೀವನದ ಅನುಭವವು ಜಾತಿಗೆ ಸೀಮಿತವಾಗಿಲ್ಲ, ಅವರು ಕೇವಲ 'ದಲಿತರು' ಅಲ್ಲ, ಅವರು 'ಮಹಿಳೆಯರು' ಕೂಡ. ಈ ಪ್ರತಿಸ್ಪಂದಿಗಳು ಸಮಾಜದ ಕುರಿತ ತಮ್ಮ ಹತಾಶೆಯನ್ನು ಮತ್ತು ವಿವಾಹದ ಸುತ್ತಲಿನ ಲಿಂಗ ಸಂಕಥನವನ್ನು ಹಂಚಿಕೊಂಡರು. ಇವರ ಪ್ರಕಾರ, ಮಹಿಳೆಯರಿಗೆ ಬೇಗ ಮದುವೆಯಾಗಲು ಹೆಚ್ಚು ಒತ್ತಡ ಬರುತ್ತದೆ ಆದರೆ ಪುರುಷರಿಗೆ ಈ ರೀತಿಯ ಒತ್ತಡವು ಕಡಿಮೆ ಇದೆ. ಇದರಿಂದ ಮದುವೆ ಎನ್ನುವ ಸಂಸ್ಥೆಯು ಲಿಂಗಾಧಾರಿತವಾಗಿ ಅಸಮಾನವಾಗಿ ರೂಪಿಸಿರುವುದು ಸ್ಪಷ್ಟವಾಗಿತ್ತದೆ.

"ಮಹಿಳೆಯರಿಗೆ ಮದುವೆಯ ವಿಷಯದಲ್ಲಿ ಜಾತಿಗಿಂತ ಲಿಂಗವೇ ಹೆಚ್ಚಿನ ಪಾತ್ರ ವಹಿಸುತ್ತದೆ. 25 ವರ್ಷಗಳ ಒಳಗೆ ಮಹಿಳೆ ಮದುವೆಯಾಗದಿದ್ದಾಗ ನಮ್ಮ ಸುತ್ತಲಿನ ಪುರುಷರು ಮಹಿಳೆಯರಿಗೆ ಕಿರಿಕಿರಿಯನ್ನು ಉಂಟುಮಾಡುವಂತೆ ನೋಡುತ್ತಾರೆ. ಆದರೆ ಪುರುಷರ ವಿಷಯದಲ್ಲಿ ಅವರಿಗೆ ಈ ರೀತಿಯ ಒತ್ತಡವಿಲ್ಲ. ಅವರು 35 ವರ್ಷದವರಾಗಿದ್ದಾಗಲೂ ಮದುವೆ ಆಗದಿದ್ದರೆ ಯಾರೂ ಅವರನ್ನು ಪ್ರಶ್ನಿಸುವುದಿಲ್ಲ" – **ಸಹಾಯಕ ಪ್ರಾಧ್ಯಾಪಕಿ.**

"ಲಿಂಗವು ಮದುವೆಯಲ್ಲಿ ಪ್ರಮುಖ ಪಾತ್ರ ವಹಿಸಿದೆ. ಪುರುಷರು ಪ್ರೀತಿಸುವಾಗ ಅವರು ಸ್ವತಂತ್ರ ಮತ್ತು ಬುದ್ಧಿವಂತ ಮಹಿಳೆಯೊಂದಿಗೆ ಚೆನ್ನಾಗಿರುತ್ತಾರೆ. ಆದರೆ ಅವರು ಮದುವೆಯ ನಂತರ ತಾನು ಹೇಳಿದಂತೆ ಅವಲಂಬಿತ ಮಹಿಳೆಯನ್ನು ನಿರೀಕ್ಷಿಸುತ್ತಾರೆ." **–ವಿದ್ಯಾರ್ಥಿನಿ, ಸಮಾಜಶಾಸ್ತ್ರ**

"ನಾನು "ಮದುವೆ" ಯ ಬಗ್ಗೆ ಯೋಚಿಸುವಾಗ ಮದುವೆ ಮತ್ತು ಕುಟುಂಬದ ಸಾಂಸ್ಥಿಕ ಚೌಕಟ್ಟಿನ ಕೆಲಸದಲ್ಲಿ ಮಹಿಳೆಯರನ್ನು ಹೇಗೆ ಬಂಧಿಸಲಾಗುತ್ತದೆ ಎಂಬುದು ನೆನಪಾಗುತ್ತದೆ. ಮಹಿಳೆಯಾಗಿ ನನಗೆ ಮದುವೆಯ ವ್ಯವಸ್ಥೆಯಲ್ಲಿ ಪ್ರವೇಶಿಸುವುದು ಕಷ್ಟ. ಮದುವೆಯಾದರೆ ನಾವು ನಮ್ಮ ವ್ಯಕ್ತಿತ್ವವನ್ನು ತ್ಯಾಗ ಮಾಡಬೇಕು. ಯಾವಾಗ ಮಹಿಳೆ ಮದುವೆಯಾಗುವುದಿಲ್ಲ ಎಂದು ನಿರ್ಧಾರ ಮಾಡುತ್ತಾಳೋ ಸಮಾಜವು ಅವಳನ್ನು ಸಮುದಾಯದಿಂದ ಹೊರದಬ್ಬುತ್ತದೆ. ನಮ್ಮ ಜಾತಿಯಲ್ಲಿ ಒಂದು ಹುಡುಗಿ ಮದುವೆಯಾಗದಿದ್ದಾಗ, ಪೋಷಕರು ಸಂಬಂಧಿಕರಿಂದ ಒತ್ತಡವನ್ನು ಎದುರಿಸುತ್ತಾರೆ. ಸಂಬಂಧಿಕರು ಪ್ರಶ್ನೆಗಳನ್ನು ಕೇಳಲು ಪ್ರಾರಂಭಿಸುತ್ತಾರೆ. ನಿಮ್ಮ ಮಗಳು ಇನ್ನೂ ಯಾಕೆ ಮದುವೆಯಾಗಿಲ್ಲ? ಅವಳು ನಿಮ್ಮೊಂದಿಗೆ ಎಷ್ಟು ದಿನ ಇರುತ್ತಾಳೆ? ಎಂದು ಪ್ರಶ್ನಿಸುತ್ತಾರೆ. ಅವರು ನಮ್ಮನ್ನು ನೇರವಾಗಿ ದೂಷಿಸುವುದಿಲ್ಲ ಆದರೆ ಪೋಷಕರನ್ನು ದೂಷಿಸುತ್ತಾರೆ. ಪೋಷಕರು ಒತ್ತಡಕ್ಕೆ ಒಳಗಾಗುವುದರಿಂದ, ನಾವು ಮದುವೆಯಾಗಲು ಒಪ್ಪುತ್ತೇವೆ. ಮಹಿಳೆಯರು ಮದುವೆಯಾಗುವುದು ಕಡ್ಡಾಯವಲ್ಲ ಆದರೆ ಕೆಲವೊಮ್ಮೆ ನಾವು ವ್ಯವಸ್ಥೆಯ ಕಾರಣಕ್ಕೆ ಒತ್ತಾಯಿಸಲ್ಪಡುತ್ತೇವೆ". – **ಸ್ನಾತಕೋತ್ತರ ವಿದ್ಯಾರ್ಥಿನಿ**

## ವಿರೋಧಾಭಾಸಗಳು ಮತ್ತು ವೈವಿಧ್ಯ ಧ್ವನಿಗಳು

ಬೆಂಗಳೂರಿಂದ ಪ್ರತಿಕ್ರಿಯಿಸಿದವರಲ್ಲಿ ಮೂವರು ತಮ್ಮ ಕುಟುಂಬಗಳು ವಿವಾಹಕ್ಕಿಂತ ಮುಂಚೆ ಶಿಕ್ಷಣ ಮತ್ತು ಆರ್ಥಿಕ ಸ್ವಾತಂತ್ರ್ಯವನ್ನು ಪಡೆಯುವಂತೆ ಬಯಸಿದ್ದಾರೆ ಎಂದು ಹೇಳಿದ್ದಾರೆ. ಆರ್ಥಿಕ ಹಾಗು ಜಾತಿ ಸಮಸ್ಯೆಗಳಿಂದ ಅವರು ಎದುರಿಸಿದ ಸಂಕಟ ಹಾಗು ಅವಮಾನಗಳು ಅವರಿಗೆ ವಾಸ್ತವವನ್ನು ಅರ್ಥಮಾಡಿಸಿರುವುದರಿಂದ ಅವರ ಪೋಷಕರು ಯುವತಿಯರು ಉನ್ನತ ಶಿಕ್ಷಣವನ್ನು ಪಡೆಯಲು ಮತ್ತು ಆರ್ಥಿಕವಾಗಿ ಸ್ವತಂತ್ರವಾಗಿರಲು ಗಮನಹರಿಸಬೇಕೆಂದು ಒತ್ತಾಸೆಯಾಗಿದ್ದಾರೆ. ಮೇಲೆ ಉಲ್ಲೇಖಿಸಿದ ವಿದ್ಯಾರ್ಥಿನಿ ಮತ್ತು ಸಹಾಯಕ ಪ್ರಾಧ್ಯಾಪಕಿಯ ಪ್ರತಿಕ್ರಿಯೆಗಳು ದಲಿತ ಮಹಿಳೆಯರನ್ನು ಮದುವೆಗೆ ಒತ್ತಾಯಿಸಲಾಗುತ್ತದೆ ಎಂಬ ಸಾಂಪ್ರದಾಯಿಕವಾಗಿ ಅಂಗೀಕರಿಸಲ್ಪಟ್ಟ ಬಲಿಪಶು ನಿರೂಪಣೆಯನ್ನು ಈ ಪ್ರತಿಕ್ರಿಯೆಗಳ ಮೂಲಕ ಬಹಿರಂಗಪಡಿಸಲಾಗುತ್ತದೆ ಎಂಬ ವಾದವನ್ನು ದೃಢೀಕರಿಸುತ್ತದೆ. ಅದರೆ ವಾಸ್ತವವಾಗಿ ಈ ಪ್ರತಿಕ್ರಿಯೆಗಳು ದಲಿತ ಮಹಿಳೆಯರಿಗೆ ಶಿಕ್ಷಣವನ್ನು ಮುಂದುವರಿಸಲು ಮತ್ತು ಸ್ವತಂತ್ರರಾಗಲು ಪ್ರೋತ್ಸಾಹಿಸಲಾಗುತ್ತದೆ ಎಂದು ಹೇಳುತ್ತದೆ.

“ನನ್ನ ತಾಯಿ ನನ್ನನ್ನು ಮದುವೆಯಾಗುವಂತೆ ಒತ್ತಾಯಿಸಲಿಲ್ಲ. ನಾನು ಸ್ವತಂತ್ರವಾಗಿರಬೇಕು ಎಂದು ಅವಳು ಬಯಸುತ್ತಾಳೆ. ಒಬ್ಬ ಗಂಡಸು ನನ್ನನ್ನು ಸರಿಯಾಗಿ ನೋಡಿಕೊಳ್ಳುತ್ತಾನೆ ಎಂಬ ನಂಬಿಕೆ ಅವಳಿಗೆ ಇಲ್ಲ. ಹಾಗಾಗಿ, ನಾನು ವಿದ್ಯಾವಂತೆಯಾಗಿದ್ದರೆ ನಾನು ಸ್ವತಂತ್ರಳಾಗಿ ಕೆಲಸ ಮಾಡಬಹುದು ಎಂದು ಅವಳು ಭಾವಿಸುತ್ತಾಳೆ "– **ಸ್ನಾತಕೋತ್ತರ ವಿದ್ಯಾರ್ಥಿನಿ.**

"ನನ್ನ ತಂದೆ ಐಎಎಸ್ ಪರೀಕ್ಷೆಯನ್ನು ಪಾಸು ಮಾಡಲು ನನ್ನನ್ನು ಒತ್ತಾಯಿಸಿದಷ್ಟು, ಮದುವೆಗೆ ಒತ್ತಾಯಿಸಿಲ್ಲ" – **ಸಹಾಯಕ ಪ್ರಾಧ್ಯಾಪಕಿ**

## ಅಂತರ್ಜಾತಿ ವಿವಾಹ: ಆತಂಕಗಳು ಮತ್ತು ಪ್ರಶ್ನೆಗಳು

ಕೆಲವು ಮಹಿಳೆಯರು ಲಿಂಗ ಅನುಭವದ ಮೇಲೆ ತಮ್ಮ ಮಾತುಕತೆಯನ್ನು ಕೇಂದ್ರೀಕರಿಸಿದರೆ, ಕೆಲವು ದಲಿತ ಮಹಿಳೆಯರು ಉದಾರವಾದಿ ಸಂಗಾತಿ (ಜಾತಿ, ವರ್ಗ ಮತ್ತು ಲಿಂಗ ಸೂಕ್ಷ್ಮತೆ ಹೊಂದಿರುವ ಸಂಗಾತಿ) ಕುರಿತು ಮಾತಾನಾಡಿದ್ದಾರೆ. ಬೆಂಗಳೂರಿಗೆ ಸೇರಿದ ಐದು ಮಂದಿ ಈ ಕುರಿತು ಪ್ರತಿಕ್ರಿಯಿಸಿದ್ದು, ತಮಗೆ ಸೂಕ್ತ ಸಂಗಾತಿಯನ್ನು ಹುಡುಕಲು ಅಂತರ್ಜಾತಿ ವಿವಾಹದ ಪರಿಹಾರವೆಂದು ನಂಬಲು ಸಾಧ್ಯವಿಲ್ಲ ಎಂದು ಹೇಳಿದ್ದಾರೆ. ಯುವ ದಲಿತ ಮಹಿಳೆಯರ ಸಂದಿಗ್ಧತೆಯನ್ನು ತಿಳಿಸುವ ಯುವ ಪತ್ರಕರ್ತೆಯ ಪ್ರತಿಕ್ರಿಯೆ ಇಲ್ಲಿದೆ.

"ನನಗೆ ಮದುವೆಯ ಬಗ್ಗೆ ಸಕಾರಾತ್ಮಕ ಅಭಿಪ್ರಾಯವಿಲ್ಲ. ದಿನದಿಂದ ದಿನಕ್ಕೆ ಮದುವೆಯ ಮೇಲಿನ ನಂಬಿಕೆ ಕಡಿಮೆಯಾಗುತ್ತಿದೆ. ಉತ್ತಮ ಒಡನಾಟದ ಕನಸು ಕಾಣುವುದು ಕೂಡ ದಲಿತ ಮಹಿಳೆಯರಿಗೆ ಸಾಧ್ಯವಿಲ್ಲ. ನಾನು ಪ್ರೀತಿಸುತ್ತಿದ್ದೆ. ಆದರೆ ಜಾತಿಯ ಕಾರಣದಿಂದಾಗಿ ನಾನು ಪ್ರೀತಿಪಾತ್ರರೊಡನೆ ಸಂಬಂಧ ಮುಂದುವರೆಸಲು ಸಾಧ್ಯವಾಗಲಿಲ್ಲ. ಮದುವೆಯಾಗಬೇಕೆಂದರೆ ನಾವು ನಮ್ಮ ಐಡೆಂಟಿಟಿ ತ್ಯಜಿಸಬೇಕು ಇದನ್ನು ನಾನು ಬಯಸುವುದಿಲ್ಲ". – **ಯುವ ಪತ್ರಕರ್ತೆ, ದೊಡ್ಡಬಳ್ಳಾಪುರ**

ಇದೇ ರೀತಿಯ ಆಲೋಚನೆಗಳನ್ನು ಹಂಚಿಕೊಂಡ ಇನ್ನೊಬ್ಬ ಪತ್ರಕರ್ತೆ, "ನನ್ನ ಜಾತಿಯ ಒಬ್ಬ ವ್ಯಕ್ತಿಯನ್ನು ಮದುವೆಯಾಗಲು ನಾನು ಬಯಸುವುದಿಲ್ಲ. ಅವರು ಮಹಿಳೆಯನ್ನು ಸಂಬಳ ಕೊಡುವ ಮತ್ತು ಅಗತ್ಯವಿಲ್ಲದ ಮನೆಕೆಲಸದವಳು ಎಂದು ಪರಿಗಣಿಸಿದ್ದಾರೆ". – **ಯುವ ಪತ್ರಕರ್ತೆ, ನೆಲಮಂಗಲದ**.

"ಅಂತರ್ಜಾತಿ ವಿವಾಹದ ಪರಿಕಲ್ಪನೆಯು ಕಾಗದಗಳಲ್ಲಿ ಸುಂದರವಾಗಿರುತ್ತದೆ. ನಿಜ ಜೀವನದಲ್ಲಿ ಅದು ಹೇಗೆ ಕಾರ್ಯನಿರ್ವಹಿಸುತ್ತದೆ ಎಂದು ನನಗೆ ತಿಳಿದಿಲ್ಲ. ಕೆಲವರಿಗೆ ಇದು ಭಯಾನಕವಾಗಿದೆ ಆದರೆ ಕೆಲವು ಬದಲಾವಣೆಯ ಸಾಧ್ಯತೆಗಳೂ ಇವೆ" – **ಶಿಕ್ಷಕಿ**

ಹೆಚ್ಚಾಗಿ ದಲಿತ ಮಹಿಳೆಯರು ಅಂತರ್ಜಾತಿ ವಿವಾಹವನ್ನು ನಂಬುವುದಿಲ್ಲ ಎಂದು ಹೇಳಿದ್ದಾರೆ. ಜಾತಿ ಶ್ರೇಣಿಯನ್ನು ಮುರಿಯಲು ಒಂದು ಆಯ್ಕೆಯಾಗಿ ಅಂತರ್ಜಾತಿಯ ಬಗ್ಗೆ ಆಳವಾದ ನಂಬಿಕೆಯನ್ನು ಡಾ. ಬಿ. ಆರ್. ಅಂಬೇಡ್ಕರ್ ಪ್ರಸ್ತಾಪಿಸಿದರು. ಅದರೆ ಗ್ರಾಮೀಣ ಮತ್ತು ನಗರ ಬೆಂಗಳೂರಿನ ಪ್ರತಿಸ್ಪಂದಕರು ಅಂತರ್ಜಾತಿ ವಿವಾಹವನ್ನು ಜಾತಿ ಶ್ರೇಣಿಯನ್ನು ಒಡೆಯುವ ಬಗ್ಗೆ ತಮ್ಮ ಅನುಮಾನಗಳನ್ನು ವ್ಯಕ್ತಪಡಿಸುತ್ತಾರೆ. ಅವರು (ಗಂಡಸರು) ತುಲನಾತ್ಮಕವಾಗಿ ಪ್ರಬಲ ಜಾತಿಗೆ ಸೇರಿದವರಾಗಿದ್ದರೆ ಅತ್ತೆ-ಮಾವ ಕುಟುಂಬದಿಂದ ಕೆಟ್ಟದಾಗಿ ವರ್ತಿಸಲ್ಪಡುವ ಭಯವನ್ನು ಅವರು ವ್ಯಕ್ತಪಡಿಸುತ್ತಾರೆ. ಅವರ ಅನುಮಾನದ ಹೊರತಾಗಿ, ದಲಿತರು ಭಿನ್ನ ಜಾತಿಯ ವ್ಯಕ್ತಿಯನ್ನು ಮದುವೆಯಾಗುವುದರಿಂದ ಅವರು ತಮ್ಮ ಐಡೆಂಟಿಟಿಯು ಬಿಕ್ಕಟ್ಟಿಗೆ ಸಿಲುಕುತ್ತದೆ ಎಂದು ಹಂಚಿಕೊಳ್ಳುತ್ತಾರೆ. ಮರ್ಯಾದಾ ಹತ್ಯೆಗಳ ಕುರಿತು ಸಾಹಿತ್ಯ, ಕಥೆಗಳು ಮತ್ತು ಸುದ್ದಿಗಳಿದ್ದರೂ ಜನರು ಅಂತರ್ಜಾತಿ ವಿವಾಹವಾದಾಗ ಅವರ ದೈನಂದಿನ ಹೋರಾಟದ ಸುತ್ತ ಒಂದು ಸೀಮಿತ ಸಾಹಿತ್ಯ ಲಭ್ಯವಿದೆ. ದೈನಂದಿನ ಹೋರಾಟ, ಭಾವನಾತ್ಮಕ ಮತ್ತು ಮಾನಸಿಕ ಯಾತನೆ ಮರ್ಯಾದಾ ಹತ್ಯೆಯಷ್ಟೇ ಭಯಾನಕವಾಗಿದೆ. ಈ ಸಂಶೋಧನೆಯಲ್ಲಿ ಮಾತಾನಾಡಿದವರು ಇದುವರೆಗೂ ಯಾರು ಹೆಚ್ಚಾಗಿ ಮಾತಾನಾಡದ ವಿಷಯವನ್ನು ಪ್ರಸ್ತಾಪಿಸಿ ಒಂದು ಒಳ ನೋಟವನ್ನು ನೀಡಿದ್ದಾರೆ.

“ಮದುವೆಗೆ ಮುಂಚೆ ಮದುವೆ ಬಗ್ಗೆ, ಗಂಡನ ಬಗ್ಗೆ ತುಂಬಾ ಕನಸುಗಳಿದ್ದವು. ನಾನು ಮದುವೆಯಾಗುವ ಹುಡುಗ ನನ್ನನ್ನು ಚೆನ್ನಾಗಿ ನೋಡಿಕೊಳ್ಳಬೇಕು ಅಂತ. ಆದರೆ ಆಯ್ಕೆಯ ವಿಷಯಕ್ಕೆ ಬಂದಾಗ ನಾನು ಅಲ್ಲಿರಲಿಲ್ಲ. ನನ್ನ ಪರವಾಗಿ ನನ್ನ ಕುಟುಂಬ ನಿರ್ಧರಿಸಿಯಾಗಿತ್ತು. ಮದುವೆಯ ನಂತರವೇ ಹುಡುಗನ ಮುಖ ನೋಡಿದ್ದು. ಹೊಸಮನೆ, ಹೊಸ ಜನ, ಕೆಲಸ, ಮದುವೆಯ ಬಗೆಗಿದ್ದ ನನ್ನೆಲ್ಲಾ ಕನಸುಗಳನ್ನು ನುಚ್ಚುನೂರಗಿಸಿದ್ದವು. ನನಗೆ ಇಬ್ಬರು ಮಕ್ಕಳು ಈಗ ಮನೆಯಲ್ಲಿನ ದೊಡ್ಡ ಯಂತ್ರ ನಾನೆ”. ಪಿತೃಪ್ರದಾನ ವ್ಯವಸ್ಥೆಯಲ್ಲಿ ಕೌಟುಂಬಿಕ ವ್ಯವಸ್ಥೆ, ಯಜಮಾನಿಕೆ, ಪಿತೃಪ್ರದಾನ ಮೌಲ್ಯಗಳು ದಲಿತ ಕುಟುಂಬಗಳಲ್ಲಿಯೂ ಕೂಡ ನುಸುಳಿವೆ. ಇದು ಮಹಿಳೆಯರನ್ನು ದ್ವಿತೀಯ ಪ್ರಜೆಗಳ ಹಾಗೆ ನೋಡುತ್ತಿವೆ. ಮದುವೆಯಾಗದಿರುವ ಯುವತಿಯರು ಕೋಲಾರದ ಕೆಲವು ಪ್ರಗತಿಪರ ಸಂಘ ಸಂಸ್ಥೆ ಸಂಘಟನೆಗಳ ಸಂಪರ್ಕಕ್ಕೆ ಬಂದ ನಂತರ ಮದುವೆ ಮತ್ತು ಸಂಗಾತಿಯ ಆಯ್ಕೆಯ ಬಗ್ಗೆ ಯೋಚಿಸುತ್ತಿದ್ದಾರೆ.

“ನನ್ನ ಕಲೆಯನ್ನೂ ಗೌರವಿಸಬೇಕು. ನನಗೆ ನಾರ್ಮಲ್ ಹುಡುಗಿಯಾಗಿ ಎಲ್ಲರ ತರಹ ಮಕ್ಕಳು ಮಾಡ್‌ಕೊಂಡು ಹೋಗೋದು ನನಗೆ ಇಷ್ಟ ಇಲ್ಲ. ಒಂಥರಾ ಡಿಫರೆಂಟ್ ಆಗಿ ಇರಬೇಕು. ಅಂತಾ ವ್ಯಕ್ತಿತ್ವ ಸಿಕ್ಕಿದರೆ ಯಾವ ಜಾತಿ ಆದರೂ ಪರವಾಗಿಲ್ಲ. ನಾನು ಅದನ್ನು ಎದುರಿಸ್ತಿನಿ ಅನ್ನಿಸುತ್ತೆ. ಅಮ್ಮ ಬೇರೆ ಕ್ಯಾಸ್ಟ್ ಮಾಡಿಕೊಳ್ಳಬಾರದು ಅಂತಾರೆ. ಒಂದೊದು ಸರ್ತಿ ಭಯ ಆಗುತ್ತೆ. ಆದರೆ ಇತ್ತಿಚೆಗೆ ಅಂತರ್ಜಾತಿ ವಿವಾಹಗಳನ್ನು ನೋಡಿ ಅಮ್ಮ ನೋಡಿದವರನ್ನೇ ಮಾಡಿಕೊಳ್ಳೋದು ಒಳ್ಳೆಯದು ಅನ್ನಿಸುತ್ತೆ. ನನ್ನ ಗೆಳತಿಯರು ನಮ್ಮ ಜಾತಿಯವರನ್ನೆ ಮದುವೆ ಆಗು ಯಾಕೆ ರಿಸ್ಕ್ ತಗೊಳ್ತೀಯ ಅಂತಾರೆ”. ಹೀಗೆ ಅಂತರ್ಜಾತಿ ವಿವಾಹ ಮತ್ತು ಮದುವೆಯ ಬಗ್ಗೆ ತಮ್ಮ ಅನುಭವಗಳನ್ನು ಹಂಚಿಕೊಂಡಿದ್ದಾರೆ.

### ಮದುವೆಗೆ ಮುನ್ನ ಮತ್ತು ಮದುವೆಯೊಳಗಿನ ರಾಜಿಗಳು

ಕೆಲವು ಬಾರಿ, ದಲಿತ ಮಹಿಳೆಯರು ಉನ್ನತ ಶಿಕ್ಷಣಕ್ಕೆ ಪ್ರವೇಶ ಪಡೆಯುವುದು, ಮದುವೆಯನ್ನು ಮುಂದೂಡುವುದಕ್ಕೆ ಕಾರಣವಾಗಿರುತ್ತದೆ. ಉನ್ನತ ಶಿಕ್ಷಣ ಮತ್ತು ವಿವಾಹದ ನಡುವೆ ನೇರ ಸಂಬಂಧವಿದೆ. ಉನ್ನತ ಶಿಕ್ಷಣವು ಮಹಿಳೆಯರಿಗೆ ತಮ್ಮ ಮದುವೆಯ ಬಗ್ಗೆ ನಿರ್ಧರಿಸಲು ಗುರಾಣಿಯಾಗಿ ಕಾರ್ಯನಿರ್ವಹಿಸುತ್ತದೆ. ಪ್ರತಿಕ್ರಿಯಿಸಿದವರಲ್ಲಿ ಒಬ್ಬರು ಹೀಗೆ ಹೇಳಿದರು:

“ಜನರು ಮದುವೆಯ ಬಗ್ಗೆ ಮಾತನಾಡುವಾಗ ನಾನು ಕುಟುಂಬದಿಂದ ಹೊರಗುಳಿಯಲು ಬಯಸುತ್ತೇನೆ. ಕುಟುಂಬದವರು ನನ್ನನ್ನು ಈ ವರೆಗೆ ಒತ್ತಾಯಿಸಿಲ್ಲ. ಮದುವೆಯ ಬಗ್ಗೆ ಮಾತನಾಡಿದರೂ ಭಯವಾಗುತ್ತೆ.

ಸದ್ಯಕ್ಕೆ ಪಿಹೆಚ್‌ಡಿ ಆದ ನಂತರ ವಿವಾಹವಾಗುತ್ತೇನೆಂದೆ ನನ್ನ ತಂದೆ ತಾಯಿಗೆ ಹೇಳಿದ್ದೇನೆ. ಪಿಹೆಚ್‌ಡಿ ಅನ್ನೋದು ಮದುವೆ ಮುಂದೂಡಲು ಕೇವಲ ಒಂದು ಕಾರಣವಷ್ಟೇ " – **ಸಹ ಪ್ರಾಧ್ಯಾಪಕಿ.**

ಕೆಎಸ್ ಗಾರ್ಡನ್ (ಬೆಂಗಳೂರಿನ ಕೊಳೆಗೇರಿ)ನ ಇನ್ನೊಬ್ಬ ಯುವತಿ ಹೇಳುವಂತೆ "ಒಳ್ಳೆಯ ವಿದ್ಯಾವಂತೆಯಾಗಿದ್ದರೆ, ವಿದ್ಯಾವಂತ ವ್ಯಕ್ತಿಯನ್ನು ಮದುವೆಯಾಗಲು ಸಾಧ್ಯವಾಗುತ್ತಿತ್ತು". ಅವರು ಶಾಲೆಯನ್ನು ಮಧ್ಯದಲ್ಲೇ ಬಿಟ್ಟಿರುವುದರಿಂದ ಆಕೆ ಬಯಸಿದಂತೆ ವಿದ್ಯಾವಂತ ವ್ಯಕ್ತಿಯನ್ನು ಆಕೆಯ ಕುಟುಂಬವು ಹುಡುಕಲಿಲ್ಲ ಅವರ ಪ್ರಕಾರ, ಶಿಕ್ಷಣವು ಮದುವೆಯ ರೀತಿಯನ್ನು, ಮದುವೆಯಾಗುವ, ಮದುವೆಯಾಗದಿರುವ ನಿರ್ಧಾರವನ್ನು ಪ್ರಭಾವಿಸುವುದು ಅವರ ಅರಿವಿಗೆ ಬಂದಿದೆ. ಜೊತೆಗೆ ಮದುವೆಯ ಕುರಿತ ಮಾತುಕತೆ ಯುವತಿಯ ಮಾನಸಿಕ ಆರೋಗ್ಯದ ಮೇಲೆ ಪರಿಣಾಮ ಬೀರುತ್ತಿದೆ.

"ಮದುವೆ ಮಾಡಿಕೊಂಡಿರುವುದು ಅಪ್ಪನ ಒತ್ತಾಯದಿಂದಲೇ. ಮದುವೆ ಮಾಡಿಕೊಳ್ಳುವಾಗ ಜಾತಿಯ ಹುಡುಗನನ್ನೆ ನೋಡುವುದು. ಅದ್ರಲ್ಲೂ ಸಂಬಂಧಿಕರನ್ನೆ ನೋಡಿ ಮಾಡುವುದು. 20 ವಯಸ್ಸು ದಾಟಿತ್ತಿದ್ದಂತೆಯೆ ಅವರು ಎಷ್ಟೇ ಓದುತ್ತಿದ್ದರೂ ಓದನ್ನು ಮೊಟಕುಗೊಳಿಸಿ ಒಪ್ಪದಿದ್ದರೆ ಬಲವಂತವಾಗಿ ಮದುವೆ ಮಾಡುವುದು. ನನಗೆ ಸ್ವಂತ ಮಾವನನ್ನು ಮಾಡಿಕೊಳ್ಳಲು ಇಷ್ಟ ಇಲ್ಲವೆಂದು ಎಷ್ಟು ಬೇಡಿಕೊಂಡರೂ ಕೇಳದೆ ಒಡೆದು ಬಡಿದು ಮದುವೆ ಮಾಡಿದರು ಅವನು ಪಕ್ಕದಲ್ಲಿದ್ರೆ ವಾಂತಿ ಬರುವ ಹಾಗೆ ಆಗುತ್ತಿತ್ತು. ಅವನ ಜೊತೆಯಲ್ಲಿ ಮಲಗುವುದಿಲ್ಲವೆಂದು ಪಂಚಾಯಿತಿ ಮಾಡಿದರು. ಹೇಗೋ ಅನುಸರಿಸಿಕೊಂಡು ಹೋಗಿಬಿಡಬೇಕೆಂಬ ನಿರ್ಧಾರ ಮಾಡಿದೆ. ಒಂದು ಮಗುವಾಯಿತು. ಆದರೆ ಒಂದು ದಿನವೂ ನನ್ನ ಮಗಳು, ಹೆಂಡತಿ ಎಂದು ಕಾಳಜಿ ಮಾಡಲಿಲ್ಲ. ನನಗೆ ತುಂಬ ಆರೋಗ್ಯ ಸಮಸ್ಯೆಯಾದಾಗ ಬರಲಿಲ್ಲ. ಬದಲಿಗೆ ನಾನು ಅವನ ಪಾಲಿಗೆ ಸತ್ತು ಹೋಗಿದ್ದೇನೆಂದು ಊರಲೆಲ್ಲಾ ಹೇಳಿದ. ಅವತ್ತಿಗೆ ಆ ಸಂಬಂಧಕ್ಕೆ ವಿದಾಯ ಹೇಳಿದೆ. ಇಲ್ಲಿಯತನಕ ಮಾತನಾಡಿಸಿಲ್ಲ. ಮದುವೆ ನನ್ನೆಲ್ಲಾ ಕನಸುಗಳನ್ನು ನುಚ್ಚುನೂರು ಮಾಡಿತು".

### ಅಧೀನತೆ: ತಂದೆಯಿಂದ ಗಂಡನಿಗೆ ನಿಯಂತ್ರಣದ ಬದಲಾವಣೆ

ಮಹಿಳೆಯರು ತಂದೆಗೆ ಅಧೀನತೆಯಿಂದ ಗಂಡನಿಗೆ ಅಧೀನರಾಗಲು ಹೋಗುತ್ತಿದ್ದಾರೆ ಎಂದು ಭಾವಿಸಿದ ನಿದರ್ಶನಗಳನ್ನು ಮಹಿಳೆಯರು ವಿವರಿಸಿದರು. ದಲಿತ ಮಹಿಳೆಯರ ಶಿಕ್ಷಣ ಮತ್ತು ಸ್ಥಿರವಾದ ಆದಾಯವನ್ನು ಗಳಿಸುವ ಅವರ ಸಾಮರ್ಥ್ಯವು ಗಂಡನ ಕುಟುಂಬವು ಆದಾಯವನ್ನುಗಳಿಸುವ ದೃಷ್ಟಿಯಿಂದ ನೋಡುವಂತೆ ಮಾಡಿದೆ.

ಶಿಕ್ಷಿತ ಯುವತಿಯರಿಗೆ ಬಹಳ ಬೇಡಿಕೆಯಿದೆ. ಅದು ಹೆಚ್ಚು ಓದದೇ ಪಿಯುಸಿ ಟೀಚರ್ಸ್ ಟ್ರೈನಿಂಗ್, ಮಾಡಿಕೊಂಡಿರುವ ಹುಡುಗಿಯರಿಗೆ ಬೇಡಿಕೆ ಜಾಸ್ತಿ. ನೀನು ಏನಾದರೂ ಓದು ಮದುವೆ ಮಾಡಿಕೊಂಡು ಅವರ ಮನೆಯಿಂದಲೆ ಓದು ಎಂದು ಕೈ ಚೆಲ್ಲುತ್ತಾರೆ. ನಾನು ಓದಿದ್ದು ಮದುವೆಯ ನಂತರವೆ ಅದು ನನ್ನ ಗಂಡನ ಮನೆಯವರೆ ಓದಿಸಿದ್ದು ಎನ್ನುವವರು ಇದ್ದಾರೆ. ಇನ್ನೂ ನಮ್ಮ ಒಬ್ಬ ಪ್ರತಿಸ್ಪಂದಕಿ ಹೇಳುವಂತೆ "ನನ್ನ ಮದುವೆ ಮಾಡಿಕೊಂಡಿದ್ದೆ ನಾನು ಓದಿದ್ದೇನೆ ಎನ್ನುವ ಕಾರಣಕ್ಕೆ ನನಗೆ ಯಾವುದಾದರೂ ಕೆಲಸ ಸಿಗಬಹುದು ಎನ್ನುವ ಕಾರಣಕ್ಕೆ. ಆದರೆ ಕೆಲಸ ಸಿಗಲಿಲ್ಲ. ಆ ಕಾರಣಕ್ಕೆ ಮನೆಯಲ್ಲಿ ಕಿರುಕುಳಗಳು ಶುರುವಾದವು".

ಶಿಕ್ಷಣದ ಅವಕಾಶ ಪಡೆದಿರುವ ದಲಿತ ಯುವತಿಯರಿಗೆ ಕುಟುಂಬದ ನಿರ್ವಹಣೆಗೆ ಸಹಕಾರವಾಗಬಹುದು ಎಂಬ ಕಾರಣಕ್ಕೆ ಮದುವೆಯ ನಂತರ ಗಂಡ, ಮಾವನ ಸಹಕಾರದಿಂದ ಬಿ.ಎಡ್, ಡಿ.ಎಡ್ ಮಾಡಿಕೊಂಡಿದ್ದಾರೆ. "ಪಿಯುಸಿ ಮುಗಿದ ನಂತರ ಮದುವೆ ಮಾಡಿಕೊಟ್ಟರು ನಾನು ಚೆನ್ನಾಗಿ ಓದುತ್ತಿದೆ ಆದ್ದರಿಂದ ಗಂಡ ಮುಂದೆ ಓದಲು ಹೇಳಿದರು. ಮುಂದೆ ಟೀಚರ್ ಆದರೆ ಮನೆ ಮಕ್ಕಳಿಗೆ ಸಹಾಯವಾಗುತ್ತದೆ". ತಂದೆಯ ಅಧೀನತೆಯಿಂದ ಗಂಡನ ಅಧೀನತೆಗೆ ಒಳಪಡುವುದು. ಮಹಿಳೆಯರನ್ನು ಆರ್ಥಿಕ ಉತ್ಪಾದನ ಸಲಕರಣೆ, ಸಾಧನಗಳ ಹಾಗೆ ನೋಡುವುದು ಸಾಮಾನ್ಯವಾಗಿದೆ.

# ಅಧ್ಯಾಯ 4

## ಉಪಸಂಹಾರ

ನಾವು ಕರ್ನಾಟಕದಲ್ಲಿರುವ ದಲಿತ ಯುವತಿಯರ ಅನುಭವಗಳನ್ನು ಪ್ರತ್ಯೇಕ ನೋಟಗಳಿಂದ ಅವಲೋಕಿಸಬೇಕಿರುವ ಅಗತ್ಯತೆಯನ್ನು ಪ್ರತಿಪಾದಿಸುತ್ತಾ ಈ ಅಧ್ಯಯನ ಆರಂಭಿಸಿದೆವು. ದಲಿತ ಯುವತಿಯರ ಶೈಕ್ಷಣಿಕ ಅವಕಾಶ, ಅವರ ಆಯ್ಕೆಯ ವೃತ್ತಿ, ಮದುವೆಗೆ ಸಂಬಂಧಪಟ್ಟ ಅವರ ನಿರ್ಧಾರಗಳು ಮತ್ತು ಅವರ ಕನಸು ಮತ್ತು ಆಕಾಂಕ್ಷೆಗಳನ್ನು ಪ್ರಭಾವಿಸುವ ವಿವಿಧ ಅಂಶಗಳನ್ನು ಈ ಅಧ್ಯಯನ ವಿಶ್ಲೇಷಿಸಿದೆ. ದಲಿತ ಯುವತಿಯರ ಅಸ್ಮಿತೆ, ಘನತೆ, ಅವರು ಪಡೆಯುವ ಸಾಮಾಜಿಕ ಗೌರವ, ಅವರ ಆರೋಗ್ಯದ ಕುರಿತ ಪ್ರಶ್ನೆಗಳನ್ನು ಶೋಧಿಸಿದ್ದೇವೆ. ದಲಿತ ಸಮುದಾಯದಲ್ಲಿನ ನಿರ್ದಿಷ್ಟ ಜಾತಿ, ಉಪಜಾತಿಗಳ ಸ್ಥಿತಿಗತಿಗಳು ಈ ಎಲ್ಲಾ ಆಯಾಮಗಳ ಮೇಲೆ ಹೇಗೆ ಪ್ರಭಾವ ಬೀರುತ್ತವೆ ಎನ್ನುವ ಅಂಶಕ್ಕೆ ಈ ಅಧ್ಯಯನವು ಹೆಚ್ಚಿನ ಗಮನ ನೀಡಿದೆ. ಮುಂದುವರಿದು ಈ ಅಧ್ಯಯನ, ಮಹಿಳೆಯರ ಉದ್ಯೋಗ, ಆದಾಯ, ಆಸ್ತಿ ಮತ್ತು ಅವರ ಆರ್ಥಿಕ

ಹಿನ್ನೆಲೆ ಮತ್ತು ಅವರ ಭಾವನಾತ್ಮಕ, ಆರ್ಥಿಕ, ಸಾಮಾಜಿಕ ಯೋಗಕ್ಷೇಮದ ನಡುವಿನ ಸಂಬಂಧವನ್ನು ಅರ್ಥೈಸಿಕೊಳ್ಳಲು ಯತ್ನಿಸಿದೆ.

ಲಿಂಗ ಮತ್ತು ಜಾತಿ ಆಧಾರಿತ ತಾರತಮ್ಯದಿಂದ ಹಿಡಿದು ಉದ್ಯೋಗದ ಸ್ಥಳದಲ್ಲಿನ ಕಿರುಕುಳ ಮತ್ತು ವಿವಿಧ ಸಾಮಾಜಿಕ–ರಾಜಕೀಯ ಸವಾಲುಗಳು ದಲಿತ ಯುವತಿಯರ ಮಾನಸಿಕ ಆರೋಗ್ಯದ ಮೇಲೆ ಬೀರುವ ಪರಿಣಾಮದ ತನಕ ಈ ಅಧ್ಯಯನವು ಹಲವು ವಿಚಾರಗಳ ಮೇಲೆ ಬೆಳಕು ಚೆಲ್ಲಿದೆ.

## ಅಧ್ಯಯನದ ಕೆಲವು ಶಿಫಾರಸುಗಳು

- ✓ ಉನ್ನತ ಶಿಕ್ಷಣ ಮತ್ತು ಉದ್ಯೋಗದಲ್ಲಿ ಮೀಸಲಾತಿಯನ್ನು ಕಟ್ಟುನಿಟ್ಟಾಗಿ ಜಾರಿಗೊಳಿಸುವುದರ ಜೊತೆಗೆ ಸರ್ಕಾರವು, ದಲಿತ ಯುವತಿಯರಿಗೆ ಸುಸ್ಥಿರ ವೃತ್ತಿ ಮಾರ್ಗ ಆಯ್ದುಕೊಳ್ಳಲು ಸಹಾಯಕವಾಗುವಂತಹ ಔಪಚಾರಿಕ ವೃತ್ತಿ ಮಾರ್ಗದರ್ಶನ ವ್ಯವಸ್ಥೆ ಆರಂಭಿಸಬೇಕು.
- ✓ ಯುವತಿಯರಿಗಾಗಿ ಸಮಾಜ ಕಲ್ಯಾಣ ವಸತಿನಿಲಯ ವ್ಯವಸ್ಥೆಯನ್ನು ಬಲಪಡಿಸಬೇಕು.
- ✓ ವಿಶೇಷವಾಗಿ ಶೋಷಿತ ಜಾತಿಗಳ ಯುವತಿಯರ ಮಾನಸಿಕ–ಸಾಮಾಜಿಕ, ಭಾವನಾತ್ಮಕ ಅಗತ್ಯದ ಬಗ್ಗೆ ಗಮನ ಹರಿಸಲು ಪಟ್ಟಣ, ಅರೆ ಪಟ್ಟಣ ಮತ್ತು ಗ್ರಾಮೀಣ ಪ್ರದೇಶಗಳಲ್ಲಿ ವ್ಯವಸ್ಥಿತ ಆಪ್ತ ಸಮಾಲೋಚನೆ ಆರಂಭಿಸಬೇಕು.
- ✓ ದಲಿತ ಯುವತಿಯರಿಗೆ ತಮ್ಮ ಸ್ನೇಹ, ಸಂಬಂಧ, ಪ್ರಣಯ, ಮದುವೆ ಮತ್ತು ಲೈಂಗಿಕತೆ ಕುರಿತ ಕಲ್ಪನೆಗಳನ್ನು ಸಶಕ್ತಗೊಳಿಸಿಕೊಳ್ಳಲು ಸಹಾಯಕವಾಗುವಂತೆ ಶಿಕ್ಷಣ ಮತ್ತು ಆಪ್ತ ಸಮಾಲೋಚನೆಯನ್ನು ಸಮಗ್ರವಾಗಿ ವಿನ್ಯಾಸಗೊಳಿಸಬೇಕು.

ಇವು ವಾಸ್ತವಿಕ ಅಗತ್ಯಗಳನ್ನು ಪೂರೈಸಲು ಇರುವ ಕೆಲವು ದಾರಿಗಳು. ಈ ಅಧ್ಯಯನದಲ್ಲಿ ಭಾಗವಹಿಸಿದವರ ಜೀವನವನ್ನು ಸುತ್ತುವರಿದಿರುವ ಸೂಕ್ಷ್ಮ ಡೈನಾಮಿಕ್ಸ್‌ಗಳಿಗೆ ಗಮನ ನೀಡಿದೆ. ಬೇರೆ ಬೇರೆ ಉಪಜಾತಿಗಳ, ವಿವಿಧ ಪ್ರದೇಶಗಳ ಮತ್ತು ವಿವಿಧ ಹಂತದ ಶಿಕ್ಷಣ ಪಡೆದ ದಲಿತ ಯುವತಿಯರಲ್ಲಿನ ವೈವಿಧ್ಯಮಯ ಅನುಭವಗಳು ಮತ್ತು ಪ್ರತಿಯೊಬ್ಬ ಯುವತಿ ತನ್ನ ಕನಸು–ನನಸು ಮಾಡಿಕೊಳ್ಳಲು ತನ್ನ ಸುತ್ತಲಿನ ವ್ಯವಸ್ಥೆಯೊಂದಿಗೆ ಹೇಗೆ ವ್ಯವಹರಿಸುತ್ತಾಳೆ ಎನ್ನುವ ಅಂಶಗಳತ್ತ ನಾವು ಒತ್ತು ನೀಡಿದ್ದೇವೆ. ಹಲವು ಉದಾಹರಣೆಗಳಲ್ಲಿ ದಲಿತ ಸಮುದಾಯಗಳು ಶಿಕ್ಷಣ ಮತ್ತು ಯುವತಿಯರ ಸಬಲೀಕರಣಕ್ಕೆ ನೀಡುವ ಮಹತ್ವ

ಪೋಷಕರ ಬೆಂಬಲಕ್ಕೆ ಅಡಿಪಾಯ ರೂಪಿಸುತ್ತೆ. ಮಹಿಳೆಯರು, ತಮ್ಮನ್ನು ನಿಷೇಧಿಸಿದ್ದ ಕ್ಷೇತ್ರಗಳಿಗೆ ಪ್ರವೇಶ ಗಿಟ್ಟಿಸಿಕೊಂಡಿದ್ದಾರೆ.

ಈ ಅಧ್ಯಯನವು, ರಾಜಕೀಯ ಸಂಘಟನೆಗಳಲ್ಲಿರುವ, ಎನ್‌ಜಿಓಗಳ ಜೊತೆ ನಂಟು ಹೊಂದಿರುವ, ಜಾತಿ ಪದ್ಧತಿ ವಿರುದ್ಧ ಗಟ್ಟಿ ನಿಲುವು ಹೊಂದಿರುವ, ಶೋಷಿತ ಸಮುದಾಯಗಳ ಹಿತಾಸಕ್ತಿಗೆ ಬದ್ಧವಾಗಿರುವ ಮಹಿಳೆಯರನ್ನು ತಲುಪಿದೆ. ಈ ಸಂಗತಿಗಳು ಪ್ರತಿಕ್ರಿಯೆ ನೀಡಿದ ಹಲವು ಮಹಿಳೆಯರಿಗೆ ಶಿಕ್ಷಣ ಮತ್ತು ಉದ್ಯೋಗ ತಮ್ಮ ಹಕ್ಕು ಎಂದು ಭಾವಿಸಲು ಶಕ್ತಿ ತುಂಬಿದೆ. ಈ ಮಹಿಳೆಯರು ತಾವು ಬಹುವಾಗಿ ಇಷ್ಟಪಡುವ ಉದ್ಯೋಗವನ್ನು ಪಡೆದುಕೊಳ್ಳುವ ತಮ್ಮ ಕನಸಿನ ಕುರಿತು ಮತ್ತು ಆ ಕನಸುಗಳಿಗೆ ನೀರೆರೆಯುವ ಜೊತೆಗಾರನನ್ನು ಆರಿಸಿಕೊಳ್ಳುವುದರ ಜೊತೆಗೆ ತಾವು ಆರ್ಥಿಕವಾಗಿ ಸ್ವತಂತ್ರರಾಗುವ ಕನಸಿನ ಬಗ್ಗೆ ಸ್ಪಷ್ಟವಾಗಿ ಹೇಳಿದ್ದಾರೆ. ಅದಾಗ್ಯೂ ಹಲವು ಮಹಿಳೆಯರು, ಸ್ತ್ರೀಯರಿಗೆಂದೆ ಮೀಸಲಿಟ್ಟಂತಿರುವ ಬೋಧನೆ, ಶುಶ್ರೂಷೆಯಂತಹ ಉದ್ಯೋಗಗಳಿಗೆ ತಳ್ಳಲ್ಪಟ್ಟಿದ್ದಾರೆ. ಕೆಲವರು ಹೊಲಿಗೆಯಂತಹ ವೃತ್ತಿಪರ ತರಬೇತಿಯನ್ನೂ ಪಡೆದಿದ್ದಾರೆ.

ದೇವದಾಸಿ ವ್ಯವಸ್ಥೆಯಿಂದ ನೋವು ತಿಂದಿರುವ ಯುವತಿಯರ ಸಮಕಾಲೀನ ವಾಸ್ತವ ಸ್ಥಿತಿಗಳು ಮತ್ತು ಸಂಘರ್ಷಗಳನ್ನು ದಾಖಲಿಸಲು ಈ ಅಧ್ಯಯನ ಪ್ರಯತ್ನಿಸಿದೆ. ಈ ವಿವರಣೆಗಳು ಅಗತ್ಯಗಳಲ್ಲಿರುವ ಭಿನ್ನತೆಯನ್ನು ಸ್ಪಷ್ಟವಾಗಿ ತೋರಿಸುತ್ತವೆ. ಜೊತೆಗೆ ಕರ್ನಾಟಕದ ದಲಿತ ಮಹಿಳೆಯರು ತಮ್ಮ ಹಕ್ಕುಗಳನ್ನು ದಕ್ಕಿಸಿಕೊಳ್ಳಲು ನಡೆಸಿದ ಸೂಕ್ಷ್ಮ ಪ್ರಯತ್ನಗಳ ಮೇಲೆ ಬೆಳಕು ಚೆಲ್ಲುತ್ತೆ.

ಬೇರೆ ಬೇರೆ ಅನುಭವಗಳನ್ನು ದಾಖಲಿಸುತ್ತಲೇ ವ್ಯವಸ್ಥಿತ ಅಸಮಾನತೆಯಿಂದ ದಲಿತ ಯುವತಿಯರು ಹೇಗೆ ಪೆಟ್ಟು ತಿಂದಿದ್ದಾರೆ ಎನ್ನುವ ಚಿತ್ರಣ ನೀಡಲು ಯತ್ನಿಸಿದೆ. ದಲಿತ ಯುವತಿಯರ ಸಾಮಾಜಿಕ–ಆರ್ಥಿಕ ಸ್ಥಿತಿಗತಿ ಮೇಲೆ, ಅವರ ಶಿಕ್ಷಣ, ವೃತ್ತಿ ಮತ್ತು ಮದುವೆಯ ಕನಸುಗಳ ಮೇಲೆ ಹಳೆ ರೂಪದ ಶೋಷಣೆ ಮತ್ತು ಹೊಸ ಕಾಲದ ಶ್ರೇಣೀಕೃತ ವ್ಯವಸ್ಥೆಗಳು ಹೇಗೆ ಪರಿಣಾಮ ಬೀರುತ್ತಿದೆ ಎಂಬ ಚಿತ್ರಣ ನೀಡಲು ಯತ್ನಿಸಿದೆ. ದಲಿತ ಯುವತಿಯರ ಪ್ರಬಲ ಸಾಮರ್ಥ್ಯ, ಅವರು ಸವಾಲುಗಳನ್ನು ಎದುರಿಸಿ ನಿಲ್ಲುವ ಪರಿ ಮತ್ತು ಅನ್ಯಾಯದ ವಿರುದ್ಧ ಹೋರಾಡುವಾಗ ಅವರು ಎದುರಿಸುವ ಮಿತಿಗಳನ್ನೂ ಗುರುತಿಸಿದೆ.

ಮುಂದುವರಿಯುತ್ತಾ, ಈ ಸಂಶೋಧನೆಯು ನಮ್ಮ ವಿಶ್ಲೇಷಣೆಯಲ್ಲಿ ಹುಟ್ಟಿರುವ ಪ್ರತಿಯೊಂದು ವಿಚಾರದ ಕುರಿತು ಮತ್ತಷ್ಟು ಸಂಶೋಧನೆಯ ಅಗತ್ಯವಿದೆ ಮತ್ತು ದಲಿತ ಮಹಿಳೆಯರು ತಮ್ಮ ಕನಸುಗಳನ್ನು ನನಸು

ಮಾಡಿಕೊಳ್ಳುವಂತೆ ಮಾಡಲು ಸರ್ಕಾರ ಮತ್ತು ಸರ್ಕಾರೇತರ ಸಂಘಟನೆಗಳು ಕಾರ್ಯಕ್ರಮಗಳನ್ನು ರೂಪಿಸಬೇಕು ಎನ್ನುವುದನ್ನು ತೋರಿಸಿದೆ.

## ಗ್ರಂಥಋಣ


- "Dalit Women-Vanguard of an Alternative Politics in India"- Edited By- S. Anandhi, Karin Kapadia
- S. Anandhi and Karin Kapadia(Eds.) Dalit women as the vanguard of alternative politics. New York: Routledge
- "ಅಮರ್ತ್ಯಸೇನ್ ಅಭಿವೃದ್ಧಿ ಅಧ್ಯಯನಗಳು", ಟಿ ಆರ್ ಚಂದ್ರಶೇಖರ, ಕ್ರೈಸ್ಟ್ ಕಾಲೇಜು, ಬೆಂಗಳೂರು–1999.
- "ಉನ್ನತ ಶಿಕ್ಷಣ ಮತ್ತು ಸುಧಾರಣೆಗಳ ಸಮಯ", ಮೇರಿ ಜಾನ್, (Reference: Mary John-Higher Education and the time of Reforms)
- "ಕರ್ನಾಟಕದಲ್ಲಿನ ಮಹಿಳೆಯರ ಆರೋಗ್ಯದ ಸ್ಥಿತಿಗತಿ, ಸಮಸ್ಯೆಗಳು ಹಾಗೂ ಭವಿಷ್ಯದ ಅಗತ್ಯತೆಗಳು, ಶೆಟ್ಟರ ಸಮಾಜ, ಸಂಸ್ಕೃತಿ, ಸಾಹಿತ್ಯ ಪ್ರಕಾಶನ, ಹುಬ್ಬಳ್ಳಿ–2006.
- "ಕನ್ನಡ ಸಾಹಿತ್ಯ–ಸಂಸ್ಕೃತಿ ಏಕರೂಪಿತನದ ಅಪಕಲ್ಪನೆಗಳು" (ಲೇಖನ– ಭಿನ್ನತೆಯ ಜಾಡು ಹಿಡಿದು), ಡೊಮಿನಿಕ್.ಡಿ, ಪ್ರಗತಿ ಪುಸ್ತಕ ಮಾಲೆ 31, ಬೆಂಗಳೂರು–2008
- "ದಲಿತ ಮಹಿಳೆ ಸಮಸ್ಯೆಗಳು ಸವಾಲುಗಳು", ಅನುಸೂಯ ಕಾಂಬಳೆ, ಸಂವಾದ ಪತ್ರಿಕೆ, ಏಪ್ರಿಲ್ 2012, ಬೆಂಗಳೂರು.
- "ದಲಿತ ಮಹಿಳಾ ಸಂಕಥನ", ನೇತ್ರಾವತಿ ಕೆ.ವಿ, ಕನ್ನಡ ವಿಶ್ವವಿದ್ಯಾಲಯ, ಹಂಪಿ–2010.

- "ನೀರದಾರಿ ದಲಿತ ಮಹಿಳಾ ಪ್ರಜ್ಞೆ ವಿಭಿನ್ನ ನೆಲೆಗಳಿಂದ", ದು:ಸರಸ್ವತಿ, ಕವಿಪ್ರಕಾಶನ, ಬೆಂಗಳೂರು–2014

- "ನಿರ್ಣಯ ಪ್ರಕ್ರಿಯೆಯಲ್ಲಿ ಚುನಾಯಿತ ಮಹಿಳೆಯರ ಪಾತ್ರ", ಮಂಟಪ ಮಾಲೆ, ಮೀನಾಕ್ಷಿ, 176, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ–2010.

- "ಮಹಿಳಾ ಅಧ್ಯಯನ ಸಮಾಜಶಾಸ್ತ್ರೀಯ ದೃಷ್ಟಿಕೋನ", ಸುಧಾ ಸೀತಾರಾಮನ್, ಸ್ತ್ರೀಲೇಖ ಪ್ರಕಟಣೆ, ಬೆಂಗಳೂರು, 2008.

- "ಮಹಿಳೆಯರ ಮೇಲಾಗುತ್ತಿರುವ ದೌರ್ಜನ್ಯಗಳು", ವೀಣಾ ಸಂಕನಗೌಡರ, ಪ್ರಸಾರಾಂಗ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ–1994

- "ಮಹಿಳಾ ಸಬಲೀಕರಣದ ನೆಲೆಗಳು", ಮಹಿಳಾ ಅಧ್ಯಯನ, ಅರವಿಂದ ಚೊಕ್ಕಾಡಿ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ– 2009.

- "ಮಹಿಳೆ ಮತ್ತು ಸಮೃದ್ಧಿ ನೆಲೆಗಳು", ಯಮನೂರಪ್ಪ ಅಣ್ಣಿಗೇರಿ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ–2010.

- "ಮುಸ್ಲಿಂ ವುಮೆನ್ ಇನ್ ಸ್ಲಂ ಏ ಸೊಸಿಯಾಲಾಜಿಕಲ್ ಸ್ಟಡಿ", ನಸೀಮಾ ಭಾನು ಖಲಾಸಿ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ–2008.

- "ಮಾಧ್ಯಮ ಮತ್ತು ಮಹಿಳೆ", ಕಲಾವತಿ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ–2010.

- "ಮಹಿಳೆ ಶೊಷಣೆಯ ನೆಲೆಗಳು", ನೀಲಾ ಕೆ, ಗುಲ್ಬರ್ಗ ವಿಶ್ವವಿದ್ಯಾಲಯ, ಗುಲ್ಬರ್ಗ–2001.

- ಸಂದರ್ಶನ: ಕೋಟಿಗಾನಹಳ್ಳಿ ರಾಮಯ್ಯ

- "ಸಂಘಟಿತ ಮತ್ತು ಅಸಂಘಟಿತ ಕ್ಷೇತ್ರಗಳಲ್ಲಿ ಮಹಿಳೆ", ಛಾಯಾ ದೇವಾಂಕರ್, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ–2010.

- **“**ಸ್ಟೇಟಸ್ ಅಫ್ ವಿಡ್ಸೊ ಇನ್ ರೂರಲ್ ಇಂಡಿಯಾ: ಒಂದು ಸಮಾಜಶಾಸ್ತ್ರೀಯ ಅಧ್ಯಯನ**”** ಶಾಂತಾ ಭಂಗಾರಿಯ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ–2008.
- **“**ಹಾಲಕ್ಕಿ ಮಹಿಳೆಯರ ಆರ್ಥಿಕ ಪರಿವರ್ತನೆಯ ನೆಲೆಗಳು ಒಂದು ಅಧ್ಯಯನ, ಸಂಗೀತ ಗಾಂವಕರ, ಪಿಎಚ್.ಡಿ ಮಾಹಾಪ್ರಬಂಧ, ಕನ್ನಡ ವಿಶ್ವವಿದ್ಯಾಲಯ, ಹಂಪಿ–2009.